ದೆಹಲಿ ಕರ್ನಾಟಕ ಸಂಘದ

# ಅಭಿಮತ

ಮಾರ್ಚ್ 2024
ಬೆಲೆ ರೂ.1



**2024-26ರ ಅವಧಿಯ ಸಂಘದ ನೂತನ ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು ಮತ್ತು ಸದಸ್ಯರು**



ರಾಷ್ಟ್ರಪತಿಗಳಿಂದ ರಾಜ್ಯಸಭೆಗೆ ನಾಮ ನಿರ್ದೇಶನಗೊಂಡ ಪದ್ಮಭೂಷಣ ಶ್ರೀಮತಿ ಡಾ. ಸುಧಾ ಮೂರ್ತಿ ಅವರು ಪ್ರಮಾಣವಚನ ಸ್ವೀಕರಿಸುತ್ತಿರುವುದು



ಫೆಬ್ರವರಿ 25, 2023ರ ಸಂಘದ ಅಮೃತ ಮಹೋತ್ಸವ 'ಬಾರಿಸು ಕನ್ನಡ ಡಿಂಡಿಮವ' ಕಾರ್ಯಕ್ರಮದಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ- ಸವಿನೆನಪು






ಕರ್ನಾಟಕ ಸರ್ಕಾರದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಕಮಿಷನರ್ ಶ್ರೀ ದಯಾನಂದ ಕೆ.ಎ., ಐ.ಎ.ಎಸ್. ಅವರಿಗೆ ದೆಹಲಿ ಕರ್ನಾಟಕ ಸಂಘಕ್ಕೆ 25 ಕೋಟಿ ರೂಪಾಯಿಗಳ ಅನುದಾನ ನೀಡುವಂತೆ ಕೋರಿ ಹಿಂದಿನ ಕಾರ್ಯಕಾರಿ ಸಮಿತಿ ನಿರ್ಧಾರದಂತೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಈ ಪ್ರಸ್ತಾವನೆಗೆ ಇಲಾಖೆಯ ಮಾನ್ಯ ಮಂತ್ರಿಗಳು ಒಪ್ಪಿಗೆಯನ್ನು ನೀಡಿದ್ದು, ರಾಜ್ಯದ ಬಜೆಟ್‌ನಲ್ಲಿ ಸೇರಿಸಿದ್ದಾರೆಂದು ಮಾಹಿತಿ ಲಭ್ಯವಾಗಿದೆ. ಇದರ ಸಲುವಾಗಿ ದೆಹಲಿ ಕರ್ನಾಟಕ ಸಂಘದ ನಿರೀಕ್ಷಣೆ ಮಾಡಲು ಇಲಾಖೆಯ ಸಹ ನಿರ್ದೇಶಕರಾದ ಶ್ರೀ ಪ್ರದೀಪ್ ಮತ್ತು ಸಮಾಜ ಕಲ್ಯಾಣ ಇಲಾಖೆಯ ಸಹ ನಿರ್ದೇಶಕರು ಸಂಘಕ್ಕೆ ದಿನಾಂಕ 12.02.2024 ರಂದು ಭೇಟಿ ನೀಡಿ ಸಾಂಸ್ಕೃತಿಕ ಸಮುಚ್ಚಯ ಮತ್ತು ಇಲ್ಲಿರುವ ಸೌಕರ್ಯ ಸವಲತ್ತುಗಳ ವೀಕ್ಷಣೆ ಮಾಡಿದ್ದಾರೆ. ಈ ಸಂದರ್ಭದಲ್ಲಿ ಸಂಘದ ಮಾಜಿ ಅಧ್ಯಕ್ಷರಾದ ಡಾ. ಪುರುಷೋತ್ತಮ ಬಿಳಿಮಲೆ ಅವರ ಸಮಕ್ಷಮದಲ್ಲಿ ಅವರುಗಳನ್ನು ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ ಹಾಗೂ ಖಜಾಂಚಿಗಳಾದ ಶ್ರೀಮತಿ ಆಶಾಲತಾ ಎಂ. ಅವರು ಅಭಿನಂದಿಸಿದ ದೃಶ್ಯಗಳು.



**ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳ ಪ್ರಿನ್ಸಿಪಲ್ ಸೆಕ್ರೆಟರಿ ಆಗಿರುವ ರಾಜ್ಯದ ಹಿರಿಯ ಐಎಎಸ್ ಅಧಿಕಾರಿಗಳಾದ ಶ್ರೀ ಮಂಜುನಾಥ ಪ್ರಸಾದ್ ಎನ್ ಅವರು ದಿ. 18.02.2024 ರಂದು ತಮ್ಮ ಧರ್ಮಪತ್ನಿ ಅವರೊಂದಿಗೆ ದೆಹಲಿ ಕರ್ನಾಟಕ ಸಂಘಕ್ಕೆ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಸಂಘದ ಕಾರ್ಯ ಚಟುವಟಿಕೆಗಳ ವಿವರಗಳನ್ನು ಅವರಿಗೆ ತಿಳಿಸಿ, ಸಂಘದ ಸ್ಮರಣಸಂಚಿಕೆ, ಕ್ಯಾಲೆಂಡರ್ ಹಾಗು ಮುಖವಾಣಿ ಪತ್ರಿಕೆ ಅಭಿಮತ ನೀಡಿ ಅವರನ್ನು ಅಭಿನಂದಿಸಿದ ಕ್ಷಣ.**

## 2023ನೇ ಸಾಲಿನ 'ಜ್ಞಾನಪೀಠ ಪ್ರಶಸ್ತಿ' ಪುರಸ್ಕೃತರು



**ಶ್ರೀ ಗುಲ್ಜಾರ್**
**[ಉರ್ದು ಭಾಷೆ-ಸಮಗ್ರ ಸಾಹಿತ್ಯಕ್ಕೆ]**



**ಜಗದ್ಗುರು**
**ಶ್ರೀ ರಾಮಭದ್ರಾಚಾರ್ಯ**
**[ಸಂಸ್ಕೃತ ಭಾಷೆ-ಸಮಗ್ರ ಸಾಹಿತ್ಯಕ್ಕೆ]**

ಭಾರತದ ಸಾಹಿತಿಗಳಿಗೆ ಸಲ್ಲುವ ಅತ್ಯಂತ ಪ್ರತಿಷ್ಠಿತ ಪುರಸ್ಕಾರವಾದ **ಜ್ಞಾನಪೀಠ** ಪ್ರಶಸ್ತಿಯನ್ನು ಭಾರತದ ಸಂವಿಧಾನದ 8ನೇ ಅನುಸೂಚಿಗಳಲ್ಲಿ ಉಲ್ಲೇಖವಾಗಿರುವ 22 ಭಾಷೆಗಳಿಗೆ ಅತ್ಯುತ್ತಮ ಸಾಹಿತ್ಯ ಕೃತಿಯನ್ನು ಅಥವಾ ಸಮಗ್ರ ಸಾಹಿತ್ಯದ ಕೊಡುಗೆಯನ್ನು ಪರಿಗಣಿಸಿ ಭಾರತೀಯ ನಾಗರೀಕರಿಗೆ ನೀಡಲಾಗುತ್ತಿದೆ. 1961ರಲ್ಲಿ ಸ್ಥಾಪಿತವಾದ ಭಾರತದ ಅತ್ಯುನ್ನತ ಸಾಹಿತ್ಯ ಪುರಸ್ಕಾರಕ್ಕೆ ಈ ವರ್ಷದ ಪ್ರಶಸ್ತಿ ಪುರಸ್ಕೃತರನ್ನೂ ಸೇರಿ ಈವರೆಗೆ ಒಟ್ಟು 64ಸಾಧಕರು ಭಾಜನರಾಗಿದ್ದಾರೆ. ಅವರಲ್ಲಿ ಕನ್ನಡ ಭಾಷೆ ಸಾಹಿತ್ಯಕ್ಕಾಗಿ ಕರ್ನಾಟಕದ ಎಂಟು ಅನರ್ಘ್ಯ ರತ್ನಗಳಿಗೆ ಈ ಪ್ರಶಸ್ತಿಯನ್ನು ಈ ಹಿಂದೆ ನೀಡಿರುವುದು ಎಲ್ಲಾ ಕನ್ನಡಿಗರಿಗೆ ಅತ್ಯಂತ ಹೆಮ್ಮೆಯ ವಿಷಯ.

1967ರಲ್ಲಿ ರಾಷ್ಟ್ರಕವಿ ಕುವೆಂಪು ಅವರಿಗೆ 'ಶ್ರೀರಾಮಾಯಣ ದರ್ಶನಂ' ಕೃತಿಗಾಗಿ, 1973ರಲ್ಲಿ 'ನಾಕುತಂತಿ' ಕೃತಿಗಾಗಿ ವರಕವಿ ದ.ರಾ. ಬೇಂದ್ರೆ ಅವರಿಗೆ, 1977ರಲ್ಲಿ 'ಮೂಕಜ್ಜಿಯ ಕನಸುಗಳು' ಕೃತಿಗಾಗಿ ಡಾ. ಕೆ. ಶಿವರಾಮ ಕಾರಂತ ಅವರಿಗೆ, 1983ರಲ್ಲಿ 'ಚಿಕ್ಕವೀರ ರಾಜೇಂದ್ರ' ಕೃತಿಗಾಗಿ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರಿಗೆ ಹಾಗೂ ಸಮಗ್ರ ಸಾಹಿತ್ಯಕ್ಕಾಗಿ 1990ರಲ್ಲಿ ಡಾ. ಯು.ಆರ್. ಅನಂತಮೂರ್ತಿ ಅವರಿಗೆ, 1998ರಲ್ಲಿ ಶ್ರೀ ಗಿರೀಶ್ ಕಾರ್ನಾಡ್ ಅವರಿಗೆ ಮತ್ತು 2010ರಲ್ಲಿ ಡಾ. ಚಂದ್ರಶೇಖರ ಕಂಬಾರ ಅವರಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿರುವುದು ಕರ್ನಾಟಕವು ದೇಶದಲ್ಲೇ ಅತೀ ಹೆಚ್ಚು ಜ್ಞಾನಪೀಠ ಪ್ರಶಸ್ತಿ ಪಡೆದ ರಾಜ್ಯವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

2023ರ ಸಾಲಿನಲ್ಲಿ 'ಜ್ಞಾನಪೀಠ' ಪ್ರಶಸ್ತಿಗೆ ಭಾಜನರಾದ ಉರ್ದು ಕವಿ, ಗೀತ ರಚನೆಕಾರ, ಲೇಖಕ, ಚಿತ್ರಕಥೆಗಾರ ಮತ್ತು ನಿರ್ದೇಶಕ ಶ್ರೀ ಗುಲ್ಜಾರ್ ಅವರಿಗೆ ಹಾಗೂ ಚಿತ್ರಕೂಟದ ತುಳಸೀಪೀಠದ ಸಂಸ್ಥಾಪಕರೂ, ಬಾಲ್ಯದಲ್ಲಿ ದೃಷ್ಟಿ ಕಳೆದುಕೊಂಡು ಕುರುಡರಾಗಿದ್ದರೂ ಸಂಸ್ಕೃತ ಭಾಷೆಯಲ್ಲಿ ಪಾಂಡಿತ್ಯ ಪಡೆದು ಸಾಹಿತ್ಯಕಾರರಾದ ಜಗದ್ಗುರು ಶ್ರೀ ರಾಮಭದ್ರಾಚಾರ್ಯ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಹಾಗೂ ಅಭಿಮತ ಓದುಗರ ಪರವಾಗಿ ಹೃದಯಪೂರ್ವಕ ಅಭಿನಂದನೆಗಳು.!

ಅಭಿಮತ
ದೆಹಲಿ ಕರ್ನಾಟಕ ಸಂಘದ
ಸಂಪುಟ 34 । ಸಂಚಿಕೆ 6
ಮಾರ್ಚ್ 2024

**ಅಭಿಮತ ಸಂಪಾದಕ ಮಂಡಳಿ**

ಪ್ರಧಾನ ಸಂಪಾದಕ
ಕೆ.ಎಸ್. ಮೂರ್ತಿ
ಸದಸ್ಯರು
ಸರವು ಕೃಷ್ಣ ಭಟ್
ಯಲ್ಲಾಲಿಂಗ ಕೊಪ್ಪದ
ತಿಮ್ಮಪ್ಪ ಜಿ.ಆರ್.
ಎಸ್. ರಮೇಶ

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ–2024–26**

ಅಧ್ಯಕ್ಷರು
ಸಿ.ಎಂ. ನಾಗರಾಜ
9811325440
ಉಪಾಧ್ಯಕ್ಷರು
ವಸಂತ ಶೆಟ್ಟಿ ಬೆಳ್ಳಾರೆ
9958697823
ಪೂಜಾ ಪಿ. ರಾವ್
9810882498
ಪ್ರಧಾನ ಕಾರ್ಯದರ್ಶಿ
ರಾಧಾಕೃಷ್ಣ
9818252183
ಖಜಾಂಚಿ
ಆಶಾಲತಾ ಎಂ.
9891249149
ಜಂಟಿ ಕಾರ್ಯದರ್ಶಿಗಳು
ನಾರಾಯಣ ಜಿ.
9868393978
ಅಶ್ವಿನಿ ಜಿ.ಎಸ್.
9036235665
ಸಮಿತಿ ಸದಸ್ಯರು
ಡಾ. ವೆಂಕಟಾಚಲ ಜಿ. ಹೆಗಡೆ
9312712476
ಕೆ.ಎಸ್. ಮೂರ್ತಿ
9871140222
ಪ್ರಭಾಕರ ಮಡ್ಡಿತೋಟ್
9910091978
ನವೀನ್ ಕುಮಾರ್ ವಿ.
9871945819
ಅರುಣ್ ಸಿ.ಎಸ್.
9741282211
ಜಯಶ್ರೀ ಬಸವರಾಜು ಜಿ.ಕೆ.
9560760341
ಶುಭಾ ದೇವಿಪ್ರಸಾದ್
9319762969
ಮಾಲಿನಿ ಪ್ರಹ್ಲಾದ
9910269085
ಎನ್.ಆರ್. ಶ್ರೀನಾಥ
7836954402
ಶಶಿಕಾಂತ ಪಿ. ಪಾಟೀಲ್
9650182413

## ಸಂಪಾದಕೀಯ ಮನದಾಳದಿಂದ...

### ಹೆಣ್ಣು ಕುಟುಂಬದ ಕಣ್ಣು , ಮಹಿಳೆ ಅಬಲೆಯಲ್ಲ, ಸಬಲೆ
### ಅಕ್ಷರ ಕಲಿತ ನಾರಿ ದೇಶದ ಪ್ರಗತಿಗೆ ದಾರಿ, ಸ್ತ್ರೀ ಶಕ್ತಿಗೆ ವಂದನೆ

ಆತ್ಮೀಯ ಓದುಗ ಬಂಧುಗಳೇ,

ದೆಹಲಿ ಎನ್‌ಸಿಆರ್ ನ ಎಲ್ಲಾ ಗೌರವಾನ್ವಿತ ಮಹಿಳೆಯರಿಗೆ ಹಾಗು ರಾಜ್ಯದ, ದೇಶದ ಮತ್ತು ವಿಶ್ವದ ಎಲ್ಲಾ ನಾರಿಮಣಿಗಳಿಗೆ ವಿಶ್ವ ಮಹಿಳಾ ದಿನಾಚರಣೆ 2024ರ ಹೃದಯ ಪೂರ್ವಕ ಅಭಿನಂದನೆಗಳು. ಸಮಸ್ತ ಜನತೆಗೆ ಮಹಾಶಿವರಾತ್ರಿಯ ಭಕ್ತಿಪೂರ್ವಕ ಶುಭಾಶಯಗಳು.

ಪ್ರತಿ ವರ್ಷ ಮಾರ್ಚ್ 8ರಂದು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ವಿಶ್ವದಾದ್ಯಂತ ಆಚರಿಸಲಾಗುತ್ತದೆ. ಮಹಿಳೆಯರ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಕ್ಷೇತ್ರಗಳಲ್ಲಿ ಸಾಧನೆ, ಸಮಾಜಕ್ಕೆ ಅವರು ನೀಡಿರುವ ಕೊಡುಗೆಗಳನ್ನು ಸ್ಮರಿಸಿ ಸಂಭ್ರಮಿಸುವ ದಿನವಿದು. ಇದರ ಮುಖ್ಯ ರೂವಾರಿ ಕ್ಲಾರಾ ಝೆಟ್ ಕಿನ್. 1909ರಲ್ಲಿ ಅಮೇರಿಕಾದ ಸಿದ್ಧ ಉಡುಪುಗಳ ಕಾರ್ಖಾನೆಗಳಲ್ಲಿ ಮಹಿಳೆಯರು ನಡೆಸಿದ ಮುಷ್ಕರದಿಂದ ಸ್ಫೂರ್ತಿಗೊಂಡ ಕ್ಲಾರಾ ಝೆಟ್ ಕಿನ್ ಅವರ ಅಧ್ಯಕ್ಷತೆಯಲ್ಲಿ 1910ರಲ್ಲಿ ಕೋಪನ್‌ಹೇಗನ್‌ನಲ್ಲಿ ನಡೆದ ಮಹಿಳಾ ಸಮ್ಮೇಳನದಲ್ಲಿ ಮಾರ್ಚ್ 8 ಅನ್ನು ಮಹಿಳಾ ದಿನವನ್ನಾಗಿ ಆಚರಿಸಬೇಕೆಂದು ನಿರ್ಣಯವಾಯಿತು. 1911 ರಿಂದ ಪ್ರತಿ ವರ್ಷ ಆ ದಿನವನ್ನು ವಿಶ್ವ ಮಹಿಳಾ ದಿನವನ್ನಾಗಿ ಭಾರತವೂ ಸೇರಿದಂತೆ ವಿಶ್ವದೆಲ್ಲೆಡೆ ಆಚರಣೆ ಮಾಡಲಾಗುತ್ತಿರುವುದನ್ನು ಸ್ಮರಿಸಬಹುದಾಗಿದೆ.

ಮಹಿಳೆಯು ಒಬ್ಬ ತಾಯಿಯಾಗಿ, ಮಗಳಾಗಿ, ಸೋದರಿಯಾಗಿ, ಅತ್ತೆಯಾಗಿ, ಸೊಸೆಯಾಗಿ, ಮಡದಿಯಾಗಿ ಕುಟುಂಬದ ಪ್ರತಿಯೊಬ್ಬರ ಸುಖ ದುಃಖಗಳಲ್ಲಿ ಭಾಗಿಯಾಗಿ, ತನ್ನ ಸಂಸಾರದ ಏಳಿಗೆಯಲ್ಲಿ ಶ್ರಮಿಸುತ್ತಾ, ವಿವಿಧ ಕ್ಷೇತ್ರಗಳಲ್ಲಿ ವಿಭಾಗಗಳಲ್ಲಿ, ಸಂಘ ಸಂಸ್ಥೆಗಳಲ್ಲಿ ತೊಡಗಿಸಿಕೊಂಡು ಸಮಾಜದ ತನ್ಮೂಲಕ ರಾಷ್ಟ್ರದ ಪ್ರಗತಿಯಲ್ಲಿ ತನ್ನದೇ ಆದ ಕೊಡುಗೆ ನೀಡುತ್ತಿದ್ದಾಳೆ. ಕೈಗಾರಿಕೆ, ವಾಣಿಜ್ಯ, ಬ್ಯಾಂಕಿಂಗ್, ವೈಮಾನಿಕ, ಶಿಕ್ಷಣ, ವೈದ್ಯಕೀಯ, ಆಡಳಿತ, ಬಾಹ್ಯಾಕಾಶ, ನ್ಯಾಯಾಂಗ, ವೈಜ್ಞಾನಿಕ, ಇಂಜಿನಿಯರಿಂಗ್, ಉದ್ಯಮ, ಸಮಾಜ ಸೇವೆ, ಸಂಶೋಧನೆ, ಕ್ರೀಡೆ, ಸಾಹಿತ್ಯ, ಕಲೆ, ಸಿನೆಮಾ, ಅಭಿನಯ ಮುಂತಾದ ಕ್ಷೇತ್ರಗಳಲ್ಲಿ ಮಹಿಳೆಯರು ಪುರುಷರಿಗೆ ಸಮಾನವಾಗಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಮಹಿಳೆಯರು ಈ ಹಿಂದೆ ಹಾಗೂ ಪ್ರಸ್ತುತ ಉನ್ನತ ಸ್ಥಾನದಲ್ಲಿರುವುದು ಇದಕ್ಕೆ ಉತ್ತಮ ನಿದರ್ಶನ ನಮ್ಮ ಈಗಿನ ರಾಷ್ಟ್ರಪತಿಯಾಗಿ ಶ್ರೀಮತಿ ದ್ರೌಪದಿ ಮುರ್ಮು, ವಿತ್ತ ಸಚಿವೆಯಾಗಿ ಶ್ರೀಮತಿ ನಿರ್ಮಲಾ ಸೀತಾರಾಮನ್, ಅವರು ಕಾರ್ಯ ನಿರ್ವಹಿಸುತ್ತಿದ್ದಾರೆ. ಅಲ್ಲದೇ ಈ ಹಿಂದೆ ಪ್ರಧಾನಮಂತ್ರಿಯಾಗಿ ಶ್ರೀಮತಿ ಇಂದಿರಾ ಗಾಂಧಿ ದೇಶದ ಸೇವೆ ಸಲ್ಲಿಸಿದ್ದಾರೆ. ಹಲವು ಮಹಿಳೆಯರು ವಿವಿಧ ರಾಜ್ಯಗಳ ಮುಖ್ಯಮಂತ್ರಿ ಹಾಗೂ ರಾಜ್ಯಪಾಲರಾಗಿದ್ದಾರೆ. ಇನ್ನು, ಕ್ರೀಡಾ ಕ್ಷೇತ್ರದಲ್ಲಿ ಪಿ.ವಿ. ಸಿಂಧು, ಮೇರಿಕಾಮ್, ಸೈನಾ ನೇಹ್‌ವಲ್, ಸಾನಿಯಾ ಮಿರ್ಜಾ, ಮಿಥಾಲಿ ರಾಜ್, ಸಾಕ್ಷಿ ಮಲಿಕ್, ದೀಸಾ ಕರಮಾಕರ್, ಹೀಮಾದಾಸ್, ದೀಪಿಕಾ ಕುಮಾರಿ, ಅಂಜು ಬಾಬಿ ಜಾರ್ಜ್ ದೇಶಕ್ಕೆ ಕೀರ್ತಿ ತಂದಿದ್ದಾರೆ. ಜಸ್ಟೀಸ್ ಸುಜಾತ ಮನೋಹರ್, ಜಸ್ಟೀಸ್ ಬಿ.ವಿ. ನಾಗರತ್ನ, ಜಸ್ಟಿಸ್ ಫಾತಿಮಾ ಬೀವಿ ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿದ್ದಾರೆ, ವೀರ ವನಿತೆಯರಾದ ಕಿತ್ತೂರು ಚೆನ್ನಮ್ಮ, ರಾಣಿ ಅಬ್ಬಕ್ಕ, ಝಾನ್ಸಿ ರಾಣಿ ಲಕ್ಷ್ಮೀಬಾಯಿ, ಕಮಲಾದೇವಿ ಚಟ್ಟೋಪಾಧ್ಯಾಯ ಮುಂತಾದವರು ದೇಶದ ಸ್ವಾತಂತ್ರ್ಯಕ್ಕೆ ಹೋರಾಡಿದ್ದಾರೆ. ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತೀಯ ಮೂಲದ ಕಲ್ಪನಾ ಚಾವ್ಲ ಮತ್ತು ಸುನಿತಾ ವಿಲಿಯಮ್ಸ್ ಅವರ ಸಾಧನೆ ಅಸಾಧಾರಣ. ಮದರ್ ಥೆರೆಸಾ ಅವರಿಗೆ ನೋಬೆಲ್ ಪ್ರಶಸ್ತಿ, ಇಂದಿರಾ ಗಾಂಧಿ, ಅರುಣ ಅಸಫ್ ಅಲಿ, ಎಂ.ಎಸ್. ಸುಬ್ಬಲಕ್ಷ್ಮೀ ಹಾಗೂ ಲತಾ ಮಂಗೇಶ್ಕರ್ ಅವರಿಗೆ ಭಾರತ ರತ್ನ ಪುರಸ್ಕಾರ ದೊರೆತಿರುವುದು ಭಾರತೀಯರೆಲ್ಲರಿಗೂ ಗೌರವದ ವಿಷಯ.

ಭಾರತೀಯ ಮೂಲದ ಮಹಿಳೆಯರಲ್ಲಿ ಇಂದ್ರ, ನೂಯಿ, ನೈನಾಲಾಲ್ ಕಿದ್ವಾಯಿ, ಪದ್ಮಶ್ರೀ ವಾರಿಯರ್ ಕೀರ್ತಿಗ ರೆಡ್ಡಿ ಮುಂತಾದವರು ಬಹು ರಾಷ್ಟ್ರೀಯ ಕಂಪನಿಯಲ್ಲಿ ಹಾಗೂ ಸೌಮ್ಯ ಸ್ವಾಮಿನಾಥನ್ WHO ನಲ್ಲಿ ಉನ್ನತ ಹುದ್ದೆಯನ್ನು ಅಲಂಕರಿಸಿದ್ದರಲ್ಲದೆ, ಅನೇಕ ಮಹಿಳೆಯರು ಭಾರತದ ಪ್ರತಿಷ್ಠಿತ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಪ್ರಮುಖ ಸ್ಥಾನದಲ್ಲಿರುವುದು ನಾರಿಶಕ್ತಿಯ ಹೆಮ್ಮೆಯ ಸಾಧನೆ. ಕುವೆಂಪು ಅವರು ಹೇಳಿದಂತೆ ಹೆಣ್ಣು ಕೇವಲ ಮಾನುಷಿಯಲ್ಲ; ಅಬಲೆಯೂ ಅಲ್ಲ; ಅವಳೊಂದು ಮಹಾಶಕ್ತಿ. ಆಧ್ಯಾತ್ಮಿಕವಾಗಿ ಪುರುಷನಿಗಿಂತ ಸ್ತ್ರೀ ಹೆಚ್ಚು ವಿಕಾಸಗೊಂಡಿದ್ದಾಳೆಂಬುದು ರಾಷ್ಟ್ರಕವಿಯ ಭಾವನೆಯಾಗಿತ್ತು. ಅವರ ಅನೇಕ ಕೃತಿಗಳಲ್ಲಿ ಮಹಿಳೆಯರ ಬಗ್ಗೆ ಹೆಮ್ಮೆ, ಪ್ರೀತಿ ಮತ್ತು ಗೌರವವನ್ನು ವ್ಯಕ್ತಪಡಿಸಿದ್ದಾರೆ.

ಈ ವರ್ಷದ ವಿಶ್ವ ಮಹಿಳಾ ದಿನಾಚರಣೆಯ ಸಂದರ್ಭದಲ್ಲೇ ನಮ್ಮ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನಮ್ಮ ನಾಡಿನ ಹೆಮ್ಮೆಯ ಮಹಿಳೆ ಪದ್ಮಭೂಷಣ ಶ್ರೀಮತಿ ಡಾ. ಸುಧಾ ಮೂರ್ತಿ ಅವರನ್ನು ರಾಜ್ಯಸಭೆಗೆ ನಾಮ ನಿರ್ದೇಶನ ಮಾಡಿರುವುದು ಎಲ್ಲ ಕನ್ನಡಿಗರೂ ಸಂತಸದ ಸುದ್ದಿಯಾಗಿದ್ದು, ಡಾ. ಸುಧಾ ಮೂರ್ತಿ ಅಮ್ಮನವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಶುಭಾಶಯಗಳು. ಈ ವರ್ಷ ಭಾರತ ರತ್ನ ಪ್ರಶಸ್ತಿಗೆ ಭಾಜನರಾದ ಗಣ್ಯ ಮಾನ್ಯರಿಗೆ ಹಾಗೂ ರಾಜ್ಯಸಭೆಗೆ ಕರ್ನಾಟಕದಿಂದ ಚುನಾಯಿತರಾಗಿರುವ ನೂತನ ನಾಲ್ವರು ಸಂಸದರಿಗೆ, ಈ ಬಾರಿ ಜ್ಞಾನಪೀಠ ಪ್ರಶಸ್ತಿ ಪಡೆದಿರುವ ಉರ್ದುಕವಿ ಶ್ರೀ ಗುಲ್ಜಾರ್ ಹಾಗೂ ಸಂಸ್ಕೃತ ಸಾಹಿತಿ ಜಗದ್ಗುರು ಶ್ರೀ ರಾಮಭದ್ರಾಚಾರ್ಯ ಅವರಿಗೆ ಮತ್ತು ಕನ್ನಡ ಭಾಷೆಯ ಕೃತಿಗಾಗಿ ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಪುರಸ್ಕೃತರಾದ ಹಿರಿಯ ಕನ್ನಡ ಸಾಹಿತಿ ಶ್ರೀ ಲಕ್ಷ್ಮೀಶ ತೋಳ್ಪಾಡಿ ಅವರಿಗೆ ಅಭಿಮತ ಓದುಗರ ಪರವಾಗಿ ಗೌರವ ಅಭಿನಂದನೆಗಳು.

ರಾಜ್ಯಸಭಾ ಸೆಕ್ರೆಟರಿಯೇಟ್‌ನಲ್ಲಿ ಅಡಿಷನಲ್ ಸೆಕ್ರೆಟರಿಯಾಗಿ ನೇಮಕವಾಗಿರುವ ಹಿರಿಯ ದೆಹಲಿ ಕನ್ನಡಿಗರಾದ ಡಾ. ಕೆ.ಎಸ್. ಸೋಮಶೇಖರ್ ಅವರಿಗೆ ಹಾಗು ಸಿ.ಜಿ.ಎಚ್.ಎಸ್.ನ ಆಯುಷ್ ವಿಭಾಗದ ಹೆಚ್ಚುವರಿ ನಿರ್ದೇಶಕರಾಗಿ ನೇಮಕವಾಗಿರುವ ಆಯುರ್ವೇದ ತಜ್ಞರಾದ, ಹಿರಿಯ ದೆಹಲಿ ಕನ್ನಡಿಗ ಡಾ. ಅಶೋಕ ಎಂ.ಈಟಿ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು.

ಬಂಧುಗಳೇ, ಇತ್ತೀಚೆಗೆ ನಿಧನರಾದ ಹಿರಿಯ ಕನ್ನಡತಿ, ಸಂಘದ ಮಾಜಿ ಉಪಾಧ್ಯಕ್ಷೆ ಶ್ರೀಮತಿ ಸುಮಿತ್ರಾ ರಾವ್, ಆಜೀವ ಸದಸ್ಯರಾದ ಶ್ರೀಮತಿ ಶ್ಯಾಮಲಾ ಮನೋಹರ ರಾವ್ ಮತ್ತು ನೋಯ್ಡಾ ಜೆಎಸ್‌ಎಸ್ ಎ.ಇ.ಟಿ.ನ ಶ್ರೀ ಎ. ಉದಯ ಕುಮಾರ್ ಅವರ ಅಗಲಿಕೆ ದೆಹಲಿ ಕನ್ನಡಿಗರನ್ನು ದುಃಖ ತಪ್ತರನ್ನಾಗಿ ಮಾಡಿದೆ. ಅಗಲಿದ ಈ ಮೂರ್ವರೂ ಹಿರಿಯರಿಗೆ ಎಲ್ಲರ ಪರವಾಗಿ ಗೌರವಪೂರ್ವಕ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ.

ನಮ್ಮ ಸಂಘದ ಈವರೆಗಿನ ಏಕೈಕ ಮಹಿಳಾ ಅಧ್ಯಕ್ಷರಾಗಿ ಡಾ. ಸರೋಜಿನಿ ಮಹಿಷಿಯವರು ಸತತ 17 ವರ್ಷಗಳ ಕಾಲ ದೆಹಲಿ ಕನ್ನಡಿಗರಿಗೆ ನೀಡಿದ ಸೇವೆ, ಕೊಡುಗೆ ಸದಾ ಸ್ಮರಣೀಯ. ಈ ಬಾರಿ ಆರು ಮಹಿಳಾ ಪದಾಧಿಕಾರಿಗಳು ಮತ್ತು ಸದಸ್ಯರನ್ನೊಳಗೊಂಡ ನಮ್ಮ ನೂತನ ಕಾರ್ಯಕಾರಿ ಸಮಿತಿಯ ಅಡಿಯಲ್ಲಿ ಸಂಘದ ಕೆಲಸಗಳು ಪ್ರಗತಿಯಲ್ಲಿದ್ದು, ಈ ತಿಂಗಳು ಸಾಹಿತ್ಯ ಸಂಜೆ ಹಾಗೂ ಮಹಿಳಾ ದಿನಾಚರಣೆ ಅಂಗವಾಗಿ ಸ್ಥಳೀಯ ಮಹಿಳೆಯರಿಂದ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಕಳೆದ ಫೆಬ್ರವರಿ ತಿಂಗಳಿನಲ್ಲಿ ಸಂಘದಲ್ಲಿ ನಡೆದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘದ ಕನಕೋತ್ಸವ, ಪ್ರಧಾನಿಯವರು ಭಾಗಿಯಾದ ಅಮೃತ ಮಹೋತ್ಸವ ಕಾರ್ಯಕ್ರಮ ಜರುಗಿ ಒಂದು ವರ್ಷ ತುಂಬಿದ ಸಂದರ್ಭದಲ್ಲಿ ಆ ಕಾರ್ಯಕ್ರಮದ ಸವಿನೆನಪುಗಳ ದೃಶ್ಯಗಳು, ಯಕೃತ್ತು ಆರೋಗ್ಯ ಕುರಿತು ಲಿವರ್ ಟ್ರಾನ್ಸ್‌ಪ್ಲಾಂಟ್ ಸರ್ಜನ್ ಡಾ. ಜಗದೀಶ ಕೃಷ್ಣಮೂರ್ತಿ ಅವರ ವಿಶೇಷ ವೈದ್ಯಕೀಯ ಲೇಖನ, 'ಚಾವುಂಡರಾಯ' ನಾಟಕ ಪ್ರದರ್ಶನ ಕುರಿತ ಬರಹ, ಪದ್ಮಪ್ರಶಸ್ತಿ ಪುರಸ್ಕೃತರ ಕಿರು ಪರಿಚಯ, ಮಹಿಳಾ ದಿನಾಚರಣೆ ಅಂಗವಾಗಿ ವಕೀಲರಾದ ದೆಹಲಿ ಕನ್ನಡತಿ ಶ್ರೀಮತಿ ವೈಜಯಂತಿ ಗಿರೀಶ್ ಅವರ ವಿಶೇಷ ಲೇಖನ, ಇನ್ನಿತರ ಸಂಘ ಸಂಸ್ಥೆಗಳ ಕಾರ್ಯಕ್ರಮ ಮತ್ತು ಸಂಘಕ್ಕೆ ಗಣ್ಯರ ಭೇಟಿಯ ವರದಿ, ಶ್ರೀ ಜಯಪ್ರಕಾಶ್ ಪುತ್ತೂರು ಅವರ 'ದಶಕಗಳ ಸಾಹಿತ್ಯದ ಮೊಗಸಾಲೆಯಲ್ಲಿ' ಎಂಬ ಕೃತಿ ಅವಲೋಕನ ಹಾಗೂ ನಮ್ಮನ್ನಗಲಿದ ಶ್ರೀಮತಿ ಸುಮಿತ್ರಾ ರಾವ್, ಶ್ರೀಮತಿ ಶ್ಯಾಮಲಾ ಮನೋಹರ ರಾವ್ ಹಾಗು ಶ್ರೀ ಎ. ಉದಯ ಕುಮಾರ್ ಅವರಿಗೆ ಅರ್ಪಿಸುತ್ತಿರುವ ಶ್ರದ್ಧಾಂಜಲಿ ನುಡಿಗಳೊಂದಿಗೆ ಅಭಿಮತದ ಮಾರ್ಚ್ ತಿಂಗಳ ಈ ಸಂಚಿಕೆಯನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ.

ಆತ್ಮೀಯರೇ, ನಿಮ್ಮ ಓದುವಿಕೆ ಮತ್ತು ನಿಖರವಾದ ಅನಿಸಿಕೆ, ವಿಮರ್ಶೆ ಹಾಗೂ ರಚನಾತ್ಮಕ ಸುಧಾರಣಾ ಯೋಗ್ಯ ಸಲಹೆಗಳು ನಮ್ಮ ಸಂಘದ ಈ ಮುಖವಾಣಿ ಪತ್ರಿಕೆಯನ್ನು ಇನ್ನಷ್ಟು ಆಕರ್ಷಕವಾಗಿ ಹೆಚ್ಚಿನ ಮಾಹಿತಿ ವಿವರಗಳೊಂದಿಗೆ ಮತ್ತಷ್ಟು ವಿನೂತನವಾಗಿ ಹೊರತರಲು ನಮಗೆ ಪ್ರೇರಣೆ ಹಾಗೂ ಪ್ರೋತ್ಸಾಹದಾಯಕವಾಗಲಿದೆ.

**ಮುಂಬರುವ ಬಣ್ಣಗಳ ಸಂಭ್ರಮ–ಹೋಳಿ ಹಬ್ಬದ ಪ್ರೀತಿಪೂರ್ವಕ ಶುಭಾಶಯಗಳೊಂದಿಗೆ,**

**ಕೆ. ಶ್ರೀನಿವಾಸ ಮೂರ್ತಿ**
ಪ್ರಧಾನ ಸಂಪಾದಕರು

# ಅಧ್ಯಕ್ಷರ ನುಡಿ



ದೆಹಲಿ ಕರ್ನಾಟಕ ಸಂಘದ ಆತ್ಮೀಯ ಸದಸ್ಯರೇ, ಈಗ ವಿದ್ಯಾರ್ಥಿಗಳಿಗೆ ವಾರ್ಷಿಕ ಪರೀಕ್ಷೆಗಳು ನಡೆಯುತ್ತಿರುವ ಸಮಯ, ಪರೀಕ್ಷೆ ಎದುರಿಸಲಿರುವ ಎಲ್ಲಾ ಮಕ್ಕಳಿಗೆ ಶುಭ ಕೋರುತ್ತೇನೆ. ದೆಹಲಿ ಮತ್ತು ಎನ್‌ಸಿಆರ್ ನ ಕನ್ನಡ ಮಹಿಳಾಮಣಿಯರಿಗೆಲ್ಲಾ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಹಾರ್ದಿಕ ಶುಭಾಶಯಗಳು. ಈಗಾಗಲೇ ಮಹಿಳಾ ದಿನಾಚರಣೆ ಅಂಗವಾಗಿ ಸ್ಥಳೀಯ ಮಹಿಳೆಯರಿಂದ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವ ಜವಾಬ್ದಾರಿಯನ್ನು ನಮ್ಮ ಸಮಿತಿಯವರಿಗೆ ನೀಡಲಾಗಿದೆ. ಈ ಕಾರ್ಯಕ್ರಮದ ಯಶಸ್ಸಿಗೆ ಮುಂಗಡವಾಗಿ ನಮ್ಮ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯಲ್ಲಿರುವ ಎಲ್ಲಾ ಮಹಿಳಾ ಪದಾಧಿಕಾರಿಗಳು ಮತ್ತು ಚುನಾಯಿತ ಮಹಿಳಾ ಸದಸ್ಯರಿಗೆ ನನ್ನ ಹೃತ್ಪೂರ್ವಕ ಶುಭಾಶಯಗಳು.

ಸಂಘದಲ್ಲಿ ಸಾಂಸ್ಕೃತಿಕ, ಸಾಹಿತ್ಯಿಕ ಕಾರ್ಯಕ್ರಮಗಳ ವೇಗ ಸ್ವಲ್ಪ ಕುಂಠಿತಗೊಂಡಿವೆ, ಅಮೃತ ಮಹೋತ್ಸವದ ಸಂದರ್ಭದಲ್ಲಿ ನುರಿತ ಕಲಾವಿದರನ್ನು ಕರ್ನಾಟಕದಿಂದ ದೆಹಲಿಗೆ ಕರೆಸಿಕೊಂಡು ಜೊತೆಗೆ ನೂರಾರು ಸ್ಥಳೀಯ ಕಲಾವಿದರಿಗೂ ಅವಕಾಶ ಕಲ್ಪಿಸಿಕೊಟ್ಟು ಅತಿ ಹೆಚ್ಚು ಉತ್ತಮ ಗುಣಮಟ್ಟದ ಉಪಯುಕ್ತ ಕಾರ್ಯಕ್ರಮಗಳನ್ನು ಪ್ರತಿ ವಾರ ಯಶಸ್ವಿಯಾಗಿ ನೀಡುತ್ತಾ ಬಂದಿದ್ದು, ಯಾವಾಗಲಾದರೊಮ್ಮೆ ಬರುವ ಸದಸ್ಯರಿಗೆ ಕಷ್ಟವಾಯಿತೇನೋ ಅಥವಾ ಕಾರ್ಯಕ್ರಮಗಳು ಜಾಸ್ತಿ ಆಯಿತೋ ಗೊತ್ತಿಲ್ಲ. ಇರಲಿ ಆದರೆ ಇನ್ನೂ ಹೆಚ್ಚಿನ ಹೊಸ ಹೊಸ ಕಾರ್ಯಕ್ರಮಗಳನ್ನು ಉನ್ನತ ಸ್ತರದಲ್ಲಿ ತಮಗೆ ನೀಡಬೇಕು, ಸಂಘದ ಅಮೃತ ಕಾರ್ಯಕಾಲದಲ್ಲಿ ಹೊಸ ದೃಷ್ಟಿಕೋನದ ದೀರ್ಘಾವಧಿ ಯೋಜನೆಗಳ ಕಲ್ಪನೆ ಇಟ್ಟುಕೊಂಡು ಕನ್ನಡ ಕುರುಹುಗಳ ಭದ್ರ ಬುನಾದಿಗೆ ಹೊಸ ಕಾರ್ಯಕಾರಿ ಸಮಿತಿಯನ್ನ ಆಯ್ಕೆ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿದ್ದೆವು. ಆದರೆ ಮತದಾರ ಪ್ರಭುಗಳು ನೀಡಿರುವ ಆದೇಶವನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಚುನಾವಣೆ ನಡೆಯುವವರೆಗೂ ಬೇರೆ ಬೇರೆ ತಂಡಗಳಲ್ಲಿ ಸ್ಪರ್ಧಿಸಿದರೂ, ಆಯ್ಕೆಯಾಗಿ ಬಂದ ನಂತರ ಸಂಘದ ಒಳಿತಿಗಾಗಿ ನಾವೆಲ್ಲರೂ ಒಟ್ಟಾಗಿ ದುಡಿಯೋದು ನಮ್ಮ ಧರ್ಮ. ಈ ಹಿಂದೆ ಸಂಘದ ಅಧ್ಯಕ್ಷರಾಗಿದ್ದವರನ್ನ ಈಗ ನನ್ನೊಂದಿಗೆ ಸದಸ್ಯರಾಗಿ, ಉಪಾಧ್ಯಕ್ಷರನ್ನಾಗಿ ಸಲಹೆಗಳನ್ನು ನೀಡಲು ಕಳಿಸಿಕೊಟ್ಟಿದ್ದೀರಿ ತಮಗೆ ಅನಂತಾನಂತ ಧನ್ಯವಾದಗಳು. ತಾವು ನೀಡಿರುವ ಈ ಜವಾಬ್ದಾರಿಯನ್ನು ಎಲ್ಲಾ ಸಮಿತಿಯವರು ಒಪ್ಪಿಕೊಂಡು ಸಂಘದ ಒಳಿತಿಗಾಗಿ ತೆಗೆದುಕೊಳ್ಳುವ ನಿರ್ಧಾರಗಳಿಗೆ ಸ್ಪಂದಿಸಬೇಕಾದ್ದು ಆಯ್ಕೆಯಾಗಿ ಬಂದವರೆಲ್ಲರ ಧರ್ಮ.... **ಸಂಖ್ಯೆಯ ಮಂಪರಿನಲ್ಲಿ ಅಂಕೆಯಿಲ್ಲದೆ ಮಾಡಿದ ಕೃತ್ಯದಿಂದ ಲಂಕೆಗೆ ಬೆಂಕಿ ಇಟ್ಟುಕೊಂಡ ಬಗ್ಗೆ ಶಂಕೆಯಿದೆಯೇ,** ಇಲ್ಲ. ಯುಗಯುಗಾಂತರಗಳಿಂದಲೂ ಧರ್ಮ ಮತ್ತು ಅಧರ್ಮಗಳ ಪೈಪೋಟಿಯಲ್ಲಿ ಸಂಖ್ಯೆಗೆ ಮಣಿಯದೇ ಧರ್ಮವನ್ನೇ ವಿಜಯಿಯನ್ನಾಗಿಸುವ ಆ ಭಗವಂತನ ನಿರ್ಣಯ ಅನೂಹ್ಯ.

ನನ್ನ ಹಳೆಯ ಅಭ್ಯಾಸ ಪುಸ್ತಕ ಓದುವುದು, ಹೀಗೆ ಓದುತ್ತಿದ್ದಾಗ ಗಮನ ಸೆಳೆದದ್ದು ಈ ಸುಭಾಷಿತ **ಮುಖಂ ಪದ್ಮದಲಾಕಾರಂ ವಾಣೀ ಚಂದನಶೀತಲಾ । ಹೃದಯಂ ಕರ್ತರೀತುಲ್ಯಂ ತ್ರಿವಿಧಂ ಧೂರ್ತ ಲಕ್ಷಣಮ್॥** ಇದರ ಅರ್ಥ ಮುಖವು ಪದ್ಮದಳದಂತೆ ಸೊಗಸು, ಮಾತು ಚಂದನದಂತೆ ತಂಪು, ಆದರೆ ಹೃದಯವು ಮಾತ್ರ ಕತ್ತರಿಯಂತೆ ಇದ್ದರೆ ಅವು ಮೂರು ಬಗೆಯ ಧೂರ್ತ ಲಕ್ಷಣವು. ಎಲ್ಲರನ್ನೂ ಮತ್ತು ಎಂಥವರನ್ನೂ ಚಂದನದಂತಹ ಜಾಣ್ಮೆಯ ಮಾತುಗಳಿಂದ ಮರುಳುಗೊಳಿಸುವಂತಹ ವಾಕ್ ಚಾತುರ್ಯ ಮತ್ತು ವಿನಯವಂತಿಕೆ ಇರುತ್ತವೆ. ಇಂತಹವರು ಕ್ಷಣಿಕವಾಗಿ ನಮ್ಮ ಬಳಿಗೆ ಬಂದು ಮಾತನಾಡಿದರೇ ಸಾಕು, (ಈಗ ಸೆಲ್ಫಿ ತೆಗೆದುಕೊಂಡರಂತೂ ಮುಗಿಯಿತು) ನಾವು ಸಂಪೂರ್ಣವಾಗಿ ಅವರ ವಶವಾಗಿ ಬಿಡುತ್ತೇವೆ ಎಂಬ ಭಾವಾರ್ಥವನ್ನು ಧ್ವನಿಸುತ್ತದೆ ಈ ಸುಭಾಷಿತ, ಆದರೆ ಅಂತಹವರು ಮಾತಾಡುವುದೇ ಚುನಾವಣೆಗಳ ಸಮಯದಲ್ಲಿ.

ಧರ್ಮವಾಗಿ ಎಲ್ಲವೂ ನಡೆಯಬೇಕು, ಅಧರ್ಮವಾಗಿ ಏನೂ ನಡೆಯಬಾರದು ಎಂಬ ನನ್ನ ಯೋಚನೆ ಮತ್ತು ಯೋಜನೆಗಳಿಗೆ ಚುನಾವಣೆ ಸಂದರ್ಭದಲ್ಲಿ ಕೆಲವರು ಇಲ್ಲ ಸಲ್ಲದ ಸುಳ್ಳುಗಳನ್ನು ಅಪಪ್ರಚಾರವೆಂಬ ದೊಡ್ಡ ಅಸ್ತ್ರ ಇಟ್ಟುಕೊಂಡು ಮನೆ ಮನೆಗೆ ಹೋಗಿ ತಿಳಿಸಿದರು. ಇದಕ್ಕೆ ವ್ಯಯಿಸಿದ ಸಮಯವನ್ನು ಅಮೃತ ಮಹೋತ್ಸವದ ಕಾರ್ಯಕ್ರಮಗಳಲ್ಲಿ ಕೊಟ್ಟ ಜವಾಬ್ದಾರಿ ನಿರ್ವಹಿಸಲು ಬಳಸಿದ್ದಿದ್ದರೇ ಬಹಳ ಉಪಯುಕ್ತವಾಗುತ್ತಿತ್ತು. ಆದರೆ ಸಂಘದ ಸದಸ್ಯರು ಇದಕ್ಕೆಲ್ಲಾ ಸೊಪ್ಪು ಹಾಕದೆ ಮತ ಚಲಾಯಿಸುವ ಮೂಲಕ ಅಂತಹವರಿಗೆ ಸರಿಯಾದ ಉತ್ತರವನ್ನು ನೀಡಿದ್ದಾರೆ.

ಕುರುಕ್ಷೇತ್ರದ ಯುದ್ದದಲ್ಲಿ ಪಾಂಡವರ ಜೊತೆ ಕೇವಲ ಶ್ರೀ ಕೃಷ್ಣ ಪರಮಾತ್ಮ ಒಬ್ಬನೇ ಇದ್ದ ಧರ್ಮದ ಗೆಲುವಿಗಾಗಿ.ಆದರೆ ಕೌರವರೊಂದಿಗೆ ಅತಿರಥ ಮಹಾರಥರನ್ನೊಳಗೊಂಡ ಹನ್ನೊಂದು ಅಕ್ಷೋಹಿಣಿ ಸೈನ್ಯ ಇದ್ದರೂ ಮಹಾಭಾರತದಲ್ಲಿ ಧರ್ಮಕ್ಕೆ ಜಯವಾಗುತ್ತದೆ... ಈ ಅರಿವನ್ನ ಈ ಬಾರಿಯ ಚುನಾವಣೆ ಮೂಡಿಸಿದೆ ಎಂದೆನಿಸುತ್ತದೆ..... ಸತ್ಯವೆಂದೂ ಸುಳ್ಳಾಗಲಾರದು, ಸತ್ಯವನ್ನು ಮರೆಮಾಚಲು ನೂರಾರು ಸುಳ್ಳುಗಳನ್ನ ಹೇಳಬೇಕಾಗುತ್ತದೆ. ಆದರೂ ಸತ್ಯ ಯಾವಾಗಲೂ ಒಂದೇ ಸತ್ಯವಾಗೇ ಉಳಿಯುತ್ತದೆ, ಗೆಲುವು ಸಾಧಿಸುತ್ತದೆ....

ದೆಹಲಿ ಕರ್ನಾಟಕ ಸಂಘದ ಕಟ್ಟಡದಲ್ಲಿ ಇನ್ನೂ ಅನೇಕ ಕಾಮಗಾರಿಗಳು ಪ್ರಗತಿಯಲ್ಲಿವೆ... ಜೊತೆಗೆ **ಕನ್ನಡ, ನೃತ್ಯ, ಸಂಗೀತ ಕಲಿಕೆಗಳೆಲ್ಲವೂ** ಸತತವಾಗಿ ನಡೆಯುತ್ತಲೇ ಇವೆ. ಬಂಧುಗಳೇ, ಐದು ಬಾರಿ ಪ್ರಧಾನ ಕಾರ್ಯದರ್ಶಿಯಾಗಿ, ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸಂದರ್ಭದಲ್ಲಿ ಅಧ್ಯಕ್ಷನಾಗಿ ಸಾಧ್ಯವಾದಷ್ಟು ಹಣವನ್ನ ಕ್ರೋಢೀಕರಣ ಮಾಡಿ ಇಡಲು ಶ್ರಮಿಸಿದ್ದೇನೆ. ಈ ಹಣ ಸರಿಯಾದ ಕಡೆ ಬಳಕೆಯಾಗಬೇಕು ಆದ ಕಾರಣ ಸಂಘಕ್ಕೆ ಮತ್ತೊಂದು ಜಾಗ ಪಡೆಯುವ ಎಲ್ಲಾ ಪ್ರಯತ್ನಗಳು ನಡೆಯುತ್ತಿವೆ. ಈ ದಿಸೆಯಲ್ಲಿ ಕಾರ್ಯಕಾರಿ ಸಮಿತಿ ಮತ್ತು ಆಜೀವ ಸದಸ್ಯರುಗಳು ಪ್ರಾಥಮಿಕ, ಪಾರದರ್ಶಕ ಮತ್ತು ಪ್ರಾಮಾಣಿಕ ಸಲಹೆಗಳನ್ನು ಅಗತ್ಯವಾಗಿ ನೀಡಿ ಎಂದು ಈ ಮೂಲಕ ವಿನಂತಿಸುತ್ತಾ ಎಂದಿನಂತೆ ನಾನು **“ಪ್ರಾಮಾಣಿಕತೆ”** ಮತ್ತು **“ನೈತಿಕತೆ”**ಯಿಂದ ಸಮಿತಿಯನ್ನ ಜೊತೆ ತೆಗೆದುಕೊಂಡು ಹೋಗುತ್ತೇನೆ ಎಂದು ಮತ್ತೊಮ್ಮೆ ತಿಳಿಸುತ್ತಿದ್ದೇನೆ.

ಕಳೆದ ತಿಂಗಳು ದೆಹಲಿ ಕರ್ನಾಟಕ ಸಂಘಕ್ಕೆ ವಿವಿಧ ಪದಾಧಿಕಾರಿ ಸ್ಥಾನಗಳಲ್ಲಿ ಕೆಲಸ ಮಾಡಿದ ಶ್ರೀಮತಿ ಸುಮಿತ್ರಾ ರಾವ್ ಅವರು ತೀರಿಕೊಂಡರು. ಅವರಿಗೆ ದೆಹಲಿ ಕರ್ನಾಟಕ ಸಂಘದ ಮತ್ತು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಾ. ಅವರ ಕುಟುಂಬದವರ ಜೊತೆ ಸೇರಿ ದೆಹಲಿ ಕರ್ನಾಟಕ ಸಂಘದಲ್ಲಿ ಶ್ರದ್ಧಾಂಜಲಿ ಸಭೆಯನ್ನ ಮಾಡಿದ್ದೇವೆ. ಜೊತೆಗೆ ದೆಹಲಿ ಪಕ್ಕದ ಎನ್‌ಸಿಆರ್ ನ ನೋಯಿಡಾದಲ್ಲಿರುವ ಜೆಎಸ್‌ಎಸ್ ನ ತಾಂತ್ರಿಕ ಶಿಕ್ಷಣ ಸಂಸ್ಥೆಯ ಹಿರಿಯರಾದ ಶ್ರೀ ಉದಯ್ ಕುಮಾರ್ ಅವರು ಸಹಾ ದೈವಾಧೀನರಾಗಿದ್ದಾರೆ.ದೆಹಲಿ ಕರ್ನಾಟಕ ಸಂಘ ಆಯೋಜನೆ ಮಾಡಿದ ಎಲ್ಲಾ ಆಟೋಟಗಳಲ್ಲಿ, ವಿಶೇಷವಾಗಿ ಕ್ರಿಕೆಟ್ ಆಡಲು ಬರುವ ಎಲ್ಲಾ ಸದಸ್ಯರುಗಳಿಗೆ ಮಾರ್ಗದರ್ಶನ ನೀಡುತ್ತಾ ಎಲ್ಲರನ್ನು ಒಟ್ಟಾಗಿ ಕರೆದೊಯ್ಯುತ್ತಿದ್ದರು ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ, ಪಿಕ್‌ನಿಕ್ ಕಾರ್ಯಕ್ರಮದಲ್ಲಿ ವಿಶೇಷ ಕೊಡುಗೆ ನೀಡಿರುವ ಶ್ರೀ ಉದಯ್ ಕುಮಾರ್ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಗೌರವಪೂರ್ಣ ನಮನಗಳನ್ನು ಸಲ್ಲಿಸುತ್ತೇನೆ ಜೊತೆಗೆ ಸಂಘದ ಇನ್ನೋರ್ವ ಸದಸ್ಯರಾದ ಶ್ರೀ ಮನೋಹರ ರಾವ್ ಕೊಡವೂರು ಅವರ ಧರ್ಮಪತ್ನಿ ಶ್ರೀಮತಿ ಶ್ಯಾಮಲಾ ಮನೋಹರ ರಾವ್ ಅವರು ಸಹ ತಾಯ್ನಾಡಿನಲ್ಲಿ ಹೃದಯಾಘಾತದಿಂದ ದೈವಾಧೀನರಾಗಿದ್ದಾರೆ. ಅವರಿಗೂ ಸಹ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತೇನೆ.

ನಮ್ಮನ್ನು ಅಗಲಿದವರು ದೆಹಲಿ ಕರ್ನಾಟಕ ಸಂಘಕ್ಕೆ ನೀಡಿರುವ ಸಮಯ, ಸಹಕಾರ ಮತ್ತು ಕೊಡುಗೆಗಳನ್ನು ನಾನು ಮತ್ತು ದೆಹಲಿ ಕರ್ನಾಟಕ ಸಂಘ ಸದಾ ನೆನಪಿಸಿಕೊಳ್ಳುತ್ತೇವೆ. ನಿಧನರಾದವರ ಕುಟುಂಬದವರಿಗೆ ಈ ತುಂಬಲಾರದ ನಷ್ಟವನ್ನು ಭರಿಸುವ ಶಕ್ತಿಯನ್ನು ಆ ಭಗವಂತ ನೀಡಲಿ ಎಂದು ಪ್ರಾರ್ಥಿಸುತ್ತೇನೆ.

ಎನಗಿಂತ ಕಿರಿಯರಿಲ್ಲ ಎಂಬ ಭಾವನೆಯುಳ್ಳ ನನಗೆ ತುಂಬಾ ಹಿಡಿಸಿದ ಸರ್ವಜ್ಞನ ತ್ರಿಪದಿ **ಹಿರಿಯ ನಾನೆನ ಬೇಡ ! ಗುರುವ ನಿಂದಿಸಬೇಡ ! ಜರೆವವರ ಕೂಡ ಹಗೆಬೇಡ ಬಂಗಾರ ! ದೆರವು ಬೇಡಂದ ಸರ್ವಜ್ಞ** ಇದರ ಸಂಕ್ಷಿಪ್ತ ಭಾವಾರ್ಥ ಎಲ್ಲರಿಗಿಂತಲೂ ನಾನೇ ಹಿರಿಯನು ಅನ್ನಬೇಡ, ಎಲ್ಲರಿಗಿಂತ ನಾನು ಹೆಚ್ಚಿನ ಜ್ಞಾನಿಯೆಂದು ಹೆಮ್ಮೆ ಪಡಬೇಡ. ಗುರುಗಳನ್ನು ನಿಂದಿಸಬೇಡ, ಬಂಗಾರದ ಒಡವೆಗಳನ್ನು ಕೈಗಡ ತರಬೇಡವೆಂದು ಸರ್ವಜ್ಞ ಹೇಳಿದ್ದಾನೆ.

ಜೀವನದಲ್ಲಿ ಅಥವಾ ಪದವಿಗಳಲ್ಲಿ ಯಶಸ್ಸೆಂಬುದು ಸುಲಭದ ಮಾತಲ್ಲ ಕಣ್ಣಿಗೆ ಕಾಣುವಂತಹುದು ಅಲ್ಲ. ಅಮೃತ ಮಹೋತ್ಸವದ ಸಂದರ್ಭದಲ್ಲಿ ಎರಡು ವರ್ಷ ಎಡೆಬಿಡದೆ ಯಶಸ್ವಿ ಕಾರ್ಯಕ್ರಮಗಳ ಆಯೋಜನೆ, ಪ್ರಧಾನ ಮಂತ್ರಿಗಳ ಕರೆಸುವಿಕೆ, ಇವೆಲ್ಲವನ್ನೂ ಅನೇಕ ಬಾರಿ ಹೇಳಿರುವೆ. ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸಂದರ್ಭದಲ್ಲಿ ನಡೆದ ಜಿಲ್ಲಾವಾರು ಮತ್ತು ಪ್ರತಿವಾರ ಏರ್ಪಡಿಸಿದ ಸಾಂಸ್ಕೃತಿಕ ಕಾರ್ಯಕ್ರಮಗಳು ಯಶಸ್ವಿಯಾಗಿ ಮೂಡಿ ಬಂದಿದ್ದು, ಸಮಾರೋಪ ಸಮಾರಂಭಕ್ಕೆ ಮಾನ್ಯ ಪ್ರಧಾನಿಗಳಾದ ಶ್ರೀ ನರೇಂದ್ರ ಮೋದಿ ಭಾಗವಹಿಸಿದ್ದರು. ಈ ಕಾರ್ಯಕ್ರಮಕ್ಕೆ ಈಗ ಒಂದು ವರ್ಷ ತುಂಬಿದೆ. ಆ ಆಗಾಧತೆಯ ಭವ್ಯ ಕಾರ್ಯಕ್ರಮದ ಆಯೋಜನೆಗೆ ಆ ಮಟ್ಟದ ಹಿಂದಿನ ಯಾವುದೇ ಅನುಭವ ಇಲ್ಲದಿದ್ದರೂ **ನ ಭೂತೋ ನ ಭವಿಷ್ಯತಿ** ಎಂಬಂತೆ ಸಾವಿರಾರು ಕಲಾವಿದರು, ಸಾಹಿತಿಗಳು, ಗುರುಗಳು, ಹಿರಿಯರು, ಕೇಂದ್ರ ಮಂತ್ರಿಗಳು, ರಾಜ್ಯದ ಮುಖ್ಯಮಂತ್ರಿಗಳು, ಸಂಸದರು, ಸೇರಿದಂತೆ ಅನೇಕ ಅತಿಥಿಗಳು ಆಗಮಿಸಿದ್ದರು. ದೆಹಲಿಯ ಸಾವಿರಾರು ಕನ್ನಡಿಗರು ಪ್ರೀತಿಯಿಂದ ಆಚರಿಸಿದ ಆ ಎರಡು ದಿನಗಳ ಕಾರ್ಯಕ್ರಮ ದೆಹಲಿ ಕರ್ನಾಟಕ ಸಂಘದ ಇತಿಹಾಸದಲ್ಲೇ ದಾಖಲೆ. ಅಮೃತ ಮಹೋತ್ಸವ ಕಾರ್ಯಕ್ರಮದ ಯಶಸ್ಸಿಗೆ ಪಟ್ಟ ಶ್ರಮ ಈಗ ಮತ್ತೆ ನೆನಪಿಗೆ ಬರಲು ಕಾರಣ ಡಿ.ವಿ. ಗುಂಡಪ್ಪನವರ ಈ ಮುಕ್ತಕವನ್ನು ಓದಿದಾಗ **ಹಾಲ ಕಾಯಿಸಿ ಹೆಪ್ಪನಿಕ್ಕಿ ಕಡೆದೊಡೆ; ಮೊದಲು । ಮೇಲೆ ಕಾಣದ ಬೆಣ್ಣೆ ತೇಲಿ ಬರುವಂತೆ ॥ ಬಾಳನೀ, ಜಗದ ಮಂತುವು ಕಡೆಯಲೇಳುವುದು । ಆಳದಿಂದಾತ್ಮಮತಿ–ಮಂಕುತಿಮ್ಮ ॥.** ಹಾಲನ್ನು ಕಾಯಿಸಿ ಬಂದ ಕೆನೆಗೆ ಹೆಪ್ಪಕ್ಕಿಟ್ಟು ಕಡೆದರೆ ಕಡೆದಾಗ ಮಾತ್ರ ಅದುವರೆಗೂ ಕಣ್ಣಿಗೆ ಕಾಣದಿದ್ದ ಬೆಣ್ಣೆ ಬರುತ್ತದೆ.ಜೀವನದಲ್ಲೂ ನಮ್ಮನ್ನು ಪರಿಪಕ್ವಗೊಳಿಸುವುದು ನಾವು ಎದುರಿಸುವ ಕಷ್ಟ–ಪರೀಕ್ಷೆಗಳು. ಹಾಗೆಯೇ ಕಾರ್ಯಕ್ರಮಗಳ ಯಶಸ್ಸು ಎಂಬುದು ಹಾಲಿನಲ್ಲಿ ಬೆರೆತ ಬೆಣ್ಣೆಯಂತೆ. ಕೊನೆಗೆ ಬರುವ ಬೆಣ್ಣೆ ಎಲ್ಲರಿಗೂ ಕಾಣುತ್ತದೆ ಆದರೆ ಅದನ್ನು ತಯಾರಿಸಲು ಪಡುವ ಶ್ರಮ ಹಾಗೂ ವ್ಯಯಿಸಿದ ಸಮಯ ಯಾರಿಗೂ ಕಾಣುವುದಿಲ್ಲ.

ಮಹಾಶಿವರಾತ್ರಿಯ ಶುಭಾಶಯಗಳು ಹಾಗೂ ಹೋಳಿ ಹಬ್ಬಕ್ಕೆ ಮುಂಗಡವಾಗಿ ನಿಮಗೆಲ್ಲಾ ಶುಭ ಕೋರುತ್ತೇನೆ... ನಮಸ್ಕಾರಗಳು.

ನಿಮ್ಮವ

***ಸಿ.ಎಂ. ನಾಗರಾಜ***

ಅಧ್ಯಕ್ಷರು

## ಮುನ್ನೋಟ

ಆತ್ಮೀಯ ಕನ್ನಡಿಗರೇ,


ಹೊಸ ಕಾರ್ಯಕಾರಿ ಸಮಿತಿ ಅಸ್ತಿತ್ವಕ್ಕೆ ಬಂದ ನಂತರ ಸಂಘದಲ್ಲಿ ಕಾರ್ಯಕ್ರಮಗಳು ಸಾಹಿತ್ಯ ಸಂಜೆಯೊಂದಿಗೆ ಆರಂಭಗೊಂಡಿದೆ. ಈ ಸಾಹಿತ್ಯಿಕ ಕಾರ್ಯಕ್ರದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕನ್ನಡದ ಖ್ಯಾತ ಕವಿಗಳಾದ ಶ್ರೀ ಬಿ.ಆರ್. ಲಕ್ಷ್ಮಣ ರಾವ್ ಮತ್ತು 2023ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಶ್ರೀ ಲಕ್ಷ್ಮೀಶ ತೋಳ್ಪಾಡಿ ಅವರೂ ಕೂಡಾ ಈ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘಕ್ಕೆ ಬಂದು ನಮ್ಮ ಗೌರವ ಹಾಗೂ ಅಭಿನಂದನೆಯನ್ನು ಸ್ವೀಕರಿಸಿದ್ದಾರೆ. ಈ ಕಾರ್ಯಕ್ರಮದಲ್ಲಿ ಸಾಹಿತಿಗಳ ಕವನವನ್ನು ಹಾಡಿದ ಸ್ಥಳೀಯ ಪ್ರತಿಭೆಗಳಿಗೆ ಧನ್ಯವಾದಗಳು.

ದಿನಾಂಕ 31.03.2024 ರಂದು ಸಂಘದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಸ್ಥಳೀಯ ಮಹಿಳಾ ಕಲಾವಿದರಿಂದ ನಾಟಕ, ನೃತ್ಯ ಮತ್ತು ಸಂಗೀತ ಕಾರ್ಯಕ್ರಮಗಳು ನಡೆಯಲಿದೆ. ಕಲಾವಿದರಿಗೆ ಎನ್.ಎಸ್.ಡಿ.ಯ ಕಲಾ ನಿರ್ದೇಶಕಿ ಶ್ರೀಮತಿ ಮಿತಾ ಮಿಶ್ರಾ ಅವರು ತರಬೇತಿಯನ್ನು ನೀಡುತ್ತಿದ್ದಾರೆ. ತಾವುಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಸ್ಥಳೀಯ ಕಲಾವಿದರನ್ನು ಪ್ರೋತ್ಸಾಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯ ಮುಖ್ಯಸ್ಥರೊಂದಿಗೆ ದೆಹಲಿಯಲ್ಲಿ ಕನ್ನಡ ಚಲನಚಿತ್ರ ಪ್ರದರ್ಶನಕ್ಕಾಗಿ ಮಾತುಕತೆ ನಡೆಯುತ್ತಿದೆ.

**ರಾಧಾಕೃಷ್ಣ**
*ಪ್ರಧಾನ ಕಾರ್ಯದರ್ಶಿ*

## ಅಭಿನಂದನೆ



**ಕನ್ನಡ ಭಾಷೆಯ 'ಮಹಾಭಾರತ ಅನುಸಂಧಾನದ ಭಾರತಯಾತ್ರೆ' ಕೃತಿಗಾಗಿ 2023ರ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರಕ್ಕೆ ಭಾಜನರಾದ ಕನ್ನಡದ ಶ್ರೇಷ್ಠ ಲೇಖಕರು ಮತ್ತು ಪರಿಸರ ತಜ್ಞರಾದ ಶ್ರೀ ಲಕ್ಷ್ಮೀಶ ತೋಳ್ಪಾಡಿ ಅವರಿಗೆ ದೆಹಲಿ ಕನ್ನಡಿಗರ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.**

**ದೆಹಲಿ ಕರ್ನಾಟಕ ಸಂಘದ ಮಾರ್ಚಿ ತಿಂಗಳ**
## ಕಾರ್ಯಕ್ರಮಗಳು

**11 ಮಾರ್ಚಿ 2024, ಸೋಮವಾರ ಸಂಜೆ : 6.30ಕ್ಕೆ**

**ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಕನ್ನಡದ ಖ್ಯಾತ ಕವಿಗಳಾದ ಶ್ರೀ ಬಿ.ಆರ್. ಲಕ್ಷ್ಮಣ ರಾವ್ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಶ್ರೀ ಲಕ್ಷ್ಮೀಶ ತೋಳ್ಪಾಡಿ ಅವರೊಂದಿಗೆ ಸಾಹಿತ್ಯ ಸಂಜೆ ಕಾರ್ಯಕ್ರಮ**

**31 ಮಾರ್ಚಿ 2024, ಭಾನುವಾರ ಸಂಜೆ : 6.00ಕ್ಕೆ**

**ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಸ್ಥಳೀಯ ಮಹಿಳಾ ಕಲಾವಿದರಿಂದ ನಾಟಕ ಮತ್ತು ನೃತ್ಯ ಪ್ರದರ್ಶನ**

ಮಾನ್ಯರೇ,
ಈ ಕಾರ್ಯಕ್ರಮದಲ್ಲಿ ದೆಹಲಿಯ ಎನ್.ಎಸ್.ಡಿ.ಯ ಕಲಾ ನಿರ್ದೇಶಕಿ ಶ್ರೀಮತಿ ಮಿತಾ ಮಿಶ್ರಾ ಅವರಿಂದ ತರಬೇತಿ ಪಡೆದ ಸ್ಥಳೀಯ ಮಹಿಳಾ ಕಲಾವಿದರಿಂದ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರಸ್ತುತಿಯಾಗಲಿವೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಶ್ರೀಮತಿ ಪೂಜಾ ರಾವ್-**98108 82498**,
ಶ್ರೀಮತಿ ಅಶ್ವಿನಿ ಬಿ.ಎಸ್.-**90362 35665.**
**ಕಾರ್ಯಕ್ರಮಕ್ಕೆ ಸರ್ವರಿಗೂ ಆದರದ ಸ್ವಾಗತ**

**ಸಿ.ಎಂ. ನಾಗರಾಜ**
ಅಧ್ಯಕ್ಷರು

**ರಾಧಾಕೃಷ್ಣ**
ಪ್ರಧಾನ ಕಾರ್ಯದರ್ಶಿ

### ದೇಶದ ಅತ್ಯುನ್ನತ ನಾಗರೀಕ ಪ್ರಶಸ್ತಿಯಾದ
## 'ಭಾರತ ರತ್ನ' ಪುರಸ್ಕೃತರು-2024




**ಶ್ರೀ ಲಾಲ್‌ಕೃಷ್ಣ ಅಡ್ವಾಣಿ**
ಮಾಜಿ ಉಪ ಪ್ರಧಾನಮಂತ್ರಿ


### ಮರಣೋತ್ತರವಾಗಿ




**ಶ್ರೀ ಕರ್ಪೂರಿ ಠಾಕೂರ್**
ಜನನಾಯಕ, ಬಿಹಾರದ ಮೂರ್ವ ಮುಖ್ಯಮಂತ್ರಿ



**ಶ್ರೀ ಪಿ.ವಿ. ನರಸಿಂಹರಾವ್**
ಮಾಜಿ ಪ್ರಧಾನಮಂತ್ರಿ



**ಶ್ರೀ ಚೌಧರಿ ಚರಣಸಿಂಗ್**
ಮಾಜಿ ಪ್ರಧಾನಮಂತ್ರಿ



**ಡಾ. ಎಂ.ಎಸ್. ಸ್ವಾಮಿನಾಥನ್**
ಹಸಿರು ಕ್ರಾಂತಿಯ ಪಿತಾಮಹ, ಕೃಷಿ ವಿಜ್ಞಾನಿ

ಭಾರತ ಸರ್ಕಾರವು ಈ ಹಿಂದೆ ಕರ್ನಾಟಕದ ಮೂರು ಸಾಧಕರಿಗೆ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಿದೆ. ಸರ್.ಎಂ. ವಿಶ್ವೇಶ್ವರಯ್ಯ (1955ರಲ್ಲಿ) ಪಂಡಿತ್ ಭೀಮಸೇನ ಜೋಷಿ (2009ರಲ್ಲಿ) ಹಾಗೂ ಡಾ. ಸಿ.ಎನ್.ಆರ್. ರಾವ್ (2014ರಲ್ಲಿ) ಅವರಿಗೆ ಈ ಅತ್ಯುನ್ನತ ನಾಗರೀಕ ಪ್ರಶಸ್ತಿಯನ್ನು ನೀಡಿ ಪುರಸ್ಕರಿಸಿರುವುದನ್ನು ಇಲ್ಲಿ ಸ್ಮರಿಸುತ್ತಾ, 2024ರ ಭಾರತ ರತ್ನ ಪ್ರಶಸ್ತಿಗೆ ಭಾಜನರಾದ ಶ್ರೀ ಲಾಲ್‌ಕೃಷ್ಣ ಅಡ್ವಾಣಿ ಹಾಗೂ ಮರಣೋತ್ತರವಾಗಿ ಭಾರತ ರತ್ನ ಪ್ರಶಸ್ತಿ ನೀಡಲಾಗುತ್ತಿರುವ ನಾಲ್ಕೂ ಗಣ್ಯಮಾನ್ಯರ ಕುಟುಂಬದವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಗೌರವಪೂರ್ವಕ ಅಭಿನಂದನೆಗಳು.

ಅಂತರ ರಾಷ್ಟ್ರೀಯ ಮಹಿಳಾ ದಿವಾಚರಣೆಯ ಸಂದರ್ಭ ವಿಶೇಷ ಲೇಖನ

# ಹೆಣ್ಣೊಂದು ಕಲಿತರೆ..... ಮಹಿಳಾ ಶಿಕ್ಷಣದ ಅಗತ್ಯ ಮತ್ತು ಮಹತ್ವ

ನಹಿ ಜ್ಞಾನೇನ ಸದೃಶಂ ಅರ್ಥಾತ್ ಜ್ಞಾನಕ್ಕೆ ಸಮಾನವಾದುದು ಯಾವುದು ಇಲ್ಲ. ಭಾರತೀಯರು ಸರಸ್ವತಿ ದೇವಿಯನ್ನು ಜ್ಞಾನ ರೂಪಿಯಾಗಿ ಪೂಜಿಸುತ್ತಾರೆ. ಅಲ್ಲದೆ ಮನೆಯೇ ಮೊದಲ ಪಾಠಶಾಲೆ ಜನನಿ ತಾನೇ ಮೊದಲ ಗುರು ಎಂಬ ನಾಣ್ನುಡಿಯೂ ಸಹ ಇದೆ. ಇವೆಲ್ಲ ಮಹಿಳಾ ಶಿಕ್ಷಣದ ಮಹತ್ವನ್ನು ಎತ್ತಿ ಹಿಡಿಯುತ್ತವೆ ಆದರೂ ಸ್ತ್ರೀ ಶಿಕ್ಷಣದಲ್ಲಿ ಇಂದಿಗೂ ತಾರತಮ್ಯ ಇದ್ದೇ ಇದೆ ಏಕೆ ಎಂಬುದು ಬೃಹದಾಕಾರವಾಗಿ ಕಾಡುವ ಪ್ರಶ್ನೆ !!

National Family Health Survey (NFHS-5) ಅನ್ವಯ ಭಾರತೀಯರ ಸಾಕ್ಷರತೆ ದರ 77.70% ಅದರಲ್ಲಿ ಪುರುಷರು 84.70% ಮಹಿಳೆಯರು 70.30%. ಪುರುಷ ಪ್ರಧಾನ ಸಮಾಜದಲ್ಲಿ ಸಮಾನತೆ ಎನ್ನುವ ಪದಕ್ಕೆ ಅರ್ಥ ದೊರಕುವುದು ಕಷ್ಟವೇ. ಶಿಕ್ಷಿತ ಮಹಿಳೆ ಎಲ್ಲ ಕ್ಷೇತ್ರಗಳಲ್ಲೂ ಸಾಧನೆ ಮಾಡಿ ಉದಾಹರಣೆಯಾಗಿ ನಿಲ್ಲುತ್ತಾಳೆ ಎನ್ನುವುದರಲ್ಲಿ ಕಿಂಚಿತ್ತೂ ಅನುಮಾನವಿಲ್ಲ.

ವೇದ ಕಾಲದಲ್ಲೂ ಮಹಿಳೆಯು ಸಾಮಾಜಿಕ ಮತ್ತು ಶೈಕ್ಷಣಿಕ ಸವಲತ್ತುಗಳನ್ನು ಪಡೆದು ಕೊಳ್ಳುತ್ತಿದ್ದಳು. ಪುರಾಣದಲ್ಲಿ ಸಹ ಮಹಿಳೆಯರ ಶಿಕ್ಷಣಕ್ಕೆ ಸಮಾನ ಮಹತ್ವ ಇತ್ತೆಂಬುದನ್ನು ಕಾಣಬಹುದು. ತತ್ವಜ್ಞಾನಿ ಗಾರ್ಗಿ ವಾಚಕ್ನವಿ ಎಂದು ಪ್ರಸಿದ್ಧಳಾಗಿದ್ದಳು. ಋಷಿ ಯಾಜ್ಞವಲ್ಕ್ಯರೊಂದಿಗೆ ಬ್ರಹ್ಮಯಜ್ಞದಲ್ಲಿ ವಾದ ಮಂಡಿಸಿ ಸೈ ಎನಿಸಿಕೊಂಡವಳು, ಸೀತೆ ಬಿಲ್ಲು ವಿದ್ಯೆಯೊಂದಿಗೆ ಇತರ ಶಾಸ್ತ್ರಗಳ ಅಧ್ಯಯನ ಮಾಡಿದ್ದು ತನ್ನ ಗುರು ಗಾರ್ಗಿ ಬಳಿಯೆ. ಅಷ್ಟೇ ಅಲ್ಲ. ಅರ್ಥಶಾಸ್ತ್ರದಲ್ಲಿ ಪರಿಣಿತಿ ಹೊಂದಿದ ದ್ರೌಪದಿ, ಯುದ್ಧ ಸಾರಥ್ಯ ಪರಿಣಿತಿ ಹೊಂದಿದ ಕೈಕೇಯಿ, ಅಲ್ಲದೆ ಗಾಂಧಾರಿ, ಮೈತ್ರೇಯಿ, ಕುಂತಿ ಇತ್ಯಾದಿ ಎಲ್ಲ ಮಹಿಳೆಯರೂ ಶಿಕ್ಷಿತರೆ !! ಹಾಗೆಯೇ ಮುಂದುವರೆದು ನೋಡಿದಾಗ ಇತಿಹಾಸದಲ್ಲಿ ರಾಣಿ ಲಕ್ಷ್ಮಿಬಾಯಿ, ಕಿತ್ತೂರು ಚೆನ್ನಮ್ಮ ಇವರೆಲ್ಲ ವಿದ್ಯಾವಂತರು ಮತ್ತು ನುರಿತ ಯುದ್ಧಾಳುಗಳಾಗಿದ್ದರು. ಇಂಥಹ ನಮ್ಮ ಭಾರತದಲ್ಲಿ ಮಹಿಳೆಯರ ಶಿಕ್ಷಣ ಕುರಿತು ಇಂದಿಗೂ ಈ ತಾರತಮ್ಯ ಏಕೆ??

ಬಹುತೇಕ ಗುರುಕುಲ ಪದ್ಧತಿ ನಾಶವಾಗಿದ್ದು ಮುಖ್ಯ ಕಾರಣ ಇರಬಹುದು. ಸ್ವಾತಂತ್ರ್ಯ ಪೂರ್ವದಲ್ಲಿಯೇ ಸಾವಿತ್ರಿ ಬಾಯಿ ಫುಲೆ ಮಹಿಳಾ ಶಿಕ್ಷಣ ಅಭಿಯಾನಕ್ಕೆ ಮುಂದಾಳತ್ವ ವಹಿಸಿದರು, ಪ್ರಾತಃಸ್ಮರಣೀಯರು, ಭಾರತೀಯ ಮಹಿಳಾ ಶಿಕ್ಷಣದ ತಾಯಿ ಎಂದು ಕರೆಸಿಕೊಂಡವರು. ನಂತರದ ಸಮಯದಲ್ಲಿ ಡಾ. ಬಿ.ಆರ್. ಅಂಬೇಡ್ಕರ್, ಸರ್ವಪಲ್ಲಿ ರಾಧಾಕೃಷ್ಣ ಅಲ್ಲದೆ ದುರ್ಗಬಾಯಿ ದೇಶಮುಖ್, ಅರುಣ ಅಸಫ್ ಅಲಿ ಮತ್ತಿತರರು ಶಿಕ್ಷಣ ಅಭಿಯಾನದಲ್ಲಿ ಭಾಗವಹಿಸಿ ಶಿಕ್ಷಣದ ಮಹತ್ವವನ್ನು ಸಾರಿದ್ದರು.

ನಂತರದಲ್ಲಿ, ಸರ್ಕಾರವು ಕಾಲ ಕಾಲಕ್ಕೆ ಪರಿಶೀಲಿಸಿ ಅನೇಕ ಆಯೋಗಗಳನ್ನು ಸಹ ನೇಮಿಸಿ ವರದಿ ಪಡೆದು ಅನೇಕ ಸುಧಾರಣೆಯನ್ನು ತರುವ ಪ್ರಯತ್ನ ಮಾಡಿದೆ. ಮೊದಲನೆಯದಾಗಿ 1949 ರಲ್ಲಿ ಸರ್ವಪಲ್ಲಿ ರಾಧಾಕೃಷ್ಣ ನೇತೃತ್ವದಲ್ಲಿ ನೇಮಕಗೊಂಡ ರಾಧಾಕೃಷ್ಣ ಆಯೋಗ, ಮಹಿಳಾ ಉನ್ನತ ಶಿಕ್ಷಣಕ್ಕೆ ಒತ್ತು ಕೊಟ್ಟಿತ್ತು. ತದನಂತರ 1962 ರಲ್ಲಿ ಬಂದ National Council For Women Education ಮಹಿಳಾ ಶಿಕ್ಷಣವನ್ನು ಗಂಭೀರವಾಗಿ ಪರಿಗಣಿಸಿ ಅನೇಕ ಆಯೋಗಗಳನ್ನು



ನೇಮಿಸಿ ಏಳಿಗೆಗಾಗಿ ಶ್ರಮಿಸಿತು. ಉದಾಹರಣೆಗೆ- **Hamsa Mehta Committee** ಹಂಸಾ ಮೆಹತಾ ಕಮಿಟಿ (1962) ಮೂಲ ಉದ್ದೇಶ–ಶಿಕ್ಷಣದ ವಿವಿಧ ಹಂತಗಳಲ್ಲಿ ಸಮಾನತೆಯನ್ನು ಅಳವಡಿಸುವ ಬಗ್ಗೆ ಗಮನಿಸುವುದು.

**Durgabai Deshmukh Commiittee** ದುರ್ಗಾಬಾಯಿ ದೇಶ್ ಮುಖ್ ಕಮಿಟಿ (1959) ಮೂಲ ಉದ್ದೇಶ– 8ನೇ ತರಗತಿಯವರೆಗೆ ಬಾಲಕಿಯರ ಉಚಿತ ಶಿಕ್ಷಣ ನೀಡುವುದು.

ಹೀಗೆ ವಿವಿಧ ಕಾರ್ಯ ನಿರ್ವಹಿಸಿ, ನಾನಾ ಸಮಿತಿಗಳು ವರದಿ ದಾಖಲಿಸಿದ್ದವು. ಆ ವರದಿಗಳ ಆಧಾರದ ಮೇಲೆ ಸರ್ಕಾರವು ಅನೇಕ ಸುಧಾರಣೆಗಳನ್ನು ಮಾಡಿ ಮಹಿಳಾ ಶಿಕ್ಷಣವನ್ನು ಗಟ್ಟಿಗೊಳಿಸಿ ಜನತೆಗೆ ಅರಿವು ಮೂಡಿಸುವಲ್ಲಿ ಬಹುಪಾಲು ಯಶಸ್ವಿಯಾಗಿತ್ತು.

ಸ್ವಾತಂತ್ರ್ಯಾನಂತರ ಭಾರತೀಯ ಸಂವಿಧಾನವು ಲಿಂಗ ತಾರತಮ್ಯ ಸಲ್ಲದು ಎಂದು ಘೋಷಿಸಿ ಸಮಾನ ಶಿಕ್ಷಣ ಹಕ್ಕನ್ನು ಕಲ್ಪಿಸಿ ಕೊಟ್ಟಿದೆ. ಭಾರತೀಯ ಸಂವಿಧಾನದ Article 14 ಅನ್ವಯ ಸಮಾನ ಶಿಕ್ಷಣ ಹಕ್ಕು ಇದ್ದಾಗ್ಯೂ ಸಹ 2009 ರಲ್ಲಿ Right To Education ಕಾನೂನು ಜಾರಿಗೊಳಿಸಿ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಎಲ್ಲರಿಗೂ ದೊರೆಯುವಂತೆ ಮಾಡಿದೆ. ಅಷ್ಟೇ ಅಲ್ಲ ಇಂದಿಗೂ ಆ ನಿಟ್ಟಿನಲ್ಲಿ ಅನೇಕ ಕಾರ್ಯಕ್ರಮಗಳನ್ನು ಸರಕಾರವು ಹಮ್ಮಿಕೊಳ್ಳುತ್ತಾ ಬಂದಿದೆ. ಕೆಲವನ್ನು ಇಲ್ಲಿ ಉಲ್ಲೇಖಿಸುವುದಾದರೆ.....

**ಬೇಟಿ ಬಚಾವ್ ಬೇಟಿ ಪಡಾವ್**

**"ಮಹಿಳಾ ಸಮಖ್ಯ"**(Empowering through education)

**"ನಾರಿ ಶಕ್ತಿ"** (Women Power)

**ಉಡಾನ್** (Training in IT, Banking and Finance)

**"ಸಾಕ್ಷರ ಭಾರತ"**

ಹೀಗೆ ಅನೇಕ ಕಾರ್ಯಕ್ರಮಗಳನ್ನು ಸರಕಾರ ಹಮ್ಮಿಕೊಂಡಿದೆ. ಸರ್ಕಾರವು ಇಷ್ಟೆಲ್ಲಾ ಸವಲತ್ತು ಕಲ್ಪಿಸಿ ಕೊಟ್ಟಿದ್ದರೂ ಸಹ ಪೂರ್ಣಪ್ರಮಾಣ ಮಹಿಳಾ ಸಾಕ್ಷರತೆ ಇನ್ನೂ ಕನಸಾಗಿ ಉಳಿದಿದೆ. ಈ ನಿಟ್ಟಿನಲ್ಲಿ ಸಮಾಜ ಎಲ್ಲಿ ಎಡವಿದೆ ಎಂದು ಪರಿಶೀಲಿಸಬೇಕಿದೆ ಮತ್ತು ಅದಕ್ಕೆ ಪರಿಹಾರವನ್ನೂ ಸಹ ಕಂಡುಕೊಳ್ಳಬೇಕಿದೆ. ನನ್ನ ಅಭಿಪ್ರಾಯದಲ್ಲಿ...

**ಮಹಿಳಾ ಶಿಕ್ಷಣ ತಾರತಮ್ಯಕ್ಕೆ ಮೂಲ ಕಾರಣಗಳು :**

- ಆರ್ಥಿಕ ಪರಿಸ್ಥಿತಿ
- ಪೋಷಕರ ಅಜ್ಞಾನ ಅಥವಾ ಅನಕ್ಷರತೆ,
- ವಿದ್ಯಾಲಯಗಳಲ್ಲಿ ಲಿಂಗಾಧಾರಿತ ಕಿರುಕುಳಗಳು/ಭಯ
- ಬಾಲ್ಯ ವಿವಾಹ ಅಥವಾ ಪರ್ದಾ ಪದ್ಧತಿ ಇತ್ಯಾದಿ ಸಾಂಪ್ರದಾಯಿಕ ದೃಷ್ಟಿಕೋನ

**ಪರಿಹಾರ :**

- ಎಲ್ಲಾ ಹಂತಗಳಲ್ಲಿ ಮಹಿಳೆಯರ ಶಿಕ್ಷಣವನ್ನು ಪ್ರೋತ್ಸಾಹಿಸಬೇಕು.
- ಜ್ಞಾನ ಮತ್ತು ಶಿಕ್ಷಣವನ್ನು ಒದಗಿಸುವಲ್ಲಿ ಲಿಂಗ ಪಕ್ಷಪಾತವನ್ನು ದುರ್ಬಲಗೊಳಿಸಬೇಕು.
- ಮಹಿಳೆಯರಿಗೆ ಪ್ರತ್ಯೇಕವಾಗಿ ಶಾಲೆಗಳು, ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಬೇಕು.
- ಮುಖ್ಯವಾಹಿನಿಯ ಶಿಕ್ಷಣಕ್ಕೆ ವಿಶೇಷವಾಗಿ ಬಿಪಿಎಲ್‌ನ ಅಂಚಿನಲ್ಲಿರುವ ಕುಟುಂಬಗಳ ಹೆಚ್ಚಿನ ಹೆಣ್ಣು ಮಕ್ಕಳನ್ನು ತರಲು, ಸರ್ಕಾರವು ಉಚಿತ ಪುಸ್ತಕಗಳು, ಸಮವಸ್ತ್ರ, ವಸತಿ ಮತ್ತು ಮಧ್ಯಾಹ್ನದ ಊಟ, ವಿದ್ಯಾರ್ಥಿವೇತನ, ಉಚಿತ ರೂಪದಲ್ಲಿ ರಿಯಾಯಿತಿಯನ್ನು ಒದಗಿಸುವುದು.
- ಎಲ್ಲರಿಗೂ ಶಿಕ್ಷಣ (Education For All) ಕಾರ್ಯಕ್ರಮ ಮತ್ತು ಇತರ ಹಲವು ಶೈಕ್ಷಣಿಕ ಕಾರ್ಯಕ್ರಮಗಳು ಮಹಿಳೆಯರಿಗೆ ಶಿಕ್ಷಣವನ್ನು ಹೆಚ್ಚಿಸಲು ವಿವಿಧ ಸೌಲಭ್ಯಗಳನ್ನು ಒದಗಿಸುವುದು.

ಈ ಎಲ್ಲ ಕಾರ್ಯಕ್ರಮಗಳು ಭಾರತದಲ್ಲಿ ಹೆಣ್ಣು ಮಕ್ಕಳ ಶಿಕ್ಷಣವನ್ನು ಸುಧಾರಿಸಲು ಬಹಳ ಸಹಾಯಕವಾಗಬಹುದೆಂಬ ಆಶಯ.

**ಮಹಿಳಾ ಶಿಕ್ಷಣದ ಅಗತ್ಯ ಮತ್ತು ಮಹತ್ವ :**

- ವಿದ್ಯಾವಂತ ಮಹಿಳೆ ವಿದ್ಯಾವಂತ ಕುಟುಂಬ ಮತ್ತು ಸಮಾಜವನ್ನು ನಿರ್ಮಿಸುತ್ತಾರೆ.
- ಕುಟುಂಬದ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ.
- ದೇಶದ ಆರ್ಥಿಕ ಸಾಮಾಜಿಕ ಪರಿಸ್ಥಿತಿಗಳ ಮೇಲೆ ಪರಿಣಾಮ ಬೀರುತ್ತದೆ.
- ಶಿಕ್ಷಣದ ಮುಖಾಂತರ ಇಂದಿನ ಮಹಿಳೆಯರೂ ತಮ್ಮ ಆರ್ಥಿಕ, ಸಾಮಾಜಿಕ, ಮಾನಸಿಕ, ಬೌದ್ಧಿಕ ಬೆಳವಣಿಗೆ ಹೊಂದಿ ಸ್ವಾವಲಂಬಿ ಆಗುತ್ತಾರೆ. ಮನೆಯ ಒಳಗೆ ಹೊರಗೆ ಅವರ ಪಾತ್ರ ಬಹು ಮುಖ್ಯ.

ಇತ್ತೀಚೆಗೆ ಗುಜರಾತಿನ ಅಹಮದಾಬಾದಿನಲ್ಲಿ NGO ಒಂದರಲ್ಲಿ ಸೇವೆ ಸಲ್ಲಿಸುತ್ತಿರುವ ಬಿಹಾರ್ ಮೂಲದ ಪ್ರೀತಿ ಕುಮಾರಿ ಮತ್ತು ಕನ್ನಡ ಮೂಲದ ಸರಯೂ ಗಿರೀಶ್ ಅವರೊಂದಿಗೆ ಇದೇ ವಿಷಯದ ಬಗ್ಗೆ ಚರ್ಚೆಗೆ ಅವಕಾಶ ಸಿಕ್ಕಿತ್ತು. ಅವರ ಮುಖ್ಯ ಉದ್ದೇಶ ಹಿಂದುಳಿದವರ ಹಾಗೂ ಆರ್ಥಿಕ ದುರ್ಬಲ ಕುಟುಂಬದ ಮಕ್ಕಳ ಶಿಕ್ಷಣ. ಮಹಿಳಾ ಶಿಕ್ಷಣದ ಮಹತ್ವದ ಬಗ್ಗೆ ಅವರ ಅನುಭವ ವಿವರಿಸುತ್ತಾ ಅವಿದ್ಯಾವಂತ ಮಹಿಳೆಯರಿಂದ ಮಕ್ಕಳ ಸರ್ವತೋಮುಖ ಬೆಳವಣಿಗೆ ಸಾಧ್ಯವಾಗಲಾರದು. ಮಹಿಳೆಯರು ದಯನೀಯ ಜೀವನ ನಡೆಸುತ್ತಿದ್ದರೆ ದೇಶವು ಯಾವುದೇ ಪ್ರಗತಿಯನ್ನು ನಿರೀಕ್ಷಿಸಲಾರದು ಎಂಬ ಅಭಿಪ್ರಾಯ ಅವರು ವ್ಯಕ್ತ ಪಡಿಸಿದರು.

**ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಅಲ್ಲವೇ?**

**ಅಂತರ ರಾಷ್ಟ್ರೀಯ ಮಹಿಳಾ ದಿವಾಚರಣೆಯ ಶುಭಾಶಯಗಳು.**


ಲೇಖಕರು :

**ಶ್ರೀಮತಿ ವೈಜಯಂತಿ ಗಿರೀಶ್**

ವಕೀಲರು, ದೆಹಲಿ ಕನ್ನಡತಿ




# ಕರ್ನಾಟಕದಿಂದ ರಾಜ್ಯಸಭೆಗೆ ಚುನಾಯಿತರಾದ ನೂತನ ಸಂಸದರು



ಶ್ರೀ ನಾರಾಯಣಸಾ ಭಾಂಡಗೆ



ಶ್ರೀ ಅಜಯ್ ಮಾಕನ್



ಶ್ರೀ ಜಿ.ಸಿ. ಚಂದ್ರಶೇಖರ್




ಶ್ರೀ ನಾಸೀರ್ ಹುಸೇನ್

**ಸಮಸ್ತ ಕನ್ನಡ ನಾಡಿನ ಜನತೆಯ ಹಾಗು ದೆಹಲಿ ಕನ್ನಡಿಗರ ಪರವಾಗಿ ನೂತನವಾಗಿ ಚುನಾಯಿತರಾದ ಈ ನಾಲ್ವರು ರಾಜ್ಯಸಭಾ ಸದಸ್ಯರಿಗೆ ಹಾರ್ದಿಕ ಅಭಿನಂದನೆಗಳು**

**ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಸಂದರ್ಭ 'ನಾರಿ ಶಕ್ತಿಗೆ' ವಂದನೆ**
**ಶ್ರೀಮತಿ ಡಾ. ಸುಧಾಮೂರ್ತಿ ಅವರಿಗೆ**

## ಅಭಿನಂದನೆ



**ಭಾರತದ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು ಅವರಿಂದ ರಾಜ್ಯಸಭೆಗೆ ನಾಮ ನಿರ್ದೇಶನಗೊಂಡ ಶ್ರೀಮತಿ ಡಾ. ಸುಧಾಮೂರ್ತಿ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ದೆಹಲಿ ಕರ್ನಾಟಕ ಸಂಘ ಗೌರವಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತದೆ.**

## ಅಭಿನಂದನೆ



**ಡಾ. ಕೆ.ಎಸ್. ಸೋಮಶೇಖರ್** : ರಾಜ್ಯಸಭಾ ಸೆಕ್ರೆಟರಿಯೇಟ್‌ನಲ್ಲಿ ಜಂಟಿ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸುತ್ತಿದ್ದ ಹಿರಿಯ ಕನ್ನಡಿಗರಾದ ಡಾ. ಕೆ.ಎಸ್. ಸೋಮಶೇಖರ್ ಅವರು ಮುಂಬಡ್ತಿ ಪಡೆದು ಹೆಚ್ಚುವರಿ ಕಾರ್ಯದರ್ಶಿ (ಅಡಿಷನಲ್ ಸೆಕ್ರೆಟರಿ) ಲೆವೆಲ್ 15 ಆಗಿ ನೇಮಕ ಆಗಿದ್ದಾರೆ.

ಇವರು ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗಿಯಾಗುತ್ತಾ ಸಂಘದ ಎಲ್ಲಾ ಕಾರ್ಯ ಯೋಜನೆಗಳಿಗೆ ಪ್ರೋತ್ಸಾಹ ಮತ್ತು ಸಹಕಾರ ನೀಡುತ್ತಿದ್ದಾರೆ. ರಾಜ್ಯಸಭೆಯ ಸೆಕ್ರೆಟರಿಯೇಟ್‌ನ ಅಡಿಷನಲ್ ಸೆಕ್ರೆಟರಿ ಆಗಿರುವ ಪ್ರಥಮ ಕನ್ನಡಿಗರಾದ ಡಾ. ಕೆ.ಎಸ್. ಸೋಮಶೇಖರ್ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು.



**ಡಾ. ಅಶೋಕ ಎಂ.ಈಟಿ.** : ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರೂ ಜನಕಪುರಿ ಕನ್ನಡ ಕೂಟದ ಹಿರಿಯ ಸದಸ್ಯರೂ ಹಾಗೂ ಆಯುರ್ವೇದ ತಜ್ಞರಾದ ಡಾ. ಅಶೋಕ್ ಎಂ.ಈಟಿ.ಯವರು ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳಲ್ಲಿ ಬಹಳ ಸಕ್ರಿಯವಾಗಿ ಉತ್ಸಾಹದಿಂದ ಭಾಗವಹಿಸುತ್ತಿದ್ದು ಅದರಲ್ಲೂ ಪ್ರಮುಖವಾಗಿ ಆರೋಗ್ಯ ಮೇಳ ಶಿಬಿರದಲ್ಲಿ ಭಾಗವಹಿಸಿ ದೆಹಲಿ ಕನ್ನಡಿಗರಿಗೆ ಉಚಿತ ವೈದ್ಯಕೀಯ ತಪಾಸಣೆ ಮತ್ತು ಆರೋಗ್ಯ ಸಲಹೆ ನೀಡಿರುತ್ತಾರೆ.

## ಕೇಂದ್ರ ಸರಕಾರದ ಆರೋಗ್ಯ ಸೇವೆಗಳ ಆಯುಷ್ ವಿಭಾಗದ ಹೆಚ್ಚುವರಿ ನಿರ್ದೇಶಕರಾಗಿ ಡಾ. ಅಶೋಕ ಎಂ. ಈಟಿ ನೇಮಕ



ನಮ್ಮ ಕರ್ನಾಟಕದ ಗದಗ ಜಿಲ್ಲೆಯ, ಶಿರಹಟ್ಟಿ ತಾಲೂಕಿನ ಪುಟ್ಟ ಗ್ರಾಮವಾದ ಬನ್ನಿಕೊಪ್ಪದಲ್ಲಿ ಜನಿಸಿ, ಧಾರವಾಡದಲ್ಲಿ ಶಾಲಾ ಶಿಕ್ಷಣ ಪೂರೈಸಿದ ಶ್ರೀ ಅಶೋಕ ಎಂ.ಈಟಿ ಅವರು 1994–95ರಲ್ಲಿ ತಮ್ಮ ಬಿ.ಎ. ಎಮ್. ಎಸ್ ಪದವಿಯನ್ನು ಬಳ್ಳಾರಿಯ ತಾರಾನಾಥ ಸರಕಾರಿ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನಿಂದ ಪಡೆದರು. ತದನಂತರ 1997–98 ರಲ್ಲಿ ಮೈಸೂರಿನ ಸರಕಾರಿ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನಿಂದ ಎಮ್.ಡಿ. ಪದವಿಯನ್ನು ಪಡೆದರು.

ಇವರು ಜನವರಿ 4, 1999 ರಂದು ಕೇಂದ್ರೀಯ ಲೋಕ ಸೇವಾ ಆಯೋಗದ ಮೂಲಕ ಕೇಂದ್ರ ಸರಕಾರದ ಆರೋಗ್ಯ ಸೇವೆಗಳ ಆಯುಷ್ ವಿಭಾಗದಲ್ಲಿ ವೈದ್ಯರಾಗಿ ಕೆಲಸ ಆರಂಭಿಸಿದರು. 2003–2008 ರವರೆಗೆ ಹಿರಿಯ ವೈದ್ಯಕೀಯ ಅಧಿಕಾರಿಯಾಗಿ, 2008–2012 ರವರೆಗೆ ಮುಖ್ಯ ವೈದ್ಯಕೀಯ ಅಧಿಕಾರಿಯಾಗಿ ಹಾಗೂ 2020ರಿಂದ ಜಂಟಿ ನಿರ್ದೇಶಕರಾಗಿ ಕೇಂದ್ರ ಸರಕಾರದ ಆರೋಗ್ಯ ಸೇವೆಗಳ (CGHS) ಆಯುಷ್ ವಿಭಾಗದಲ್ಲಿ ಕೆಲಸ ನಿರ್ವಹಿಸಿದ್ದಾರೆ. ಡಾ. ಅಶೋಕ ಈಟಿ ಅವರನ್ನು ಇತ್ತೀಚೆಗೆ ಕೇಂದ್ರ ಸರಕಾರವು ಸಿಜಿಎಚ್ಎಸ್‌ನ ಆಯುಷ್ ವಿಭಾಗದ ಹೆಚ್ಚುವರಿ ನಿರ್ದೇಶಕರನ್ನಾಗಿ ನೇಮಕ ಮಾಡಿದೆ. ಇದು ದೆಹಲಿ ಕನ್ನಡಿಗರಿಗೆ ಸಂದ ಗೌರವ ಎಂದು ನಾನು ಭಾವಿಸುತ್ತೇನೆ. ಡಾ. ಅಶೋಕ ಈಟಿಯವರಿಗೆ ನಮ್ಮ ಜನಕಪುರಿ ಕನ್ನಡ ಕೂಟ, ದೆಹಲಿ ಕರ್ನಾಟಕ ಸಂಘ ಹಾಗು ನಮ್ಮೆಲ್ಲ ಕನ್ನಡಿಗರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಹಾಗೂ ಶುಭ ಹಾರೈಸುತ್ತೇನೆ.

***ಡಾ. ಎಸ್. ಎಲ್. ಭಂಡಾರಕರ್***

# ಮಾನವ ದೇಹದ ಪವರ್ ಹೌಸ್ - ಯಕೃತ್ತು ಆರೋಗ್ಯ


ಯಕೃತ್ತು ಅಥವಾ ಪಿತ್ತಜನಕಾಂಗವು ಮಾನವನ ದೇಹದಲ್ಲಿ ಶಾರೀರಿಕ ಆರೋಗ್ಯದ ಒಂದು ಪ್ರಮುಖ ಅಂಗವಾಗಿದೆ, ಇದು ಹೊಟ್ಟೆಯ ಮೇಲಿನ ಬಲ ಭಾಗದಲ್ಲಿದೆ, ವ್ಯಾಪಕವಾದ ಪ್ರಮುಖ ಕಾರ್ಯಗಳನ್ನು ಹೊಂದಿದೆ ಮತ್ತು ಚಯಾಪಚಯ, ನಿರ್ವಿಶೀಕರಣ ಮತ್ತು ಜೀರ್ಣಕ್ರಿಯೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ.


ನಮ್ಮ ಇಡೀ ದೇಹದ ರಕ್ತವನ್ನು ಉಳಿಸುವ ಮತ್ತು ಶುದ್ಧೀಕರಿಸುವ ಸಾಮರ್ಥ್ಯವನ್ನು ಹೊಂದಿರುವ ಈ ಅಂಗವು ನಮ್ಮ ದೇಹದ ಸಂರಕ್ಷಕ ತಂತ್ರಾಂಶವಾಗಿದೆ ಮತ್ತು ಅದು ಅನೇಕ ಕಾರ್ಯಗಳನ್ನು ನಡೆಸುವುದಕ್ಕೆ ಸಹಾಯ ಮಾಡುತ್ತದೆ. ಯಕೃತ್ತು ದೇಹದಲ್ಲಿ ನಿರಂತರವಾಗಿ ಸಂಗ್ರಹಿಸಲ್ಪಟ್ಟ ಕೊಲೆಸ್ಟ್ರಾಲ್ ಅನ್ನು ಬೇಕಾದಾಗ ಹೊರಗೆ ಬಿಡಲು ಹಾಗು ವಿಶೇಷವಾಗಿ ರಕ್ತದಲ್ಲಿ ಕೊಲೆಸ್ಟ್ರಾಲ್ ನಿರ್ಮಿಸುವ ಮತ್ತು ಅದರ ಶುದ್ಧಿಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ.

**ದೇಹದ ಅತಿ ದೊಡ್ಡ ಅಂಗವಾದ ಯಕೃತ್ತಿನ ಶರೀರಶಾಸ್ತ್ರ ಮತ್ತು ಅದರ ಕಾರ್ಯಗಳ ಸಂಕ್ಷಿಪ್ತ ಅವಲೋಕನ ಇಲ್ಲಿದೆ:**

**1. ಮೆಟಬಾಲಿಸಮ್ :** ಕಾರ್ಬೋಹೈಡ್ರೇಟ್‌ಗಳು, ಪ್ರೋಟೀನ್‌ಗಳು ಮತ್ತು ಕೊಬ್ಬುಗಳನ್ನು ಒಳಗೊಂಡಂತೆ ವಿವಿಧ ಪೋಷಕಾಂಶಗಳನ್ನು ಚಯಾಪಚಯಗೊಳಿಸಲು ಯಕೃತ್ತು ಕಾರಣವಾಗಿದೆ. ಹೆಚ್ಚುವರಿ ಗ್ಲೂಕೋಸ್ ಅನ್ನು ಗ್ಲೈಕೋಜೆನ್ ಆಗಿ ಸಂಗ್ರಹಿಸುವ ಮೂಲಕ ಮತ್ತು ಅಗತ್ಯವಿದ್ದಾಗ ಅದನ್ನು ಬಿಡುಗಡೆ ಮಾಡುವ ಮೂಲಕ ರಕ್ತದಲ್ಲಿನ ಗ್ಲೂಕೋಸ್ ಮಟ್ಟವನ್ನು ನಿಯಂತ್ರಿಸಲು ಇದು ಸಹಾಯ ಮಾಡುತ್ತದೆ. ಹೆಚ್ಚುವರಿಯಾಗಿ, ಯಕೃತ್ತು ಅಮೈನೋ ಆಮ್ಲಗಳನ್ನು ಪ್ರೋಟೀನ್‌ಗಳಾಗಿ ಪರಿವರ್ತಿಸುತ್ತದೆ ಮತ್ತು ಕೊಲೆಸ್ಟ್ರಾಲ್ ಮತ್ತು ಟ್ರೈಗ್ಲಿಸರೈಡ್‌ಗಳನ್ನು ಸಂಶ್ಲೇಷಿಸುತ್ತದೆ.

**2. ನಿರ್ವಿಶೀಕರಣ :** ಯಕೃತ್ತಿನ ಪ್ರಾಥಮಿಕ ಕಾರ್ಯಗಳಲ್ಲಿ ನಿರ್ವಿಶೀಕರಣ ಒಂದಾಗಿದೆ. ಇದು ರಕ್ತಪ್ರವಾಹದಿಂದ ವಿಷಗಳು, ಔಷಧಗಳು ಮತ್ತು ಚಯಾಪಚಯ ತ್ಯಾಜ್ಯ ಉತ್ಪನ್ನಗಳನ್ನು ಶೋಧಿಸುತ್ತದೆ, ದೇಹದಿಂದ ಹೊರಹಾಕಬಹುದಾದ ಕಡಿಮೆ ಹಾನಿಕಾರಕ ಪದಾರ್ಥಗಳಾಗಿ ಪರಿವರ್ತಿಸುತ್ತದೆ. ಆಲ್ಕೋಹಾಲ್ ಮತ್ತು ಮಾದಕವಸ್ತುಗಳ ಚಯಾಪಚಯ ಕ್ರಿಯೆಯಲ್ಲಿ ಯಕೃತ್ತು ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ.






ಲೇಖಕರು : ಡಾ. ಜಗದೀಶ ಕೃಷ್ಣಮೂರ್ತಿ

ಎಂಬಿಬಿಎಸ್., ಎಂ.ಎಸ್., (PGI-CHD),

ಎಫ್‌ಎಸಿಎಸ್ (Univ. of MIAMI)

ASTS Fellowship in Liver, Kidney, Pancreas and Intestine Transplant

ಕನ್ಸಲ್ಟೆಂಟ್ ಸರ್ಜನ್, ಲಿವರ್ ಟ್ರಾನ್ಸ್‌ಪ್ಲಾಂಟ್ ಮತ್ತು ಹೆಪಾಟೋ ಬಿಲಿಯರಿ ಸರ್ಜರಿ,

ಮ್ಯಾಕ್ಸ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ,

ಸಾಕೇತ್, ನವದೆಹಲಿ-110017

ಮೊ : 9914092196

ಇಮೇಲ್ : docjag247@outlook.com


**3. ಪಿತ್ತರಸ ಉತ್ಪಾದನೆ :** ಪಿತ್ತಜನಕಾಂಗವು ಪಿತ್ತರಸವನ್ನು ಉತ್ಪಾದಿಸುತ್ತದೆ, ಇದು ಜೀರ್ಣಕಾರಿ ದ್ರವವಾಗಿದ್ದು ಅದು ಕೊಬ್ಬನ್ನು ಎಮಲ್ಸಿಫೈ ಮಾಡಲು ಮತ್ತು ಸಣ್ಣ ಕರುಳಿನಲ್ಲಿ ಅವುಗಳ ಹೀರಿಕೊಳ್ಳುವಿಕೆಗೆ ಸಹಾಯ ಮಾಡುತ್ತದೆ. ಪಿತ್ತರಸವನ್ನು ಪಿತ್ತಕೋಶದಲ್ಲಿ ಸಂಗ್ರಹಿಸಲಾಗುತ್ತದೆ ಮತ್ತು ಆಹಾರದ ಕೊಬ್ಬಿನ ಜೀರ್ಣಕ್ರಿಯೆ ಮತ್ತು ಹೀರಿಕೊಳ್ಳುವಿಕೆಗೆ ಸಹಾಯ ಮಾಡಲು ಅಗತ್ಯವಾದಾಗ ಸಣ್ಣ ಕರುಳಿನಲ್ಲಿ ಬಿಡುಗಡೆಯಾಗುತ್ತದೆ.

**4. ಶೇಖರಣೆ :** ಯಕೃತ್ತು ವಿವಿಧ ಪೋಷಕಾಂಶಗಳು ಮತ್ತು ವಿಟಮಿನ್‌ಗಳ ಶೇಖರಣಾ ಅಂಗವಾಗಿ ಕಾರ್ಯನಿರ್ವಹಿಸುತ್ತದೆ. ಇದು ಗ್ಲೈಕೋಜೆನ್ ಅನ್ನು ಸಂಗ್ರಹಿಸುತ್ತದೆ, ಇದು ಊಟದ ನಡುವೆ ಸುಲಭವಾಗಿ ಲಭ್ಯವಿರುವ ಶಕ್ತಿಯ ಮೂಲವಾಗಿ ಕಾರ್ಯನಿರ್ವಹಿಸುತ್ತದೆ. ಹೆಚ್ಚುವರಿಯಾಗಿ, ಯಕೃತ್ತು ವಿಟಮಿನ್ ಎ, ಡಿ, ಇ, ಕೆ ಮತ್ತು ಬಿ 12, ಹಾಗೆಯೇ ಕಬ್ಬಿಣ ಮತ್ತು ತಾಮ್ರದಂತಹ ಖನಿಜಗಳನ್ನು ಸಂಗ್ರಹಿಸುತ್ತದೆ.

**5. ರಕ್ತ ನಿಯಂತ್ರಣ :** ಆಸ್ಮೋಟಿಕ್ ಒತ್ತಡವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುವ ಅಲ್ಬುಮಿನ್, ಮತ್ತು ರಕ್ತ ಹೆಪ್ಪುಗಟ್ಟುವಿಕೆಗೆ ಅಗತ್ಯವಾದ ಹೆಪ್ಪುಗಟ್ಟುವಿಕೆಯ ಅಂಶಗಳಂತಹ ಪ್ರೋಟೀನ್‌ಗಳನ್ನು ಸಂಶ್ಲೇಷಿಸುವ ಮೂಲಕ ಯಕೃತ್ತು ರಕ್ತದ ಪ್ರಮಾಣ ಮತ್ತು ಸಂಯೋಜನೆಯನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಇದು ಹಳೆಯ ಅಥವಾ ಹಾನಿಗೊಳಗಾದ ಕೆಂಪು ರಕ್ತ ಕಣಗಳನ್ನು ಪರಿಚಲನೆಯಿಂದ ಶೋಧಿಸುತ್ತದೆ ಮತ್ತು ತೆಗೆದುಹಾಕುತ್ತದೆ.


**6. ರೋಗ ನಿರೋಧಕ ಕಾರ್ಯ :** ದೇಹದ ಪ್ರತಿರಕ್ಷಣಾ ವ್ಯವಸ್ಥೆಯಲ್ಲಿ ಯಕೃತ್ತು ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಇದು ರೋಗಕಾರಕಗಳು, ಬ್ಯಾಕ್ಟೀರಿಯಾಗಳು ಮತ್ತು ಇತರ ವಿದೇಶಿ ಕಣಗಳನ್ನು ರಕ್ತಪ್ರವಾಹದಿಂದ ತೆಗೆದುಹಾಕಲು ಸಹಾಯ ಮಾಡುವ ಕುಪ್ಫರ್ ಕೋಶಗಳು ಎಂಬ ವಿಶೇಷ ಕೋಶಗಳನ್ನು ಹೊಂದಿರುತ್ತದೆ. ಪಿತ್ತಜನಕಾಂಗವು ಪ್ರತಿರಕ್ಷಣಾ ಅಂಶಗಳನ್ನು ಉತ್ಪಾದಿಸುತ್ತದೆ, ಅದು ಸೋಂಕುಗಳಿಂದ ರಕ್ಷಿಸಲು ಸಹಾಯ ಮಾಡುತ್ತದೆ ಮತ್ತು ಪ್ರತಿರಕ್ಷಣಾ ಕಾರ್ಯವನ್ನು ಬೆಂಬಲಿಸುತ್ತದೆ. ಯಕೃತ್ತು ಬಹುಕ್ರಿಯಾತ್ಮಕ ಅಂಗವಾಗಿದ್ದು ಅದು ಹೋಮಿಯೋಸ್ಟಾಸಿಸ್ ಮತ್ತು ಒಟ್ಟಾರೆ ಆರೋಗ್ಯವನ್ನು ಕಾಪಾಡಿಕೊಳ್ಳಲು ವ್ಯಾಪಕವಾದ ಅಗತ್ಯ ಕಾರ್ಯಗಳನ್ನು ನಿರ್ವಹಿಸುತ್ತದೆ. ಇದರ ಕಾರ್ಯಗಳು ದೇಹದಲ್ಲಿನ ಹಲವಾರು ಶಾರೀರಿಕ ಪ್ರಕ್ರಿಯೆಗಳಿಗೆ ಅವಿಭಾಜ್ಯವಾಗಿದ್ದು, ಒಟ್ಟಾರೆ ಯೋಗಕ್ಷೇಮಕ್ಕೆ ಯಕೃತ್ತಿನ ಆರೋಗ್ಯವನ್ನು ನಿರ್ಣಾಯಕವಾಗಿಸುತ್ತದೆ.

ಯಕೃತ್ತು ದೇಹದಲ್ಲಿ ಪ್ರಮುಖ ಶುದ್ಧೀಕರಣ ಕಾರ್ಯವನ್ನು ನಿರ್ವಹಿಸುತ್ತದೆ. ಇದು ಹೊಂದಿರುವ ಶಕ್ತಿಯ ಮೂಲಕ ನಿರ್ದಿಷ್ಟವಾದ ಮತ್ತು ನಿಷ್ಪರಿಣಾಮಕಾರಿ ಪ್ರತಿಕ್ರಿಯೆಗಳನ್ನು ಸಂವಹನ ಮಾಡುತ್ತದೆ. ಇದು ಮೂಲಭೂತವಾಗಿ ಆಹಾರ, ಮದ್ಯ, ಔಷಧಗಳು ಮತ್ತು ವ್ಯಾಯಾಮದ ಮೂಲಕ ಸಂಗ್ರಹವಾದ ಬೌಂಡ್ ದ್ರಾವಕಗಳನ್ನು ಬಿಡುಗಡೆ ಮಾಡುವ ಕ್ರಿಯಾತ್ಮಕ ಪ್ರತಿಕ್ರಿಯೆಗಳನ್ನು ಉತ್ಪಾದಿಸುತ್ತದೆ.

ಯಕೃತ್ತು ದೇಹದ ಕ್ರಿಯೆಗಳಿಗೆ ಅತ್ಯಂತ ಸಹಾಯಕ ಕೆಲಸವನ್ನು ನಡೆಸುತ್ತದೆ, ರಕ್ತದಲ್ಲಿ ಹೊಂದಿದ ವಿಷವನ್ನು ನಿಷ್ಕ್ರಿಯಗೊಳಿಸಲು ಸಹಾಯ ಮಾಡುತ್ತದೆ. ಅದು ಕ್ಯಾಲ್ಸಿಯಂ, ಫೋಸ್ಫೇಟ್, ಮತ್ತು ಫೆರೋಮ್‌ನಂತಹ ಮೂಲಭೂತ ಧಾತುಗಳ ಸಂಗ್ರಹಣವನ್ನು ಮತ್ತು ನಿಷ್ಕ್ರಿಯಗೊಳಿಸಲು ಸಹಾಯ ಮಾಡುತ್ತದೆ. ಇದು ಸಹಾ ಕ್ರಿಯಾತ್ಮಕವಾಗಿ ಪ್ರತಿಕ್ರಿಯೆ ನೀಡುತ್ತದೆ, ಅದು ಉತ್ಪನ್ನವಾದ ವಿಷವನ್ನು ಬಿಡಿಸುತ್ತದೆ ಮತ್ತು ದೇಹದಿಂದ ಹೊರಹಾಕುತ್ತದೆ.

**ಯಕೃತ್ತಿನ ಪ್ರಮುಖ ಕೆಲಸವಾದ ಶುದ್ಧಿಯ ಪ್ರಕ್ರಿಯೆ ಹೇಗೆ ನಡೆಯುತ್ತದೆ ಎಂಬುದನ್ನು ಕೆಳಗಿನ ಹೆಚ್ಚಿನ ಪ್ರಮುಖ ಅಂಶಗಳಿಂದ ವಿವರಿಸಲಾಗಿದೆ:**

**1. ಸೀಮಿತ ಆಹಾರ ಸೇವನೆ :** ನೀವು ಹೊರಗಿನ ಆಹಾರ ಮತ್ತು ಕಾರ್ಬೋನೇಟೆಡ್ ಪಾನೀಯವನ್ನು ಮಿತವಾಗಿ ಸೇವಿಸಿದಾಗ ಯಕೃತ್ತು ಉತ್ತಮವಾಗಿ



ಕಾರ್ಯನಿರ್ವಹಿಸುತ್ತದೆ.

**2. ಶರೀರದಲ್ಲಿ ನಿರ್ಮಿಸಲ್ಪಟ್ಟ ಕ್ರಿಯಾತ್ಮಕ ಪ್ರತಿಕ್ರಿಯೆ** : ಯಕೃತ್ತು ದೇಹದಲ್ಲಿ ಅನೇಕ ಧಾತುಗಳ ಉತ್ಪತ್ತಿ ಮತ್ತು ವಿನಿಯೋಗವನ್ನು ಕುರಿತು ಕ್ರಿಯಾತ್ಮಕ ಪ್ರತಿಕ್ರಿಯೆಗಳನ್ನು ನಡೆಸುತ್ತದೆ. ಉದಾಹರಣೆಗೆ, ಕ್ಯಾಲ್ಸಿಯಂ ಮತ್ತು ಫೋಸ್ಫೇಟ್ ಧಾತುಗಳ ನಿರ್ಮಾಣ ಮತ್ತು ನಿಷ್ಕ್ರಿಯಗೊಳಿಸುವ ಪ್ರಕ್ರಿಯೆಗಳಿಗೆ ಸಹಾಯ ಮಾಡುತ್ತದೆ.

**3. ರಕ್ತವನ್ನು ಶುದ್ಧಿ ಮಾಡುವುದು :** ಯಕೃತ್ತಿನ ಪ್ರಮುಖ ಕೆಲಸವೆಂದರೆ ರಕ್ತವನ್ನು ಶುದ್ಧಿಮಾಡುವುದು. ಇದು ಹೆಚ್ಚು ಶುದ್ಧಿಯಾದ ರಕ್ತವನ್ನು ಕ್ರಿಯಾತ್ಮಕವಾಗಿ ಬಿಡಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

**4. ಮದ್ಯಪಾನದ ವಿಮುಕ್ತವಾಗುವುದು :** ಪಿತ್ತಜನಕಾಂಗದ ಮುಖ್ಯ ಕೆಲಸವೆಂದರೆ ರಕ್ತವನ್ನು ಶುದ್ಧೀಕರಿಸುವುದು, ಆದರೆ ನೀವು ಹೆಚ್ಚು ಆಲ್ಕೊಹಾಲ್ ಸೇವಿಸಿದಾಗ ಯಕೃತ್ತಿನಲ್ಲಿ ಕೊಬ್ಬಿನ ಶೇಖರಣೆಯಿಂದಾಗಿ ಈ ಕಾರ್ಯದ ಮೇಲೆ ಪರಿಣಾಮ ಬೀರುತ್ತದೆ.

ಯಕೃತ್ತಿನ ಅತ್ಯುತ್ತಮ ವಿಶೇಷತೆ ಎಂದರೆ ಅದರ ಪುನರುತ್ಪಾದನೆಯ ಸಾಮರ್ಥ್ಯ. ಕೊಬ್ಬಿನ ಪಿತ್ತಜನಕಾಂಗವನ್ನು (Fatty Liver) ಮೊದಲೇ ಪತ್ತೆ ಮಾಡಿದಾಗ ಅದನ್ನು ಜೀವನಶೈಲಿ ಮತ್ತು ಆಹಾರದ ಮಾರ್ಪಾಡುಗಳೊಂದಿಗೆ ಸಂಪೂರ್ಣವಾಗಿ ಹಿಂತಿರುಗಿಸಬಹುದು. ಕೊಬ್ಬಿನ ಪಿತ್ತಜನಕಾಂಗವು ಫೈಬ್ರೋಸಿಸ್ / ಸಿರೋಸಿಸ್‌ಗೆ ಮುಂದುವರಿದರೆ ಯಕೃತ್ತು ತನ್ನ ಪುನರುತ್ಪಾದಕ ಸಾಮರ್ಥ್ಯವನ್ನು ಕಳೆದುಕೊಂಡರೆ ಮತ್ತು ನೀವು ಯಕೃತ್ತಿನ ಕಸಿ ಶಸ್ತ್ರಚಿಕಿತ್ಸೆಯ ಅಗತ್ಯವಿರುವ ಯಕೃತ್ತಿನ ವೈಫಲ್ಯವನ್ನು ಹೊಂದಿರಬಹುದು.

ಯಕೃತ್ತಿನ ಪ್ರಮುಖ ಕೆಲಸವನ್ನು ವಿವರಿಸಿದ ಮೇಲೆ, ಅದರ ಆರೋಗ್ಯವನ್ನು ಕಾಪಾಡಿಕೊಳ್ಳಲು ಮತ್ತು ಹೇಗೆ ನಿರ್ದಿಷ್ಟ ಮತ್ತು ಶೀಘ್ರವಾಗಿ ಯಕೃತ್ತನ್ನು ಉಳಿಸಬಹುದು ಎಂದು ನೋಡೋಣ.

**ಯಕೃತ್ತಿನ ಆರೋಗ್ಯ ಶಿಸ್ತಿನ ಮೂಲಕ :**

**1. ಸರಿಯಾದ ಆಹಾರ:** ಯಕೃತ್ತಿನ ಆರೋಗ್ಯಕ್ಕೆ ಮತ್ತು ರಕ್ತ ಶುದ್ಧಿಗೆ ಅತ್ಯಂತ ಮುಖ್ಯವಾದ ಅಂಶವೆಂದರೆ ಸರಿಯಾದ ಆಹಾರ ಸೇವನೆ ಮಾಡುವುದು. ತರಕಾರಿಗಳನ್ನು ಸೇವಿಸುವುದು ಮತ್ತು ಬಹುಶಃ ಯಕೃತ್ತಿನ ಕೆಲಸವನ್ನು ಆದಷ್ಟು ಕಡಿಮೆ ಮಾಡುವುದು ಅದರ ಆರೋಗ್ಯದ ಮುಖ್ಯ ರಕ್ಷಣೆಗಳಾಗಿವೆ.

**2. ತರಕಾರಿ ಮತ್ತು ಫಲಗಳು:** ತರಕಾರಿ ಮತ್ತು ಫಲಗಳ ಸೇವನೆ ವಾಸ್ತವವಾಗಿ ಯಕೃತ್ತಿನ ಆರೋಗ್ಯಕ್ಕೆ ಒಳ್ಳೆಯದು. ಅವು ಯಕೃತ್ತಿನ ಶುದ್ಧಿ ಕ್ರಿಯೆಯನ್ನು ಹೆಚ್ಚಿಸುವ ಹಾಗೂ ಅದರ ಸಾಮರ್ಥ್ಯವನ್ನು ಬಲಪಡಿಸುವ ಅಂಶಗಳಿಗಾಗಿ ಅತ್ಯಂತ ಅಗತ್ಯವಾಗಿದೆ.

**3. ನೀರು:** ಯಕೃತ್ತು ಸರಿಯಾಗಿ ಕೆಲಸಮಾಡುವುದಕ್ಕೆ ತೀರ್ವಾನಿಸುವ ಹಾಗೂ ಹೊಸ ರಕ್ತದ ರೂಪಾಂತರವಾಗುವುದಕ್ಕೆ ನೀರನ್ನು ಹೆಚ್ಚಾಗಿ ಸೇವಿಸುವುದು ಅತ್ಯಂತ ಆವಶ್ಯಕವಾಗಿದೆ.

**4. ಅಲ್ಕೊಹಾಲ್ ಮತ್ತು ಹೆಚ್ಚು ಕೊಲೆಸ್ಟ್ರಾಲ್ ತಡೆಗಟ್ಟು:** ಅಲ್ಕೊಹಾಲ್ ಮತ್ತು ಹೆಚ್ಚು ಕೊಬ್ಬಿನ ಅಂಶವಿರುವ ಆಹಾರವನ್ನು ಕಡಿಮೆ ಪ್ರಮಾಣದಲ್ಲಿ ಬಳಸುವುದರಿಂದ ಯಕೃತ್ತಿನ ರೋಗಗಳ ಹೆಚ್ಚಳವನ್ನು ತಡೆಗಟ್ಟಬಹುದು.

**5. ನಿಯಮಿತ ವ್ಯಾಯಾಮ:** ನಿಯಮಿತ ವ್ಯಾಯಾಮ ಮಾಡುವುದು ಉತ್ತಮ ಆರೋಗ್ಯಕ್ಕೆ ಒಳ್ಳೆಯ ನಿದರ್ಶನ.

**6. ಔಷಧಿ ಬಳಸಬೇಡಿ:** ಅನಾವಶ್ಯಕ ಔಷಧಿಗಳನ್ನು ಬಳಸದಿರಿ, ಅದರಲ್ಲೂ ನೋವು ನಿವಾರಕ ಔಷಧಿಗಳನ್ನು ಹೆಚ್ಚು ಬಳಸಲೇಬಾರದು. ಅವಶ್ಯಕವಾಗಿ ಬಳಸಬೇಕಾದ ಪರಿಸ್ಥಿತಿಯಲ್ಲಿ ವೈದ್ಯರ ಸಲಹೆ ಪಡೆಯಿರಿ.

**7. ನಿಯಮಿತ ಚೆನ್ನಾಗಿ ನಿದ್ರೆ ಪಡೆಯಿರಿ :** ಏಳರಿಂದ ಎಂಟು ಗಂಟೆಗಳ ಸಮಯ ಚೆನ್ನಾಗಿ ನಿದ್ರೆಮಾಡುವುದು ಯಕೃತ್ತು ರೋಗಗಳನ್ನು ನಿಯಂತ್ರಿಸುವಲ್ಲಿ ಸಹಾಯ ಮಾಡಬಲ್ಲದು.

**8. ಸಿಗರೇಟ್ ಬಳಸಬೇಡಿ :** ಸಿಗರೇಟ್‌ನ ಧೂಮವು ಯಕೃತ್ತಿನ ಸ್ವಸ್ಥತೆಗೆ ಅಪಾಯ ತರುತ್ತದೆ. ಆದ್ದರಿಂದ ಧೂಮಪಾನದಿಂದ ದೂರವಿರಿ.

**9. ರೋಗ ನಿವಾರಣೆ:** ಯಕೃತ್ತಿನ ಆರೋಗ್ಯವನ್ನು ಉಳಿಸಲು, ತೆಗೆದುಕೊಳ್ಳಬಾರದ ಔಷಧಿಗಳನ್ನು ಬಳಸುವುದಕ್ಕೆ ವೈದ್ಯರ ಸಲಹೆಯನ್ನು ಅವಶ್ಯಕವಾಗಿ ಪಡೆಯಬೇಕು.

ಈ ಮೇಲಿನ ಮಾರ್ಗಗಳನ್ನು ಅನುಸರಿಸಿ ಯಕೃತ್ತಿನ ರೋಗಗಳನ್ನು ತಡೆಗಟ್ಟಬಹುದು ಮತ್ತು ಆರೋಗ್ಯವನ್ನು ಕಾಪಾಡಿಕೊಳ್ಳಬಹುದು.

ಯಕೃತ್ತಿನ ಆರೋಗ್ಯವನ್ನು ಕಾಪಾಡಲು ಮತ್ತು ಕ್ರಿಯಾಶೀಲತೆಯನ್ನು ಉಳಿಸಲು ಸರಿಯಾದ ಆಹಾರ, ಪೋಷಣೆ, ಮತ್ತು ನಿಯಮಿತ ವ್ಯಾಯಾಮ ಮುಖ್ಯವಾದ ಅಂಶಗಳಾಗಿವೆ. ಈ ಸಾಮಾನ್ಯ ಕ್ರಮಗಳನ್ನು ಪಾಲಿಸುವ ಮೂಲಕ, ಯಕೃತ್ತಿನ ಆರೋಗ್ಯವನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಆದರೆ, ಯಕೃತ್ತಿನ ರೋಗ ಸಂಭವವಿದ್ದಲ್ಲಿ ನಿಮ್ಮ ಆರೋಗ್ಯವನ್ನು ಅತ್ಯುತ್ತಮವಾಗಿ ಇರಿಸಿಕೊಳ್ಳಲು ವೈದ್ಯರ ಸಲಹೆಯನ್ನು ಪಡೆಯಬೇಕು.

**ಇದನ್ನು ಪರಿಹರಿಸಲು, ಈ ಕೆಳಗಿನ ಆಹಾರ ಕ್ರಮಗಳನ್ನು ಸಂಯೋಜಿಸಲು ನಾನು ಶಿಫಾರಸು ಮಾಡುತ್ತೇನೆ :**

**1. ಸ್ಯಾಚುರೇಟೆಡ್ ಮತ್ತು ಟ್ರಾನ್ಸ್ ಕೊಬ್ಬುಗಳನ್ನು ಮಿತಿಗೊಳಿಸಿ:** ಕೆಂಪು ಮಾಂಸ, ಸಂಸ್ಕರಿಸಿದ ಆಹಾರಗಳು ಮತ್ತು ಕರಿದ ಪದಾರ್ಥಗಳ ಸೇವನೆಯನ್ನು ಕಡಿಮೆ ಮಾಡಿ. ನೇರ ಪ್ರೋಟೀನ್ ಮೂಲಗಳಾದ ಮೀನು, ಕೋಳಿ, ಕಾಳುಗಳು ಮತ್ತು ತೋಫುಗಳನ್ನು ಆರಿಸಿಕೊಳ್ಳಿ.

**2. ನಾರಿನ ಅಂಶ ಹೆಚ್ಚಿರುವ ಆಹಾರ (high fibre food) ಸೇವನೆಯನ್ನು ಹೆಚ್ಚಿಸಿ:** ಕೊಲೆಸ್ಟ್ರಾಲ್ ಮಟ್ಟವನ್ನು ಕಡಿಮೆ ಮಾಡಲು ಸಾಕಷ್ಟು ಹಣ್ಣುಗಳು, ತರಕಾರಿಗಳು, ಧಾನ್ಯಗಳು ಮತ್ತು ದ್ವಿದಳ ಧಾನ್ಯಗಳನ್ನು ಸೇವಿಸಿ.

**3. ಆರೋಗ್ಯಕರ ಕೊಬ್ಬನ್ನು ಆರಿಸಿಕೊಳ್ಳಿ:** ಆವಕಾಡೊ, ನಟ್ಸ್ ಮತ್ತು ಬೀಜಗಳು ಹಾಗು ಆಲಿವ್/ಸಾಸಿವೆ/ಸೂರ್ಯಕಾಂತಿ ಎಣ್ಣೆಯಂತಹ ಆರೋಗ್ಯಕರ ಕೊಬ್ಬಿನ ಮೂಲಗಳನ್ನು ನಿಮ್ಮ ಆಹಾರದಲ್ಲಿ ಸೇರಿಸಿ. ಸ್ಯಾಚುರೇಟೆಡ್ ಕೊಬ್ಬನ್ನು ತಪ್ಪಿಸಿ – ಸಂಶ್ಲೇಷಿತ / ಹೈಡ್ರೋಜನೀಕರಿಸಿದ ಕೊಬ್ಬು / ಎಣ್ಣೆ / ಕೊಬ್ಬಿನ ಪ್ರಾಣಿ ಮೂಲವನ್ನು ತಪ್ಪಿಸಿ. ಮೀನು ಸೇವನೆ ಉತ್ತಮ.

**4. ಸಂಸ್ಕರಿಸಿದ ಸಕ್ಕರೆಗಳು ಮತ್ತು ಕಾರ್ಬೋಹೈಡ್ರೇಟ್‌ಗಳನ್ನು ಮಿತಿಗೊಳಿಸಿ:** ಸಕ್ಕರೆ ಆಹಾರಗಳು ಮತ್ತು ಪಾನೀಯಗಳ ಸೇವನೆಯನ್ನು ಕಡಿಮೆ ಮಾಡಿ ಮತ್ತು ಸಿರಿ ಧಾನ್ಯಗಳನ್ನು ಆರಿಸಿಕೊಳ್ಳಿ.

**5. ಆಹಾರ ಭಾಗದ ಗಾತ್ರಗಳನ್ನು ಮೇಲ್ವಿಚಾರಣೆ ಮಾಡಿ:** ಒಟ್ಟಾರೆ ಕ್ಯಾಲೋರಿ ಸೇವನೆಯನ್ನು ನಿರ್ವಹಿಸಲು ಮತ್ತು ಆರೋಗ್ಯಕರ ತೂಕವನ್ನು ನಿರ್ವಹಿಸಲು ಊಟದ ಭಾಗದ ಗಾತ್ರಗಳ ಬಗ್ಗೆ ಗಮನವಿರಲಿ.

ಸಿರೋಸಿಸ್ ಮತ್ತು ಕೊಬ್ಬಿನ ಪಿತ್ತಜನಕಾಂಗವು ಗಂಭೀರವಾದ ಆರೋಗ್ಯ ಪರಿಸ್ಥಿತಿಗಳಾಗಿದ್ದು, ಚಿಕಿತ್ಸೆ ನೀಡದೆ ಬಿಟ್ಟರೆ ದೀರ್ಘಾವಧಿಯ ಪರಿಣಾಮಗಳನ್ನು ಉಂಟುಮಾಡಬಹುದು. ಆದಾಗ್ಯೂ, ಅವುಗಳನ್ನು ತಡೆಗಟ್ಟಲು ಮತ್ತು ಆರೋಗ್ಯಕರ ಯಕೃತ್ತನ್ನು ಕಾಪಾಡಿಕೊಳ್ಳಲು ಮೇಲಿನ ಕ್ರಮಗಳ ಜೊತೆ ನೀವು ತೆಗೆದುಕೊಳ್ಳಬಹುದಾದ ಇನ್ನು ಹಲವಾರು ಹಂತಗಳಿವೆ:

**6. ವಿಷಗಳನ್ನು ತಪ್ಪಿಸಿ:** ಕೆಲವು ವಿಷಗಳು ಮತ್ತು ರಾಸಾಯನಿಕಗಳಿಗೆ ಒಡ್ಡಿಕೊಳ್ಳುವುದರಿಂದ ಕಾಲಾನಂತರದಲ್ಲಿ ಯಕೃತ್ತು ಹಾನಿಗೊಳಗಾಗಬಹುದು. ನಿಮ್ಮ ಪರಿಸರದ ಬಗ್ಗೆ ಜಾಗರೂಕರಾಗಿರಿ ಮತ್ತು ಕೀಟನಾಶಕಗಳು, ಶುಚಿಗೊಳಿಸುವ ಉತ್ಪನ್ನಗಳು ಮತ್ತು ಕೈಗಾರಿಕಾ ರಾಸಾಯನಿಕಗಳಂತಹ ಹಾನಿಕಾರಕ ಪದಾರ್ಥಗಳಿಗೆ ಒಡ್ಡಿಕೊಳ್ಳುವುದನ್ನು ಕಡಿಮೆ ಮಾಡಲು ಪ್ರಯತ್ನಿಸಿ.

**7. ವ್ಯಾಕ್ಸಿನೇಷನ್ ಪಡೆಯಿರಿ:** ವೈರಲ್ ಹೆಪಟೈಟಿಸ್, ನಿರ್ದಿಷ್ಟವಾಗಿ ಹೆಪಟೈಟಿಸ್ ಬಿ ಮತ್ತು ಹೆಪಟೈಟಿಸ್ ಸಿ, ಚಿಕಿತ್ಸೆ ನೀಡದೆ ಬಿಟ್ಟರೆ ಸಿರೋಸಿಸ್ ಗೆ ಕಾರಣವಾಗಬಹುದು.ವಿಶೇಷವಾಗಿ ನೀವು ಈ ವೈರಸ್‌ಗಳಿಗೆ ಒಡ್ಡಿಕೊಳ್ಳುವ ಅಪಾಯವಿದ್ದರೆ ನಿಮ್ಮ ವ್ಯಾಕ್ಸಿನೇಷನ್‌ಗಳ ಕುರಿತು ನೀವು ನವೀಕೃತವಾಗಿರುವಿರಿ ಎಂದು ಖಚಿತಪಡಿಸಿಕೊಳ್ಳಿ.


**8. ದೀರ್ಘಕಾಲದ ಪರಿಸ್ಥಿತಿಗಳನ್ನು ನಿರ್ವಹಿಸಿ:** ಮಧುಮೇಹ, ಅಧಿಕ ಕೊಲೆಸ್ಟ್ರಾಲ್ ಮತ್ತು ಅಧಿಕ ರಕ್ತದೊತ್ತಡದಂತಹ ಪರಿಸ್ಥಿತಿಗಳು ನಿಮ್ಮ ಯಕೃತ್ತಿನ ಕಾಯಿಲೆಯನ್ನು ಅಭಿವೃದ್ಧಿಪಡಿಸುವ ಅಪಾಯವನ್ನು ಹೆಚ್ಚಿಸಬಹುದು. ಜೀವನಶೈಲಿಯ ಬದಲಾವಣೆಗಳು ಮತ್ತು ಅಗತ್ಯವಿದ್ದರೆ, ಔಷಧಿಗಳ ಮೂಲಕ ಈ ಪರಿಸ್ಥಿತಿಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ನಿಮ್ಮ ಆರೋಗ್ಯ ಪೂರೈಕೆದಾರರೊಂದಿಗೆ ಕೆಲಸ ಮಾಡಿ.

**9. ನಿಯಮಿತ ಆರೋಗ್ಯ ತಪಾಸಣೆ:** ನಿಮ್ಮ ಆರೋಗ್ಯ ರಕ್ಷಣೆ ನೀಡುಗರಿಗೆ ನಿಯಮಿತ ಭೇಟಿಗಳು ನಿಮ್ಮ ಯಕೃತ್ತಿನ ಆರೋಗ್ಯವನ್ನು ಮೇಲ್ವಿಚಾರಣೆ ಮಾಡಲು ಮತ್ತು ಯಾವುದೇ ಸಂಭಾವ್ಯ ಸಮಸ್ಯೆಗಳನ್ನು ಮೊದಲೇ ಪತ್ತೆಹಚ್ಚಲು ಸಹಾಯ ಮಾಡುತ್ತದೆ. ನಿಮ್ಮ ವೈದ್ಯರೊಂದಿಗೆ ನೀವು ಹೊಂದಿರುವ ಯಾವುದೇ ಕಾಳಜಿ ಅಥವಾ ರೋಗಲಕ್ಷಣಗಳನ್ನು ಚರ್ಚಿಸಲು ಮರೆಯದಿರಿ.

ಈ ತಡೆಗಟ್ಟುವ ಕ್ರಮಗಳನ್ನು ಅನುಸರಿಸಿ ಮತ್ತು ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳುವ ಮೂಲಕ, ನೀವು ಸಿರೋಸಿಸ್ ಮತ್ತು ಕೊಬ್ಬಿನ ಪಿತ್ತಜನಕಾಂಗದ ಕಾಯಿಲೆಯ ಅಪಾಯವನ್ನು ಗಮನಾರ್ಹವಾಗಿ ಕಡಿಮೆ ಮಾಡಬಹುದು ಮತ್ತು ಸೂಕ್ತವಾದ ಯಕೃತ್ತಿನ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ತಡೆಗಟ್ಟುವಿಕೆ ಪ್ರಮುಖವಾದುದು ಎಂಬುದನ್ನು ನೆನಪಿಡಿ, ಆದ್ದರಿಂದ ಆರೋಗ್ಯಕರ ನಾಳೆಗಾಗಿ ಇಂದು ಧನಾತ್ಮಕ ಬದಲಾವಣೆಗಳನ್ನು ಮಾಡಲು ಪ್ರಾರಂಭಿಸಿ.

ಆಹಾರದ ಬದಲಾವಣೆಗಳ ಜೊತೆ ಜೊತೆಗೆ, ವಾರದ ಹೆಚ್ಚಿನ ದಿನಗಳಲ್ಲಿ ಕನಿಷ್ಠ 30 ನಿಮಿಷಗಳ ಕಾಲ ವೇಗದ ನಡಿಗೆ, ಈಜು ಅಥವಾ ಸೈಕ್ಲಿಂಗ್‌ನಂತಹ ಮಧ್ಯಮ ದೈಹಿಕ ವ್ಯಾಯಾಮದಲ್ಲಿ ತೊಡಗಿಸಿಕೊಳ್ಳಲು ನಾನು ನಿಮ್ಮನ್ನು ಪ್ರೋತ್ಸಾಹಿಸುತ್ತೇನೆ.■

# 2023ರ ಸಾಲಿನಲ್ಲಿ ಪದ್ಮಪ್ರಶಸ್ತಿಗಳನ್ನು ಪಡೆದಿರುವ ಕನ್ನಡ ನಾಡಿನ ಕಣ್ಮಣಿಗಳು




**ಡಾ. ಸೀತಾರಾಮ್ ಜಿಂದಾಲ್-ಪದ್ಮಭೂಷಣ** - ಜಿಂದಾಲ್ ಅಲುಮಿನಿಯಂ ಲಿಮಿಟೆಡ್‌ನ ಚೇರ್‌ಮನ್ ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿರುವ ಡಾ. ಸೀತಾರಾಮ್ ಜಿಂದಾಲ್ ಅವರು ಜಿಂದಾಲ್ ಗ್ರೂಪ್ ಆಫ್ ಕಂಪನಿಯ ಸ್ಥಾಪಕರಲ್ಲೊಬ್ಬರು. 90 ವರ್ಷದ ಹಿರಿಯ ಕನ್ನಡಿಗ, ಉದ್ಯಮಿ, ಪರೋಪಕಾರಿ, ಸಮಾಜ ಸೇವಕರಾಗಿರುವ ಇವರು ಬೆಂಗಳೂರಿನಲ್ಲಿರುವ ಜಿಂದಾಲ್ ನೇಚರ್ ಕ್ಯೂರ್ ಸಂಸ್ಥೆಯಲ್ಲಿ (JNI) ಪ್ರಕೃತಿ ಚಿಕಿತ್ಸೆಯನ್ನು ಪ್ರಚರಿಸುತ್ತಿದ್ದಾರೆ. ಇವರು ಪ್ರಕೃತಿ ಚಿಕಿತ್ಸೆ (Naturopathy) ಯಲ್ಲಿ ಪದವಿ ಪಡೆದಿರುತ್ತಾರೆ, ತುಮಕೂರು ವಿಶ್ವವಿದ್ಯಾಲಯ ಇವರಿಗೆ ಡಿ.ಎಸ್‌ಸಿ. ಪದವಿ ನೀಡಿ ಗೌರವಿಸಿದೆ. ತಮ್ಮ ಅವಿರತ ಶ್ರಮದಿಂದ ಔಷಧಿ ರಹಿತ ಚಿಕಿತ್ಸಾಕ್ರಮಗಳನ್ನು ಕಂಡು ಹಿಡಿದು ಜನರ ಜೀವನ ಶೈಲಿಯಿಂದ ಬರಬಹುದಾದ ರೋಗಗಳ ಪರಿಸ್ಥಿತಿ ಸುಧಾರಣೆ, ಉಪಚಾರ ನೀಡುವಲ್ಲಿ ಇವರು ಯಶಸ್ವಿಯಾಗಿದ್ದಾರೆ. ಶ್ರೀಯುತರು ಸಮಾಜದ ಅಭಿವೃದ್ಧಿಗೆ, ಜನರ ಯೋಗಕ್ಷೇಮಕ್ಕೆ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿರುವರಲ್ಲದೇ, ತಮ್ಮ ಅಮೂಲ್ಯ ಸಮಯವನ್ನು ಸಾಮಾಜಿಕ ಹಾಗೂ ದಾನಧರ್ಮದ ಕಾರ್ಯಗಳಿಗೆ ವಿನಿಯೋಗಿಸುತ್ತಿದ್ದಾರೆ, ಸಾಕಷ್ಟು ಧನ ಸಹಾಯವನ್ನೂ ನೀಡುತ್ತಿದ್ದಾರೆ. ಶಿಕ್ಷಣ, ವೈದ್ಯಕೀಯ ಹಾಗೂ ಸಾಮಾಜಿಕ ಸೇವಾ ವಲಯಗಳಲ್ಲಿ 16ಕ್ಕೂ ಹೆಚ್ಚು ಚಾರಿಟೇಬಲ್ ಟ್ರಸ್ಟ್ ಮತ್ತು ಸಂಸ್ಥೆಗಳನ್ನು ಸ್ಥಾಪಿಸಿ, ಮುನ್ನಡೆಸುತ್ತಾ ಸಮುದಾಯದ ಏಳಿಗೆಗೆ ಶ್ರಮಿಸುತ್ತಿದ್ದಾರೆ. ವ್ಯಾಪಾರ ಮತ್ತು ಕೈಗಾರಿಕೆ ಕ್ಷೇತ್ರದಲ್ಲಿ ಇವರ ಸೇವೆಯನ್ನು ಪರಿಗಣಿಸಿ ಕೇಂದ್ರ ಸರ್ಕಾರವು ಇವರಿಗೆ ಪದ್ಮಭೂಷಣ ಪ್ರಶಸ್ತಿಯನ್ನು ನೀಡಿದೆ.



**ಶ್ರೀ ಸೋಮಣ್ಣ-ಪದ್ಮಶ್ರೀ**- ಕರ್ನಾಟಕದ ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಹೆಚ್ಚಾಗಿ ವಾಸಿಸುತ್ತಿರುವ ಜೇನುಕುರುಬ ಸಮುದಾಯಕ್ಕೆ ಸೇರಿದ ಶ್ರೀ ಸೋಮಣ್ಣ ಅವರು ಅತ್ಯಂತ ವಿಶಿಷ್ಟ ವ್ಯಕ್ತಿ. ನಮ್ಮ ದೇಶವೆಂಬ ಬಹುತ್ವದ ಜೇನುಗೂಡಿಗೆ ಮಕರಂದವನ್ನು ಅಂತರ್ಗತಗೊಳಿಸಿದ ಶ್ರಮಜೀವಿಗಳಲ್ಲಿ ಜೇನು ಕುರುಬರ ಸೋಮಣ್ಣ ಒಬ್ಬರು.

ತಮ್ಮ ಪಾರಂಪರಿಕ ವಾಸದ ನೆಲೆಯನ್ನು ಕಳೆದುಕೊಂಡು ಜೀತ ಮಾಡುತ್ತಿದ್ದ ಕುನ್ನಯ್ಯ ಅವರ ಮಗನಾಗಿ 01.06.1957 ರಲ್ಲಿ ಜನಿಸಿದ ಸೋಮಣ್ಣ ತಾನು ಹುಟ್ಟಿ ಬೆಳೆದ ಆಲತ್ತಾಳ ಹುಂಡಿಯಿಂದ ಒಕ್ಕಲೆದ್ದು ಮತ್ತಾ ಹಾಡಿಗೆ ಬಂದು ನೆಲಸುತ್ತಾರೆ. ಸುಮಾರು ಅರ್ಧ ಶತಮಾನ ಕ್ರೌರ್ಯ ದೌರ್ಜನ್ಯವನ್ನು ಎದುರಿಸಿದ ಸೋಮಣ್ಣ ಅವರಿಗೆ ಅರಣ್ಯಾಧಿಕಾರಿಗಳ ಮೇಲೆ ಕ್ರೋಧವಿದ್ದರೂ ಮುಗುಳ್ನಗೆಯಿಂದ ಮುಖಾಮುಖಿ ಮಾಡುತ್ತಾರೆ. ತಮಗೆ ಆಗಿರುವ ಅನ್ಯಾಯಕ್ಕೆ ವಿಷಾದದ ತೀವ್ರತೆಯನ್ನು ಮೀರಲು ಸೇಡು, ಕಹಿ ಮತ್ತು ಕ್ರೌರ್ಯಗಳನ್ನು ಮೈಗೂಡಿಕೊಳ್ಳದೆಯೂ ಎದುರಾಳಿಯನ್ನು ಗೆಲ್ಲುವ ತಂತ್ರವಾಗಿ ಸೋಮಣ್ಣ ಲಘು ವಿಡಂಬನೆಯನ್ನು ಬಳಸುತ್ತಾ ಬಂದಿದ್ದಾರೆ. ಸರ್ಕಾರ ಒಕ್ಕಲೆಬ್ಬಿಸಿದ ಆದಿವಾಸಿ ಸಮುದಾಯಗಳು ತಮ್ಮ ಪರಂಪರೆಯನ್ನು ಕುಗ್ಗಿಸುವ ಪ್ರಯತ್ನಗಳು ನಡೆದಾಗಲೂ ಸಹಾ ಅಖಂಡವಾಗಿ ಮೆಟ್ಟಿ ನಿಲ್ಲುವ ಸೃಜನಶೀಲ ಪರಂಪರೆಯ ವಾರಸುದಾರ ಶ್ರೀ ಸೋಮಣ್ಣ. ಕಡುಬಡತನದ ಕುಟುಂಬದಲ್ಲಿ ಹುಟ್ಟಿ ಬೆಳೆದ ಅವರಿಗೆ ಕಾಡೇ ಪಾಠಶಾಲೆ, ಸಾಂಪ್ರದಾಯಿಕ ಶಿಕ್ಷಣ ಪಡೆಯಲು ಸಾಧ್ಯವಾಗಲಿಲ್ಲ. ಕ್ರಿಯಾಶೀಲ ಸೋಮಣ್ಣ ತನ್ನ ಸಮುದಾಯದ ಇರುವನ್ನು ಬದಲಾಯಿಸಲು ಪ್ರಯತ್ನಿಸಿದರು. ತನಗಿದ್ದ ಮಿತಿಗಳನ್ನು, ಬಡತನವನ್ನು ಮೀರಿ ಬೆಳೆದರು. ಕಳೆದ ಮೂರ್ನಾಲ್ಕು ದಶಕಗಳಿಂದ ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯಲ್ಲಿರುವ ಒಕ್ಕಲೆದ್ದ ಭೂರಹಿತ ಆದಿವಾಸಿಗಳನ್ನು ಸಂಘಟಿಸಿದ್ದಾರೆ, ಅವರ ಪುನರ್ವಸತಿಗಾಗಿ ಚಳುವಳಿಗಳನ್ನು ರೂಪಿಸಿದ್ದಾರೆ.

ನಾಗರಹೊಳೆ ದಟ್ಟಾರಣ್ಯದಲ್ಲಿ ತಾಜ್ ಹೋಟೆಲ್ ನಿರ್ಮಾಣ ವಿರುದ್ಧ ಹೋರಾಡಿದ್ದಾರೆ. ಆದಿವಾಸಿಗಳಿಗೆ ಅವರ ಅಂತರಂಗದ ಬಂಧುವಾಗಿ, ಪಡಿತರ ಚೀಟಿ ದೊರಕಿಸಿಕೊಟ್ಟು, ಅವರ ಪ್ರದೇಶದಲ್ಲಿ ನ್ಯಾಯ ಬೆಲೆ ಅಂಗಡಿ ತೆರೆದು ಬಡ ಆದಿವಾಸಿ ಕುಟುಂಬಗಳ ಆಹಾರ ಕೊರತೆ ನೀಗುವಂತೆ ಮಾಡುವಲ್ಲಿ ಸೋಮಣ್ಣನವರ ಪಾತ್ರ ಹಿರಿದು. ಪಶ್ಚಿಮಘಟ್ಟ ಉಳಿಸುವ ಸಲುವಾಗಿ ಕೈಗೊಂಡ ಗೋವಾ ಟು ಕನ್ಯಾಕುಮಾರಿ ಕಾಲ್ನಡಿಗೆ ಜಾಥಾದಲ್ಲಿ ಇವರು ಮುಂಚೂಣಿಯಲ್ಲಿದ್ದರು. 2006ರಲ್ಲಿ ಜಾರಿಗೆ ಬಂದ ಅರಣ್ಯವಾಸಿಗಳ ಪಾರಂಪರಿಕ ಹಕ್ಕುಗಳ ಸಮಿತಿಯಲ್ಲಿ ಸೋಮಣ್ಣ ಸಕ್ರಿಯವಾಗಿ ಹೋರಾಡುತ್ತಿದ್ದಾರೆ. 1991ರಲ್ಲಿ ಫಿಲಿಪೈನ್ಸ್ ದೇಶದಲ್ಲಿ ನಡೆದ ಆದಿವಾಸಿಗಳ ಮೇಳದಲ್ಲಿ ಸೋಮಣ್ಣ ಕರ್ನಾಟಕದ ಬುಡಕಟ್ಟು ಸಮುದಾಯಗಳನ್ನು ಪ್ರತಿನಿಧಿಸಿದ್ದರು. ರಾಜ್ಯ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿಯಿಂದ ವಂಚಿತರಾದರೂ ಗೆಳೆಯರೆಲ್ಲ ಸೇರಿ ಇವರಿಗೆ ಜನ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡಿದ್ದಾರೆ. ಇಂತಹ ಅಪರೂಪದ ವ್ಯಕ್ತಿ ಸೋಮಣ್ಣ ಅವರು ಸಮಾಜಕ್ಕೆ ನೀಡಿದ ಸೇವೆಯನ್ನು ಗುರುತಿಸಿ ಭಾರತ ಸರ್ಕಾರವು ಪದ್ಮಶ್ರೀ ಪ್ರಶಸ್ತಿ ನೀಡಿ ಅವರನ್ನು ಗೌರವಿಸಿರುವುದು ತಳ ಸಮುದಾಯಗಳ ಸೃಜನಶೀಲ ಬದುಕಿಗೆ ಸಂದ ಬಹುಮಾನವಾಗಿದೆ.



**ಶ್ರೀ ರೋಹನ್ ಮಚಂಡ ಬೋಪಣ್ಣ-ಪದ್ಮಶ್ರೀ** - ಇವರು ಒಬ್ಬ ಭಾರತೀಯ ವೃತ್ತಿಪರ ಟೆನಿಸ್ ಆಟಗಾರ. ಡಬಲ್ಸ್ (ಮೆನ್ಸ್ ಮತ್ತು ಮಿಶ್ರ) ನಲ್ಲಿ ಪರಿಣಿತಿ ಪಡೆದಿದ್ದಾರೆ. ಇತ್ತೀಚೆಗೆ ಮೆಲ್ಬೋರ್ನ್‌ನಲ್ಲಿ ನಡೆದ 2024ರ ಆಸ್ಟ್ರೇಲಿಯನ್ ಓಪನ್‌ನ ಪುರುಷರ ಡಬಲ್ಸ್‌ನಲ್ಲಿ ಮಾಥ್ಯೂ ಎಬ್ಡೆನ್ ಅವರೊಂದಿಗೆ ಪ್ರಶಸ್ತಿಯನ್ನು ತಮ್ಮ 43ನೇ ವಯಸ್ಸಿನಲ್ಲಿ ಗೆದ್ದು ಮೊದಲ ಬಾರಿ ವಿಶ್ವದ ನಂ.1, ಶ್ರೇಯಾಂಕ ಪಡೆದಿದ್ದಾರೆ.

04.03.1980 ರಲ್ಲಿ ಬೆಂಗಳೂರಿನಲ್ಲಿ ಜನಿಸಿದ ಇವರು 11ನೇ ವಯಸ್ಸಿನಿಂದ ಟೆನಿಸ್ ಆಡುತ್ತಿದ್ದಾರೆ. ಇವರ ತಂದೆ ಶ್ರೀ ಎಂ.ಜಿ. ಬೋಪಣ್ಣ ಕಾಫಿ ಪ್ಲಾಂಟರ್ ಮತ್ತು ತಾಯಿ ಶ್ರೀಮತಿ ಮಲಿಕಾ ಬೋಪಣ್ಣ ಗೃಹಿಣಿ, ಸಂಗಾತಿ ಸುಪ್ರಿಯ ಅನ್ನಯ್ಯ. 6 ಅಡಿ ನಾಲ್ಕು ಇಂಚು ಎತ್ತರವಿರುವ ಬೋಪಣ್ಣ ಅವರು ಡೇವಿಸ್ ಕಪ್ ಏಷ್ಯನ್ ಗೇಮ್ಸ್ ಮತ್ತು ಒಲಂಪಿಕ್ ಗೇಮ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ. ಇವರು ಗ್ರ್ಯಾಂಡ್ ಸ್ಲಾಮ್ ಡಬಲ್ಸ್‌ನಲ್ಲಿ ಆಸ್ಟ್ರೇಲಿಯನ್ ಓಪನ್ (2024) ನಲ್ಲಿ ವಿನ್ನರ್ಸ್, ಫ್ರೆಂಚ್ ಓಪನ್ (2022) ನಲ್ಲಿ ಸೆಮಿಫೈನಲಿಸ್ಟ್, ವಿಂಬಲ್ಡನ್ (2013, 2015, 2023)ನಲ್ಲಿ ಸೆಮಿಫೈನಲಿಸ್ಟ್ ಹಾಗೂ ಯು.ಎಸ್. ಓಪನ್ (2010, 2023) ರಲ್ಲಿ ಫೈನಲಿಸ್ಟ್ (ರನ್ನರ್ ಅಪ್) ಆಗಿದ್ದಾರೆ. ಹಾಗೆನೇ ಗ್ರ್ಯಾಂಡ್ ಸ್ಲಾಮ್ ಮಿಶ್ರ ಡಬಲ್ಸ್‌ನಲ್ಲಿ ಫ್ರೆಂಚ್ ಓಪನ್ (2012)ರಲ್ಲಿ ವಿನ್ನರ್ಸ್, ಆಸ್ಟ್ರೇಲಿಯನ್ ಓಪನ್ (2018,2023)ನಲ್ಲಿ ಫೈನಲಿಸ್ಟ್ ಯು.ಎಸ್. ಓಪನ್ (2015)ನಲ್ಲಿ ಸೆಮಿಫೈನಲಿಸ್ಟ್ ಹಾಗು ವಿಂಬಲ್ಡನ್ (2011, 2012, 2013 ಮತ್ತು 2017) ನಲ್ಲಿ ಕ್ವಾರ್ಟರ್ ಫೈನಲಿಸ್ಟ್ ಆಗಿದ್ದರು.

2018ರ ಜಕಾರ್ತಾ ಏಷ್ಯನ್ ಗೇಮ್ಸ್‌ನಲ್ಲಿ ಡಬಲ್ಸ್‌ನಲ್ಲಿ ಹಾಗೂ 2022ರಲ್ಲಿ ಹ್ಯಾಂಗ್ಝೌನಲ್ಲಿ ನಡೆದ ಏಷ್ಯನ್ ಗೇಮ್ಸ್‌ನಲ್ಲಿ ಮಿಶ್ರ ಡಬಲ್ಸ್‌ನಲ್ಲಿ ಚಿನ್ನದ ಪದಕ ಪಡೆದಿದ್ದಾರೆ. 2003 ರಲ್ಲಿ ಹೈದರಾಬಾದ್‌ನಲ್ಲಿ ನಡೆದ ಆಫ್ರೋ-ಏಷ್ಯನ್ ಗೇಮ್ಸ್‌ನಲ್ಲಿ ಡಬಲ್ಸ್ ಮತ್ತು ಟೀಮ್ ಈವೆಂಟ್‌ನಲ್ಲಿ ಚಿನ್ನದ ಪದಕ ಗಳಿಸಿದ್ದಾರೆ. 2007ರಲ್ಲಿ ಬೋಪಣ್ಣ ಅವರು ಸಾನಿಯಾ ಮಿರ್ಜಾ ಅವರೊಂದಿಗೆ ಏಷ್ಯನ್ ಹಾಪ್‌ಮನ್ ಕಪ್ ಅನ್ನು ಗೆದ್ದಿದ್ದಾರೆ. ಮಾಸ್ಟರ್ಸ್ 1000 ಫೈನಲ್ಸ್‌ನಲ್ಲಿ 5 ಬಾರಿ ಪ್ರಶಸ್ತಿ ಗೆದ್ದಿದ್ದಾರೆ. ಬೋಪಣ್ಣ ಅವರನ್ನು 2010ರಲ್ಲಿ ಮೊನಾಕೊ ಮೂಲದ ಸಂಸ್ಥೆಯಾದ ಪೀಸ್ ಅಂಡ್ ಸ್ಪೋರ್ಟ್ಸ್‌ನಿಂದ ಶಾಂತಿಗಾಗಿ ಚಾಂಪಿಯನ್ ಆಗಿ ನಾಮ ನಿರ್ದೇಶನ ಮಾಡಲಾಗಿದೆ. 2010ರಲ್ಲಿ ಪಾಕಿಸ್ತಾನದ ಖುರೇಷಿ ಜೊತೆ ಆರ್ಥರ್ ಆಶ್ ಹ್ಯುಮಾನಿಟೇರಿಯನ್ ಆಫ್ ದಿ ಇಯರ್ ಪ್ರಶಸ್ತಿಯನ್ನು ಪಡೆದಿದ್ದಾರೆ. ಕರ್ನಾಟಕ ಸರ್ಕಾರ 2005 ರಲ್ಲಿ ಇವರಿಗೆ ಏಕಲವ್ಯ ಪ್ರಶಸ್ತಿ ನೀಡಿ ಗೌರವಿಸಿದೆ. ಬೋಪಣ್ಣ 2019ರಲ್ಲಿ ಭಾರತ ಸರ್ಕಾರ ನೀಡಿದ ಅರ್ಜುನ ಪ್ರಶಸ್ತಿಗೆ ಭಾಜನರಾಗಿದ್ದಾರೆ. 2024ರಲ್ಲಿ ಭಾರತ ಸರ್ಕಾರವು ಕ್ರೀಡಾ ಕ್ಷೇತ್ರದಲ್ಲಿ ಅವರ ಸಾಧನೆಯನ್ನು ಗುರುತಿಸಿ ಪದ್ಮಶ್ರೀ ಪ್ರಶಸ್ತಿ ನೀಡಿರುವುದು ಹೆಮ್ಮೆಯ ವಿಷಯ.



**ಶ್ರೀಮತಿ ಡಾ. ಪ್ರೇಮಾ ಧನರಾಜ್-ಪದ್ಮಶ್ರೀ**-72 ವರ್ಷ ವಯಸ್ಸಿನ ಡಾ. ಪ್ರೇಮಾ ಧನರಾಜ್ ಅವರ ಬದುಕೇ ಒಂದು ರೋಚಕ ಕಥೆ. ಸುಟ್ಟ ದೇಹದಿಂದ ಪದ್ಮಶ್ರೀ ಪಡೆಯುವವರೆಗಿನ ಅವರ ಜೀವನದ ಹೋರಾಟದ ಹಾದಿ, ಸಾಹಸಗಾಥೆ ಎಲ್ಲರೂ ಅಚ್ಚರಿ ಪಡುವಂತಹದ್ದು. ಬೆಂಗಳೂರಿನಲ್ಲಿ 1965ರಲ್ಲಿ ಬೆಂಕಿ ಅವಘಡದಿಂದ ಶೇ. 50ರಷ್ಟು ಸುಟ್ಟು ಗಾಯಗಳಾಗಿದ್ದ ಎಂಟು ವರ್ಷದ ಬಾಲಕಿ ಪ್ರೇಮಾ ಬಳಿಕ ಆತ್ಮಸ್ಥೈರ್ಯದಿಂದ ಪರಿಸ್ಥಿತಿಯನ್ನು ಎದುರಿಸಿ ವೈದ್ಯಳಾಗಿ ಸುಟ್ಟ ಗಾಯಗಳಿಗೆ ತುತ್ತಾದ ಸುಮಾರು 25000 ಕ್ಕೂ ಹೆಚ್ಚು ಜನರಿಗೆ ಉಚಿತ ಚಿಕಿತ್ಸೆಯನ್ನು ನೀಡಿದ್ದಾರೆ. ಪ್ಲಾಸ್ಟಿಕ್ ಸರ್ಜರಿ ಕುರಿತು ಮೂರು ಪುಸ್ತಕಗಳನ್ನು ಸಹಾ ಬರೆದು ಹೊರ ತಂದಿದ್ದಾರೆ.

ತಮಿಳುನಾಡಿನ ವೆಲ್ಲೂರಿನಲ್ಲಿ ಜನಿಸಿದ ಪ್ರೇಮಾ ಅವರ ತಂದೆ ಶ್ರೀ ಸಿ.ಎಸ್. ಧನರಾಜ್ ಹಾಗೂ ತಾಯಿ ಶ್ರೀಮತಿ ರೋಸಿ ಧನರಾಜ್. ತಮ್ಮ ಅಡಿಗೆ ಮನೆಯಲ್ಲಿ ಸ್ಟವ್ ಸಿಡಿದು ಬೆಂಕಿ ಅವಘಡದಲ್ಲಿ ಸಿಲುಕಿ ಮುಖ, ಕುತ್ತಿಗೆ ಹಾಗು ದೇಹದಲ್ಲಿ ಸುಟ್ಟು ಗಾಯಗಳಾಗಿದ್ದ ಮಗಳು ಪ್ರೇಮಾಳನ್ನು ವೆಲ್ಲೂರಿನ ಕ್ರಿಶ್ಚಿಯನ್ ಮೆಡಿಕಲ್ ಕಾಲೇಜಿಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದರು. ಚೇತರಿಸಿಕೊಂಡ ಪ್ರೇಮಾ ಮನೋಧೈರ್ಯದಿಂದ

ಆತ್ಮವಿಶ್ವಾಸದಿಂದ ಪರಿಸ್ಥಿತಿಯನ್ನು ನಿಭಾಯಿಸಿ ತಮ್ಮ ತಾಯಿಯ ಆಶಯದಂತೆ ಸಮಾಜ ಸೇವೆಗಾಗಿ ಜೀವನವನ್ನೇ ಮುಡಿಪಿಟ್ಟರು. ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಮೆಡಿಕಲ್ ಪದವಿ (ಎಂ.ಬಿ.ಬಿ.ಎಸ್.) ಪಡೆದ ನಂತರ ಸರ್ಜರಿ ವಿಭಾಗದಲ್ಲಿ ಹೆಚ್ಚಿನ ಅಧ್ಯಯನ ಮಾಡಿ ಪ್ಲಾಸ್ಟಿಕ್ ಸರ್ಜನ್ ಆಗಿ ಹೊರ ಹೊಮ್ಮಿದರು. ಅಮೇರಿಕಾದಲ್ಲಿ ಗ್ಲಾಸ್ಕೋದಿಂದ ಸ್ನಾತಕೋತ್ತರ ಪದವಿ ಪಡೆದ ಡಾ. ಪ್ರೇಮಾ ದೇಶದ ಶ್ರೇಷ್ಠ ಪ್ಲಾಸ್ಟಿಕ್ ಸರ್ಜನ್ ಆಗಿ ಗುರುತಿಸಿಕೊಂಡರು.

ವೆಲ್ಲೂರಿನ ವೈದ್ಯಕೀಯ ಆಸ್ಪತ್ರೆಯಲ್ಲಿ ಸರ್ಜನ್ ಆಗಿ ಸೇವೆ ಆರಂಭಿಸಿದ ಡಾ. ಪ್ರೇಮಾ ಧನರಾಜ್ ಅದೇ ಕಾಲೇಜಿನ ಪ್ಲಾಸ್ಟಿಕ್ ಸರ್ಜರಿ ವಿಭಾಗದ ಮುಖ್ಯಸ್ಥೆಯಾಗಿ ಕಾರ್ಯ ನಿರ್ವಹಿಸಿದ್ದರು. ಅವರು ಬೆಂಗಳೂರಿನ ರಾಜರಾಜೇಶ್ವರಿ ಆಸ್ಪತ್ರೆಯಲ್ಲಿಯೂ ಸೇವೆ ಸಲ್ಲಿಸಿರುತ್ತಾರೆ, ಪ್ರಸ್ತುತ ಬೆಂಗಳೂರಿನಲ್ಲಿ ನೆಲಸಿದ್ದಾರೆ. ಇದುವರೆಗೆ 25000 ಕ್ಕೂ ಹೆಚ್ಚು ಸುಟ್ಟ ಗಾಯಗಳಿಗೆ ಶಸ್ತ್ರ ಚಿಕಿತ್ಸೆ (Plastic surgery) ನಡೆಸಿದ್ದಾರೆ. 1999ರಲ್ಲಿ ಅಗ್ನಿ ರಕ್ಷಾ ಎಂಬ ಹೆಸರಿನ ಸರ್ಕಾರೇತರ ಸಂಸ್ಥೆ ಸ್ಥಾಪಿಸಿ ಸುಟ್ಟ ಗಾಯಾಳುಗಳ ಚಿಕಿತ್ಸೆಗೆ ಮಾರ್ಗದರ್ಶನ ಹಾಗು ಆರ್ಥಿಕ ನೆರವು ನೀಡುತ್ತಿದ್ದಾರೆ. ವೈದ್ಯಕೀಯ ಕ್ಷೇತ್ರದಲ್ಲಿ ಇವರ ನಿಸ್ವಾರ್ಥ ಹಾಗೂ ಅನುಪಮ ಸೇವೆಯನ್ನು ಗುರುತಿಸಿ ಭಾರತ ಸರ್ಕಾರ ಪದ್ಮಶ್ರೀ ಪ್ರಶಸ್ತಿ ನೀಡಿದೆ.



**ಶ್ರೀಮತಿ ಅನುಪಮಾ ಹೊಸ್ಕೆರೆ- ಪದ್ಮಶ್ರೀ** - ಶ್ರೀಮತಿ ಅನುಪಮಾ ಹೊಸ್ಕೆರೆ ಒಬ್ಬ ಮಾಸ್ಟರ್. ಬೊಂಬೆಗಾರ್ತಿ ಮತ್ತು ಬೆಂಗಳೂರಿನ ಧಾತು ಪಪೆಟ್ ಥಿಯೇಟರ್‌ನ ಸಂಸ್ಥಾಪಕ ನಿರ್ದೇಶಕಿ. ತೊಗಲು ಗೊಂಬೆಯಾಟದ ಸಂಯೋಜಿತ ಕಲಾ ಪ್ರಕಾರದ ಪ್ರತಿಯೊಂದು ಅಂಶದಲ್ಲೂ ಅವರು ವ್ಯಾಪಕ ಅನುಭವ ಹೊಂದಿದ್ದಾರೆ. ಪ್ರತಿಷ್ಠಿತ ಸಂಗೀತ, ನಾಟಕ ಅಕಾಡೆಮಿ ಪುರಸ್ಕಾರವನ್ನು ಪಡೆದಿದ್ದಾರೆ. ಅನುಪಮಾ ಅವರು ಸಂಸ್ಕೃತಿ ಸಚಿವಾಲಯದಿಂದ ಹಿರಿಯ ಸಂಶೋಧನ ಫೆಲೋಶಿಪ್ ಅನ್ನು ಸಹಾ ಪಡೆದಿದ್ದಾರೆ. ನೃತ್ಯ-ರಂಗಭೂಮಿ ಮತ್ತು ಬೊಂಬೆಯಾಟವನ್ನು ಒಟ್ಟುಗೂಡಿಸಿ ಸುಮಾರು 80 ನಿಮಿಷಗಳ ಒಂದು ಬ್ರಾಡ್ವೇ ಪ್ರಮಾಣದ ಯಶಸ್ವಿ ಪ್ರದರ್ಶನ ನೀಡಿದ್ದಾರೆ. ಬೆಂಗಳೂರಿನಲ್ಲಿ ನಡೆಯುವ ವಾರ್ಷಿಕ ಧಾತು ಅಂತರರಾಷ್ಟ್ರೀಯ ಬೊಂಬೆ ಉತ್ಸವದ ಫೆಸ್ಟಿವಲ್ ಡೈರೆಕ್ಟರ್ ಆಗಿದ್ದಾರೆ. ಅನುಪಮಾ ಅವರು ಕರ್ನಾಟಕದ ಸಾಂಪ್ರದಾಯಿಕ ಬೊಂಬೆಯಾಟದಲ್ಲಿ ಮ್ಯಾರಿಯೊನೆಟ್ ನಿರ್ಮಾಣ ಮತ್ತು ವಿನ್ಯಾಸದಲ್ಲಿ ತರಬೇತಿ ಪಡೆದಿದ್ದಾರೆ. ಭರತನಾಟ್ಯದಲ್ಲಿಯೂ ಪರಿಣಿತಿ ಹೊಂದಿದ್ದಾರೆ. ಇವರು ಕ್ಯಾಲಿಫೋರ್ನಿಯಾದ ಕ್ಯಾಲ್ ಸ್ಟೇಟ್ ಯೂನಿವರ್ಸಿಟಿಯಿಂದ ಇಂಜಿನಿಯರಿಂಗ್‌ನಲ್ಲಿ ಎರಡು ಸ್ನಾತಕೋತ್ತರ ಪದವಿ ಪಡೆದಿದ್ದಾರೆ. (ಎಂ.ಎಸ್.-ಎಲೆಕ್ಟ್ರಿಕಲ್ ಅಂಡ್ ಕಂಪ್ಯೂಟರ್ ಇಂಜಿನಿಯರಿಂಗ್ ಹಾಗೂ ಎಂ.ಇ.-ಕಮ್ಯುನಿಕೇಶನ್ ಇಂಜಿನಿಯರಿಂಗ್) ಸಂಸ್ಕೃತಿಯ ಕೇಂದ್ರ ಸಲಹಾ ಮಂಡಳಿಯ ಸದಸ್ಯರೂ ಆಗಿರುವ ಅನುಪಮಾ ಅವರು ಸಂಸ್ಕೃತಿ ಸಚಿವಾಲಯದಲ್ಲಿ ಸಲಹೆಗಾರರಲ್ಲಿ ಒಬ್ಬರಾಗಿ ನೇಮಕವಾಗಿದ್ದಾರೆ. ಪ್ರಸ್ತುತ ಇವರು ಭಾರತ ಸರ್ಕಾರದ ಸಂಗೀತ ನಾಟಕ ಅಕಾಡೆಮಿಯ ಬೊಂಬೆಯಾಟ ಕೋಶದ ಸಲಹಾ ಮಂಡಳಿ, ಚೈನ್ನೈನ ಕಲಾಕ್ಷೇತ್ರ ಫೌಂಡೇಶನ್ ಹಾಗೂ ಕರ್ನಾಟಕ ಬಯಲಾಟ ಅಕಾಡೆಮಿ ಸಮಿತಿಯ ಸದಸ್ಯರಾಗಿದ್ದಾರೆ. ಕಲಾಕ್ಷೇತ್ರದಲ್ಲಿ ಇವರು ಮಾಡಿದ ಅತ್ಯುತ್ತಮ ಸೇವೆಗಾಗಿ ಭಾರತ ಸರ್ಕಾರ ಇವರಿಗೆ ಪದ್ಮಶ್ರಿ ಪ್ರಶಸ್ತಿ ನೀಡಿದೆ.




**ಶ್ರೀ ಶ್ರೀಧರ್ ಮಕಂ ಕೃಷ್ಣಮೂರ್ತಿ- ಪದ್ಮಶ್ರೀ**- ಶ್ರೀ ಶ್ರೀಧರ್ ಮಕಂ ಕೃಷ್ಣಮೂರ್ತಿ ಅವರು ಒಬ್ಬ ದಿವ್ಯಾಂಗ, ವೀಲ್‌ಚೇರ್ ಬೌಂಡ್ ಶಿಕ್ಷಣ ತಜ್ಞ ಮತ್ತು ಆಡಳಿತಗಾರ. ದೇಶದ ಶಿಕ್ಷಣ ನೀತಿ ಸಿದ್ದಪಡಿಸುವಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಭಾರತದ ರಾಷ್ಟ್ರೀಯ ಶಿಕ್ಷಣ ನೀತಿ 2019ರ ಕರಡು ಸಮಿತಿಯ ಸದಸ್ಯರಾಗಿ ಹಾಗು ಕರ್ನಾಟಕದ ಟೆಕ್ನಾಲಜಿ ಎನೇಬಲ್ಡ್ ಲರ್ನಿಂಗ್ ಸಮಿತಿಯ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಅವರ ಜೀವನ ಚರಿತ್ರೆಯು 'ಸಹಸ್ರಪಥಿ' ಎಂಬ ಶೀರ್ಷಿಕೆಯೊಂದಿಗೆ ಪ್ರಕಟಣೆಯಾಗಿದೆ. ಅವರು ಕರ್ನಾಟಕ ನಾಲೆಡ್ಜ್ ಕಮಿಷನ್‌ನ, ಕರ್ನಾಟಕ ರಾಜ್ಯ ಇನ್ನೋವೇಷನ್ ಕೌನ್ಸಿಲ್‌ನ ಸದಸ್ಯ ಕಾರ್ಯದರ್ಶಿಯಾಗಿ ಹಾಗೂ ಸೆಂಟ್ರಲ್ ಅಡ್‌ವೈಸರಿ ಬೋರ್ಡ್ ಆಫ್ ಎಜ್ಯುಕೇಶನ್‌ನ ಸದಸ್ಯರಾಗಿದ್ದರು. ಪ್ರಸ್ತುತ ಕೇರಳ ವಿಶ್ವವಿದ್ಯಾಲಯದ ಎಕ್ಸಿಕ್ಯೂಟೀವ್ ಕೌನ್ಸಿಲ್ ಸದಸ್ಯರಾಗಿ, ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿಯ (ಕರ್ನಾಟಕ ಚಾಪ್ಟರ್) ಉಪಾಧ್ಯಕ್ಷರಾಗಿ, ಸೆಂಟರ್ ಫಾರ್ ಎಜ್ಯುಕೇಶನ್ ಅಂಡ್ ಸೋಷಿಯಲ್ ಸ್ಟಡೀಸ್‌ನ ಅಧ್ಯಕ್ಷರಾಗಿ, NEP ಟಾಸ್ಕ್ ಫೋರ್ಸ್ ಇನ್ ಕರ್ನಾಟಕದ ಸದಸ್ಯರಾಗಿ ಹಾಗೂ ICSSSR ನ ಸೀನಿಯರ್ ಫೆಲೋ ಆಗಿದ್ದಾರೆ.

ಇವರು ಮೈಸೂರು ವಿಶ್ವವಿದ್ಯಾಲಯದಿಂದ ಪಿ.ಹೆಚ್.ಡಿ. ಪದವಿ ಪಡೆದಿದ್ದಾರೆ. ಬೆಂಗಳೂರಿನ ವಿಜಯ ಕಾಲೇಜಿನಲ್ಲಿ ಸೀನಿಯರ್ ಉಪನ್ಯಾಸಕರಾಗಿ, ನಂತರ ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ (ಬೆಂಗಳೂರು ವಿ.ವಿ.) ನಲ್ಲಿ ಪ್ರೊಫೆಸರ್ ಮತ್ತು ಡೀನ್ ಆಗಿ ಇವರು ಸೇವೆ ಸಲ್ಲಿಸಿದ್ದಾರೆ. ಈವರೆಗೆ ಸುಮಾರು 30 ಅಧ್ಯಯನ ಪೇಪರ್ಸ್ ಪ್ರಕಟಿಸಿದ್ದಾರೆ. ಹನ್ನೊಂದು ರೀಸರ್ಚ್ ಪ್ರಾಜೆಕ್ಟ್ ಯಶಸ್ವಿಯಾಗಿ ಮುಗಿಸಿದ್ದಾರೆ. ಇವರು ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಮಾಡಿರುವ ಸಾಧನೆಯನ್ನು ಪರಿಗಣಿಸಿ ಕೇಂದ್ರ ಸರ್ಕಾರ ಪದ್ಮಶ್ರೀ ಪ್ರಶಸ್ತಿಯನ್ನು ಇವರಿಗೆ ನೀಡಿ ಗೌರವಿಸಿದೆ.



**ಶ್ರೀಮತಿ ಶಶಿ ಸೋನಿ - ಪದ್ಮಶ್ರೀ–** ಶ್ರೀಮತಿ ಶಶಿ ಸೋನಿಯವರು ಒಬ್ಬ ಉದ್ಯಮಿ, ಸಮಾಜ ಸೇವಕಿ ಹಾಗೂ ಪರೋಪಕಾರಿ ವ್ಯಕ್ತಿ. ಇವರು ಭಾಜಪ ಪಕ್ಷದ ಸದಸ್ಯರೂ ಹಾಗೂ ಅನುಯಾಯಿ. ದೀಪ್ ಜನ ಸೇವಾ ಸಮಿತಿಯ ಭಾಗವಾಗಿ ಸಮಾಜಕ್ಕೆ ಗಣನೀಯ ಕೊಡುಗೆ ನೀಡಿದ್ದಾರೆ. ಜನರಿಗೆ ಉದ್ಯೋಗ ನೀಡುವ, ಮಹಿಳೆಯರಿಗೆ ಶಿಕ್ಷಣ ಕೊಡುವ ಹಾಗೂ ಪಿಂಚಣಿ ಸ್ಕೀಮ್, ಅಂಗವಿಕಲರಿಗೆ ಧನ ಸಹಾಯ ಮುಂತಾದ ಯೋಜನೆಗಳನ್ನು ಸಾಕಾರಗೊಳಿಸಿದ್ದಾರೆ. ಕೊಳಚೆ ಪ್ರದೇಶದ ಜನರ ಕೌಶಲ್ಯಾಭಿವೃದ್ಧಿಗೆ ಕಾರ್ಯ ಯೋಜನೆ ರೂಪಿಸಿದ್ದಾರೆ.

1970 ರ ದಶಕದಲ್ಲಿ ಗೃಹಿಣಿಯಾಗಿ ತಮ್ಮ ಜೀವನವನ್ನು ಸಾಗಿಸಿದ ಶ್ರೀಮತಿ ಸೋನಿ ಅವರು ಹೊಸ ಹೊಸ ಉದ್ಯಮ ಐಡಿಯಾಸ್‌ಗಳನ್ನು ಹೊರ ತಂದರು. 1971ರಲ್ಲಿ ದೀಪ್ ಟ್ರಾನ್ಸ್‌ಪೋರ್ಟ್ ಅನ್ನು 1975ರಲ್ಲಿ ದೀಪ್ ಮಂದಿರ ಸಿನೆಮಾ ಹಾಗು ಮುಲಂದ್ ಮುಂಬೈನಲ್ಲಿ ಪ್ರಥಮ ಹವಾನಿಯಂತ್ರಿತ ಚಿತ್ರ ಮಂದಿರವನ್ನು ಸ್ಥಾಪಿಸಿದರು. ಅನಂತರ ಪ್ರಥಮ ಇಂಡಸ್ಟ್ರಿಯಲ್ ಗ್ಯಾಸ್ ಕಂಪನಿ, ದೀಪ್ ಆಕ್ಸಿಜನ್ ಪ್ರೈವೇಟ್ ಲಿಮಿಟೆಡ್ ಅನ್ನು ಮೈಸೂರಿನಲ್ಲಿ ಸ್ಥಾಪನೆ ಮಾಡಿದರು. ಪ್ರಸ್ತುತ ವಿಶ್ವಮಾನ್ಯ IZMO LTD ಕಂಪನಿಯ ಚೇರ್ ಪರ್ಸನ್ ಆಗಿದ್ದಾರೆ. ಇದು ಜಾಗತಿಕ ಮಟ್ಟದಲ್ಲಿ 500 ಮಿಲಿಯನ್ ಡಾಲರ್ ಕಂಪನಿಯಾಗಿದೆ.ಇವರಿಗೆ 1990ರಲ್ಲಿ ಭಾರತೀಯ ಕೈಗಾರಿಕಾ ಕ್ಷೇತ್ರದ ಸಾಧನೆಗಾಗಿ ಮಹಿಳಾ ಗೌರವ ಪುರಸ್ಕಾರ ಲಭಿಸಿದೆ. ಇವರು ಅಖಿಲ ಭಾರತ ಇಂಡಸ್ಟ್ರೀಯಲ್ ಗ್ಯಾಸ್ ಉತ್ಪಾದಕರ ಸಂಘದ ಆಡಳಿತ ಸಮಿತಿ ಸದಸ್ಯರಾಗಿ ಹಾಗೂ ಡೈರೆಕ್ಟರೇಟ್ ಆಫ್ ಟೆಕ್ನಿಕಲ್ ಡೆವಲಪ್‌ಮೆಂಟ್‌ನ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ವ್ಯಾಪಾರ ಮತ್ತು ಕೈಗಾರಿಕಾ ಕ್ಷೇತ್ರದಲ್ಲಿ ನೀಡಿರುವ ಗಣನೀಯ ಸೇವೆಗಾಗಿ ಕೇಂದ್ರ ಸರ್ಕಾರ ಇವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಿದೆ.



**ಶ್ರೀ ಕೆ.ಎಸ್. ರಾಜಣ್ಣ-ಪದ್ಮಶ್ರೀ**- 64 ವರ್ಷದ ಶ್ರೀ ಕೆ.ಎಸ್. ರಾಜಣ್ಣ ಪೋಲಿಯೋದಿಂದಾಗಿ ತಮ್ಮ 11ನೇ ತಿಂಗಳಿನಲ್ಲೇ ಕಾಲು ಮತ್ತು ಕೈಗಳನ್ನು ಕಳೆದುಕೊಂಡಿದ್ದರು. ಆದರೂ ಎದೆಗುಂದದೇ ತಮ್ಮ ಜೀವನದಲ್ಲಿ ಸಂಘರ್ಷ ಮಾಡಿ ಹಲವಾರು ಸಾಧನೆ ಮಾಡಿದ್ದಾರೆ. ಅದರಲ್ಲಿ ಅವರು ಪ್ರಸ್ತುತ ರಾಜ್ಯದ ಅಂಗವಿಕಲ ಸಂಸ್ಥೆಯ ಆಯುಕ್ತರಾಗಿರುವುದು ವಿಶೇಷವಾಗಿದೆ. ಮೂಲತಃ ಮಂಡ್ಯ ಜಿಲ್ಲೆಯವರಾದ ಶ್ರೀ ರಾಜಣ್ಣ ಅವರು ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೋಮಾ ಪದವೀಧರ. ಪಾರಾಲಂಪಿಕ್ಸ್‌ನಲ್ಲಿ ಚಿನ್ನದ ಪದಕ ಪಡೆದಿರುವ ಇವರು ತಮ್ಮ ಸ್ವಂತ ಸಂಸ್ಥೆಯಲ್ಲಿ 500 ಕ್ಕೂ ಹೆಚ್ಚು ದಿವ್ಯಾಂಗರಿಗೆ ಉದ್ಯೋಗ ನೀಡಿ ಆಶ್ರಯದಾತರಾಗಿದ್ದಾರೆ. ಸಾಮಾಜಿಕ ಕ್ಷೇತ್ರದಲ್ಲಿ ಇವರು ಸಲ್ಲಿಸಿದ ಸಮಾಜ ಸೇವೆಯನ್ನು ಗುರುತಿಸಿ ಭಾರತ ಸರ್ಕಾರ ಪದ್ಮಶ್ರೀ ಪ್ರಶಸ್ತಿ ಪ್ರದಾನ ಮಾಡಿದೆ.



**ಡಾ. ಸಿ.ಆರ್. ಚಂದ್ರಶೇಖರ್- ಪದ್ಮಶ್ರೀ**-ಜನ ಸಾಮಾನ್ಯರ ಮನೋ ವೈದ್ಯರೆಂದೇ ಖ್ಯಾತಿಯಾಗಿರುವ ಬೆಂಗಳೂರಿನ ಡಾ. ಚನ್ನಪಟ್ಟಣ ರಾಜಣ್ಣಾಚಾರ್ ಚಂದ್ರಶೇಖರ್ ಒಬ್ಬ ಸುಪ್ರಸಿದ್ಧ ಮಾನಸಿಕ ತಜ್ಞರು. ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿ ಡೆಪ್ಯುಟಿ ಮೆಡಿಕಲ್ ಸೂಪರಿಂಟೆಂಡೆಂಟ್ ಆಗಿ ಸೇವೆ ಸಲ್ಲಿಸಿರುವ ಇವರು ಪ್ರಸ್ತುತ ಸಮಾಧಾನ ಸೆಂಟರ್‌ನಲ್ಲಿ ಗೌರವ ಕನ್ಸಲ್ಟೆಂಟ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರು 50ಕ್ಕೂ ಹೆಚ್ಚು ವರ್ಷಗಳ ಕಾಲ ಜನ ಸಾಮಾನ್ಯರಿಗೆ, ಸಮಾಜಕ್ಕೆ ತಮ್ಮ ವೈದ್ಯಕೀಯ ಸೇವೆ ನೀಡಿದ್ದು, ಸುಮಾರು 50,000ಕ್ಕೂ ಹೆಚ್ಚು ರೋಗಿಗಳಿಗೆ ಉಚಿತವಾಗಿ ಸೇವೆ ಸಲ್ಲಿಸಿದ್ದಾರೆ. ನಿಮ್ಹಾನ್ಸ್‌ನ ಡಿಮೆನ್ಷಿಯಾ ಸೆಂಟರ್‌ಗೆ 1.2 ಕೋಟಿ ರೂಪಾಯಿಗಳ ದೇಣಿಗೆ ನೀಡಿದ್ದಾರಲ್ಲದೇ ತಮ್ಮ ಸ್ವಂತ ಮನೆ, ಜಾಗ ಮತ್ತು ಮೌಲ್ಯದ ವಸ್ತುಗಳನ್ನು ನಿಮ್ಹಾನ್ಸ್‌ಗೆ ಉಯಿಲು ಬರೆದು ನೀಡಿರುವುದು ಅತ್ಯಂತ ಸ್ತುತ್ಯಾರ್ಹ ಕಾರ್ಯ. ವೈದ್ಯಕೀಯ ಕ್ಷೇತ್ರದ ಸಾಧನೆಗಾಗಿ ಭಾರತ ಸರ್ಕಾರ ಇವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಿದೆ.

**ಭಾರತದ ರಾಷ್ಟ್ರಪತಿಗಳಿಂದ ಈ ಬಾರಿಯ ಪದ್ಮಭೂಷಣ ಮತ್ತು ಪದ್ಮಶ್ರೀ ಪ್ರಶಸ್ತಿ ಸ್ವೀಕರಿಸುತ್ತಿರುವ ಎಲ್ಲಾ ಒಂಭತ್ತು ಕನ್ನಡಿಗ ಸಾಧಕರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹೃದಯಪೂರ್ವಕ ಶುಭಾಶಯಗಳು ಮತ್ತು ಅಭಿನಂದನೆಗಳು..■**

# ಸಂಘದಲ್ಲಿ ದಾಸ ಶ್ರೇಷ್ಠ ಕನಕದಾಸರ 536ನೇ ರಾಷ್ಟ್ರೀಯ ಕನಕೋತ್ಸವ

ದಿನಾಂಕ 18.02.2024 ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘ ನವದೆಹಲಿ, ವತಿಯಿಂದ ದಾಸ ಶ್ರೇಷ್ಠ ಕನಕದಾಸರ 536ನೇ ರಾಷ್ಟ್ರೀಯ ಕನಕೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮೊದಲಿಗೆ ಕನಕದಾಸರ ಪಲ್ಲಕ್ಕಿ ಉತ್ಸವ ಸಮೀಪದ ಶ್ರೀ ರಾಘವೇಂದ್ರ ಮಠದಿಂದ ದೆಹಲಿ ಎನ್‌ಸಿಆರ್ ನ 50ಕ್ಕೂ ಹೆಚ್ಚು ಮುತ್ತೈದೆಯರಿಂದ ಪೂರ್ಣ ಕುಂಬ ಕಳಸ ಮತ್ತು ಕರ್ನಾಟಕ ಜಾನಪದ ಕಲಾ ಪ್ರಕಾರಗಳಾದ ಡೊಳ್ಳು ಕುಣಿತ, ಬೀಸು ಕಂಸಾಳೆ, ವೀರ ಮಕ್ಕಳ ಕುಣಿತದೊಂದಿಗೆ ಮೆರವಣಿಗೆಯ ಮೂಲಕ ಸಾಗುತ್ತಾ ಸಂಘದ ಆವರಣಕ್ಕೆ ಕರೆತರಲಾಯಿತು.

ಸಂಘದ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕು. ಪ್ರಭಂಜನ್ ಅವರಿಂದ ಕನಕದಾಸರ ಪ್ರಾರ್ಥನೆಯೊಂದಿಗೆ ಉದ್ಘಾಟಕರಾದಂತಹ ಶ್ರೀ ಎಚ್. ಎಂ. ರೇವಣ್ಣ ಮಾನ್ಯ ಮಾಜಿ ಸಚಿವರು ಹಾಗೂ ಹಾಗೂ ಮುಖ್ಯ ಅತಿಥಿಗಳಾಗಿ ಆಗಮಿಸಿದಂತಹ ಶ್ರೀ ಎಂ. ಅನಂತರಾಮಯ್ಯ ಬಿಜೆಪಿ ಕಾರ್ಯಕಾರಿ ಮುಖ್ಯಸ್ಥರು, ಗರುಡಾಚಾರ್ ಪಾಳ್ಯ, ಶ್ರೀ ದೇವರಾಜ್ ಹುಲ್ಲೂರಪ್ಪ, ಸಮಾಜ ಸೇವಕರು, ಶ್ರೀಮತಿ ಕೆ.ಆರ್. ಪ್ರಭಾವತಿ, ಅಧ್ಯಕ್ಷರು ಶಫರ್ಡ್ ಇಂಡಿಯಾ ಇಂಟರ್ನ್ಯಾಷನಲ್ ಮಹಿಳಾ ಘಟಕ, ಡಾ. ವಿಜಯಲಕ್ಷ್ಮೀ, ಪ್ರಖ್ಯಾತ ಗೈನಕಾಲಜಿಸ್ಟ್ ಬೆಂಗಳೂರು, ಶ್ರೀ ವಿಜಯ ಪಾಲ್ ಸಿಂಗ್ ರಾಷ್ಟ್ರೀಯ ಅಧ್ಯಕ್ಷರು ಪಾಲ್ ಸಮಾಜ, ನವದೆಹಲಿ ಮತ್ತು ಡಾ ಮುನಿರಾಜು ಗೌರವ ಅಧ್ಯಕ್ಷರು, ಸಂಗೊಳ್ಳಿ ರಾಯಣ್ಣ ಸಂಘ ಎಲ್ಲರೂ ಒಟ್ಟುಗೂಡಿ ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ವಿದ್ಯುಕ್ತವಾಗಿ ಚಾಲನೆ ನೀಡಿದರು.

ಕಾರ್ಯಕ್ರಮದ ನಿರ್ವಹಣೆಯನ್ನು ಶ್ರೀಮತಿ ಆಶಾ ಮಹದೇವ ಅವರು ನಡೆಸಿಕೊಟ್ಟರು. ಸಂಗೊಳ್ಳಿ ರಾಯಣ್ಣ ಸಂಘದ ಅಧ್ಯಕ್ಷರಾದ ಶ್ರೀ ಆರ್. ಮಹದೇವ್ ಅವರು ಕಾರ್ಯಕ್ರಮಕ್ಕೆ ಆಗಮಿಸಿದ್ದ ಎಲ್ಲಾ ಅತಿಥಿ ಗಣ್ಯರನ್ನು ಹಾಗೂ ಸಭಾಂಗಣದಲ್ಲಿ ಉಪಸ್ಥಿತರಿದ್ದ ಎಲ್ಲರನ್ನೂ ಹಾರ್ದಿಕವಾಗಿ ಸ್ವಾಗತಿಸಿದರು.

ಈ ಕಾರ್ಯಕ್ರಮದ ಕುರಿತು ಮಾತನಾಡಿದ ಶ್ರೀ ವಿಜಯ ಪಾಲ್ ಸಿಂಗ್ ಅವರು ಕನಕದಾಸರು ಕರ್ನಾಟಕಕ್ಕೆ ಸೀಮಿತವಲ್ಲದೆ ಇಡೀ ಭಾರತ ದೇಶಕ್ಕೆ ಎಲ್ಲಾ ಜನಾಂಗದವರಿಗೆ ತಿಳಿಯುವಂತಾಗಬೇಕು ಎಂದು ಹೇಳುತ್ತಾ, ಬಡವರಿಗೆ, ಹಿಂದುಳಿದ ವರ್ಗದವರಿಗೆ ಯುಪಿಎಸ್‌ಸಿ ಓದಲು ಬರುವ ಮಕ್ಕಳಿಗೆ ದೆಹಲಿಯಲ್ಲಿ ಸಹಾಯ ಹಸ್ತ ಮಾಡುವಲ್ಲಿ ತಾವು ನಿರತರಾಗಿರುವುದನ್ನು ತಿಳಿಸಿದರು.




ಅದೇ ರೀತಿ ಡಾ. ವಿಜಯಲಕ್ಷ್ಮೀ ಅವರು ಮಾತನಾಡುತ್ತಾ ತಾವು ಬುಡಕಟ್ಟು ಜನಾಂಗದ ಮಕ್ಕಳಿಗೆ ವೈದ್ಯಕೀಯ ಸಲಹೆಗಳು ಹಾಗೂ ಅವರಿಗೆ ಚಿಕ್ಕ ಚಿಕ್ಕ ಸಹಾಯ ಮಾಡುವಲ್ಲಿ ನಿರತರಾಗಿದ್ದನ್ನು ತಿಳಿಸಿದರು.

ನಂತರ ಮಾತನಾಡಿದ ಶ್ರೀಮತಿ ಕೆ.ಆರ್. ಪ್ರಭಾವತಿ ಅವರು ಮಹಿಳಾ ಘಟಕದ ಕಾರ್ಯಗಳ ಬಗ್ಗೆ ವಿವರ ನೀಡಿದರು ಮತ್ತು ನವದೆಹಲಿ ಸಂಗೊಳ್ಳಿ ರಾಯಣ್ಣ ಸಂಘದ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಶ್ರೀ ಎಂ. ಅನಂತರಾಮಯ್ಯ ಅವರು ಮಾತನಾಡಿ ಈ ಕಾರ್ಯಕ್ರಮದಲ್ಲಿ ಭಾಗಿಯಾಗಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಎಚ್.ಎಂ. ರೇವಣ್ಣ ಅವರು ಮಾತನಾಡುತ್ತಾ ಹಾವೇರಿ ಜಿಲ್ಲೆಯ ಬಾಡ ಗ್ರಾಮದಲ್ಲಿ 1495ರಲ್ಲಿ ಬೀರೇಗೌಡ ಮತ್ತು ಬಚ್ಚಮ್ಮ ದಂಪತಿಗಳ ಮಗನಾಗಿ ಜನಿಸಿದ ಕನಕದಾಸರು ಕುರುಬ ಗೌಡ ಸಮುದಾಯಕ್ಕೆ ಸೇರಿದವರು ಎಂದು ಅವರ ಜೀವನ ಹೇಳುತ್ತದೆ. ಅವರ ಜನನದ ಸಮಯದಲ್ಲಿ ಅವರ ತಂದೆತಾಯಿಗಳಿಂದ ತಿಮ್ಮಪ್ಪ ನಾಯಕ ಎಂದು ಹೆಸರಿಸಲಾಯಿತು, ನಂತರ ಅವರ ಆಧ್ಯಾತ್ಮಿಕ ಗುರು ವ್ಯಾಸರಾಜರು ನೀಡಿದ ಕನಕದಾಸ ಎಂಬ ಹೆಸರನ್ನು ಪಡೆದರು. ಅನಂತರ ವಿಜಯನಗರ ಅರಸರಿಂದ 78 ಗ್ರಾಮಗಳ ಮುಖ್ಯಸ್ಥರಾಗಿ ನೇಮಕಗೊಂಡರು. ಅವರು ಯುದ್ಧದಲ್ಲಿ ಗಾಯಗೊಂಡ ನಂತರ ಪ್ರಾಪಂಚಿಕ ಜೀವನವನ್ನು ತ್ಯಜಿಸಿದರು ಮತ್ತು ಕಾಲ್ನಡಿಗೆಯಲ್ಲಿ ಭಾರತದಾದ್ಯಂತ ಸಂಚರಿಸಿದ ಸಂತ–ಕವಿಯಾದರು. ಅವರು 1593 ರಲ್ಲಿ ತಮ್ಮ 98 ನೇ ವಯಸ್ಸಿನಲ್ಲಿ ಹಾವೇರಿ ಜಿಲ್ಲೆಯ ಕಾಗಿನೆಲೆಯಲ್ಲಿ ನಿಧನರಾದರು ಎಂದು ತಿಳಿಸಿದರು.

ಮಾನವತಾವಾದಿಗಳಾದ ಕನಕದಾಸರು ತಮ್ಮ ಕೀರ್ತನೆಗಳ ಮೂಲಕ ಕರ್ನಾಟಕದಾದ್ಯಂತ ಹೆಸರುವಾಸಿಯಾದರು ಎಂದು ಹೇಳುತ್ತಾ ಕನಕದಾಸರು ಕರ್ನಾಟಕಕ್ಕೆ ಸೀಮಿತವಲ್ಲದೆ, ಉತ್ತರ ಭಾರತದಲ್ಲಿಯೂ ಅವರ ಕೀರ್ತನೆಗಳು ಎಲ್ಲಾ ಭಾಷೆಯಲ್ಲಿ ಬರಬೇಕು, ಅವರ ವಿಚಾರಗಳು ಇಲ್ಲಿನವರಿಗೂ ತಿಳಿಯಬೇಕು ಎಂದು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಮಾಜಿ ಸಚಿವರು ಹೇಳಿದರು. ನಂತರ, ವೇದಿಕೆಯಲ್ಲಿ ಉಪಸ್ಥಿತರಿದ್ದ ಅತಿಥಿಗಣ್ಯರಿಗೆ ಸಂಗೊಳ್ಳಿ ರಾಯಣ್ಣ ಸಂಘದ ಪರವಾಗಿ ಗೌರವ ಸಮರ್ಪಣೆ ಮಾಡಲಾಯಿತು.

ಸಭಾ ಕಾರ್ಯಕ್ರಮದ ನಂತರ ಪ್ರಸ್ತುತಿಗೊಂಡ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಕರ್ನಾಟಕದಿಂದ ಆಗಮಿಸಿದಂತಹ ಶ್ರೀ ಮಲೆ ಮಹದೇಶ್ವರ ಕಲಾತಂಡದಿಂದ ಬಿಸು ಕಂಸಾಳೆ, ಆರಾಧ್ಯ ಲಲಿತಾ ಅಕಾಡೆಮಿಯ ಕಲಾವಿದರಿಂದ ಶಾಸ್ತ್ರೀಯ ನೃತ್ಯ ಮೈಸೂರಿನ ನಿರಂತರ ಕಲಾವೇದಿಕೆಯವರಿಂದ ವೀರ ಮಕ್ಕಳ ಕುಣಿತ, ಸಿ.ಎಂ. ಜಗದೀಶ್ ಕಲಾತಂಡದವರಿಂದ ಡೊಳ್ಳು ಕುಣಿತ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾದವು. ಸ್ಥಳೀಯ ಕಲಾವಿದರಾದ ಕುಮಾರಿ ಕೀರ್ತನ ಕಟ್ಟಿಮನಿ ಅವರು ಆಕರ್ಷಕ ನೃತ್ಯ ಪ್ರದರ್ಶನ ಮಾಡಿದರು.

ಸ್ಥಳೀಯ ಗಾಯಕರಾದ ಶ್ರೀಮತಿ ನೇತ್ರ ಕುಮಾರ್, ಶ್ರೀಮತಿ ಮಮತಾ ಶಿವರಾಮ್, ಶ್ರೀಮತಿ ಶುಭಾ ದೇವಿಪ್ರಸಾದ್, ಕುಮಾರಿ ಪೂರ್ಣಿಮ, ಶ್ರೀಮತಿ ಮಂಜುಳ ನಾಗರಾಜ್ ಮತ್ತು ಶ್ರೀ ಗಿರೀಶ್ ಅವರು ಸುಶ್ರಾವ್ಯವಾಗಿ ಕನಕದಾಸರ ಕೀರ್ತನೆಗಳನ್ನು ಹಾಡಿದರು. ಈ ಎಲ್ಲಾ ಕಾರ್ಯಕ್ರಮಗಳು ಸಭಾಂಗಣದಲ್ಲಿ ಆಸೀನರಾಗಿದ್ದ ಸಭಿಕರ ಮನರಂಜಿಸಿದವು. ಕನಕೋತ್ಸವ ಕಾರ್ಯಕ್ರಮಕ್ಕೆ ಆಗಮಿಸಿದ್ದ ಗಣ್ಯರು, ಮುಖ್ಯ ಅತಿಥಿಗಳು ಹಾಗೂ ಉತ್ತಮ ಸಂಖ್ಯೆಯಲ್ಲಿ ನೆರೆದಿದ್ದ ದೆಹಲಿ ಎನ್‌ಸಿಆರ್ ನ ಕನ್ನಡಿಗರು ಮತ್ತು ಕನ್ನಡೇತರರಿಗೆ ಸಂಗೊಳ್ಳಿ ರಾಯಣ್ಣ ಸಂಘದ ಗೌರವ ಅಧ್ಯಕ್ಷರಾದ ಡಾ. ಮುನಿರಾಜು ಅವರು ವಂದನೆಗಳನ್ನು ಅರ್ಪಿಸಿದರು.ಪ್ರಧಾನ ಕಾರ್ಯದರ್ಶಿ ಶ್ರೀ ಎಸ್.ಡಿ. ಶ್ರೀನಿವಾಸ್ ಸಹಕರಿಸಿದರು.




ವರದಿ : ***ಆರ್. ಮಹದೇವ್***

ಅಧ್ಯಕ್ಷರು, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘ, ನವದೆಹಲಿ

# ಶ್ರೀ ಎಸ್.ಆರ್. ವೀನೇಶ್



‘ಏನ್ರೀ ನಿಮಗೆ ಲಜ್ಜೆ, ನಾಚಿಕೆ, ಮಾನ, ಮರ್ಯಾದೆ ಇಲ್ವಾ.... ನಾಲ್ಕು ಸಲ ಫೋನ್ ಮಾಡಿದ್ರೂ ಒಂದು ಸಲ ಮರಳಿ ಫೋನ್ ಮಾಡಕ್ಕಾಗಲ್ವಾ’ ಅಂತ ನನ್ನ ನಾಟಕೀಯ ಗಂಭೀರತೆಯಿಂದಲೇ ಕೇಳಿದೆ. ‘ಅದೆಲ್ಲಾ ಇದ್ದಿದ್ರೆ ನಿಮ್ ಗೆಳೆತನ ಯಾಕೆ ಮಾಡ್ತಿದ್ದೆ’ ಅಂತ ನನಗೇ ಮಾತು ತಿರುಗಿಸಿ ಬಿಡೋದಾ!! ನಗು ತಡೆಯಲಾರದೆ ಸಾವರಿಸುತ್ತ ಹೇಳಿದೆ, ‘ಏನಿಲ್ಲ ವೀನೇಶ್, ನಿಮ್ಮ ಪರಿಚಯದ ಒಂದು ಲೇಖನವನ್ನು ಬರಿತಾ ಇದ್ದೀನಿ ಒಂದೆರಡು ಮಾಹಿತಿಗಳು ಬೇಕಾಗಿದ್ದವು’ ‘ರೀ ಬಹಳ ಬ್ಯುಸಿ, ಮುಂದಿನ ತಿಂಗಳು ಬರೀರಿ’ ಅಂದ್ರು. ‘ನಮಗೂ ವಯಸ್ಸಾಗ್ತಿದೆ, ನಿಮಗೂ ವಯಸ್ಸಾಗ್ತಿದೆ ಮುಂದಿನ ತಿಂಗಳು ಯಾರು ನೋಡಿದ್ದಾರೆ’ ‘ಮೆಲು ದನಿಯಲ್ಲಿ ಕೇಳಿದೆ’ ‘ನನಗೂ ನಿಮಗೂ ಏನೂ ಆಗಲ್ಲ ಭಟ್ರೆ.... ಪಾಪಿ ಚಿರಾಯು, ನಿಮಗ್ಗೊತ್ತಿಲ್ವಾ’ ‘ಎಂದು ಹಾಜಿರ್ ಜವಾಬ್ ನೀಡಿದ ಅದ್ಭುತ ಪ್ರತ್ಯುತ್ಪನ್ನ ಮತಿ ಎಸ್ ಆರ್ ವೀನೇಶರ ಜೊತೆಗಿನ 35 ವರ್ಷಗಳ ಹಿಂದಿನ ಒಡನಾಟದ ನೆನಪುಗಳು ಮತ್ತೆ ಮರುಕಳಿಸಿದವು.

1987ರಲ್ಲಿ ಉದ್ಯೋಗ ಹುಡುಕುತ್ತಾ ದೆಹಲಿಗೆ ಬಂದು ಥಾಂಪ್ಸನ್ ಪ್ರೆಸ್‌ನಲ್ಲಿ ಪ್ರೊಡಕ್ಷನ್ ಅಸಿಸ್ಟೆಂಟ್ ಆಗಿ ಸೇರಿದ ವೀನೇಶ್ ಅವರಿಗೆ ಎರಡು ವರ್ಷಗಳಲ್ಲಿ ಕಾರ್ಮಿಕ ಮುಷ್ಕರಗಳ ಕಾರಣದಿಂದ ಕಂಪನಿ ಬಿಕ್ಕಟ್ಟಿಗೆ ಸಿಲುಕಿ ತಾನು ಕೆಲಸ ಕಳೆದುಕೊಳ್ಳುವೆನೆಂಬ ಕಲ್ಪನೆಯೂ ಇರಲಿಲ್ಲ. ಕೆಲಸ ಹೋದರೆ ಏನು, ದೇಶದಲ್ಲಿ ಅಲ್ಲವಾದರೂ ವಿದೇಶಕ್ಕೆ ಹೋಗಿ ಬದುಕು ಕಟ್ಟುವೆನೆಂಬ ಛಲದಿಂದಲೇ ಪಾಸ್‌ಪೋರ್ಟಿಗೆ ಅರ್ಜಿ ಸಲ್ಲಿಸಿದ್ದರು. ಪಾಸ್‌ಪೋರ್ಟ್ ಸಿಗುವುದು ತಡವಾಯಿತು. ವಿದೇಶಕ್ಕೆ ಹಾರುವ ವೀನೇಶ್ ಅವರ ಕನಸೇ ಹಾರಿಹೋಗಿತ್ತು. ಕೊನೆಗೆ ನ್ಯಾಶನಲ್ ಬುಕ್ ಟ್ರಸ್ಟ್ ಇಂಡಿಯಾದಲ್ಲಿ ಪ್ರೊಡಕ್ಷನ್ ಅಸಿಸ್ಟೆಂಟ್ ಹುದ್ದೆ ಖಾಲಿ ಇದೆಯೆಂದು ತಿಳಿದು ಅರ್ಜಿ ಸಲ್ಲಿಸಿದರು. ಥಾಂಪ್ಸನ್ ಇಂಡಿಯಾದಂತಹ ಪ್ರತಿಷ್ಠಿತ ಕಂಪನಿಯಲ್ಲಿ ಕೆಲಸ ಮಾಡಿದ ನವ ತರುಣ, ಜಾಣ, ಪರಿಶ್ರಮ ಜೀವಿಗೆ ಎನ್‌ಬಿಟಿಯಲ್ಲಿ ಉದ್ಯೋಗ ಸಿಗುವುದು ಕಷ್ಟವಾಗಲಿಲ್ಲ.

ಅದೇ ಸಂದರ್ಭದಲ್ಲಿ ಪ್ರಿಂಟಿಂಗ್ ತಂತ್ರಜ್ಞಾನದ ರೂವಾರಿ, ಎನ್‌ಸಿಇಆರ್‌ಟಿ ಯಲ್ಲಿ ಚೀಫ್ ಪ್ರೊಡಕ್ಷನ್ ಆಫೀಸರ್ ಹಾಗೂ ದಕ್ಷ ಅಧಿಕಾರಿ ಆಗಿದ್ದ ಶ್ರೀ ಯು. ಪ್ರಭಾಕರ್ ರಾವ್ ಅವರ ಪರಿಚಯವಾಗಿ, ಎನ್‌ಬಿಟಿಯ ಕುರಿತು ಸಮಗ್ರ ಮಾಹಿತಿ ಪಡೆದ ವೀನೇಶ್ ಅವರು ಕಳೆದ 35 ವರ್ಷಗಳಿಂದ ಮಾಡಿದ ಕೆಲಸವನ್ನು ಸಾರಸ್ವತ ಲೋಕ ಮೆಚ್ಚಲೇಬೇಕು. ಅದರಲ್ಲೂ ಮುಖ್ಯವಾಗಿ ಕನ್ನಡ ಪುಸ್ತಕ ಪ್ರಿಯರು ನೆನಪಿಸಿಕೊಳ್ಳಬೇಕಾದ ಹೆಸರು. ಕೆಲಕಾಲ ದೆಹಲಿಯಲ್ಲಿ ಕೆಲಸ ಮಾಡುತ್ತಿದ್ದ ವೀನೇಶ್ ಅವರು, 2014ರಲ್ಲಿ ಎನ್‌ಬಿಟಿಯ ಬೆಂಗಳೂರು ಕಾರ್ಯಾಲಯಕ್ಕೆ ವರ್ಗವಾಗಿದ್ದರು. ಕನ್ನಡ ಪುಸ್ತಕಗಳ ಎಡಿಟರ್ ಶ್ರೀ ನಾಗರಾಜಪ್ಪನವರ ನಿವೃತ್ತಿಯ ನಂತರ ಕನ್ನಡ ಪುಸ್ತಕಗಳು ಬರುವುದೇ ನಿಂತು ಹೋದಾಗ ಈ ವಿಷಯವನ್ನು ಬಹಳವಾಗಿ ಮನಸ್ಸಿಗೆ ಹಚ್ಚಿಕೊಂಡ ವೀನೇಶ್ ಯಾವುದೇ ಹೆಚ್ಚುವರಿ ಲಾಭ ಇಲ್ಲದೆ ಕನ್ನಡ ಪುಸ್ತಕಗಳನ್ನು ಹೊರ ತರಲೇಬೇಕೆಂದು ಪಣತೊಟ್ಟು, ಜವಾಬ್ದಾರಿ ವಹಿಸಿ 500ಕ್ಕೂ ಹೆಚ್ಚಿನ ಕನ್ನಡ



ಪುಸ್ತಕಗಳ ಮೊದಲ ಮುದ್ರಣ ಮಾಡಿದರು. ಮರು ಮುದ್ರಣ ಶೀರ್ಷಿಕೆಗಳನ್ನು ಸೇರಿಸಿದರೆ ಈ ಸಂಖ್ಯೆ ಒಂದು ಸಾವಿರವನ್ನು ದಾಟುತ್ತದೆ. ಇತರ ಭಾಷೆಗಳ ಪುಸ್ತಕಗಳನ್ನು ಸೇರಿಸಿದರೆ ಈ ಸಂಖ್ಯೆ ಅನೇಕ ಪಟ್ಟು ಹೆಚ್ಚಾಗುತ್ತದೆ. 2020ರಲ್ಲಿ ಮತ್ತೆ ದೆಹಲಿಗೆ ವರ್ಗವಾಗಿ ಬಂದ ವೀನೇಶ್ ಅವರು ಪ್ರೊಡಕ್ಷನ್ ವಿಭಾಗದ ಉಪ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದು ಮೇ 31ಕ್ಕೆರಂದು ನಿವೃತ್ತರಾಗಲಿದ್ದಾರೆ.

ನನ್ನ ದೆಹಲಿ ಜೀವನದ ಪ್ರಾರಂಭಿಕ ಕೆಲವು ವರ್ಷಗಳಲ್ಲಿ ಸಾಫ್ಟ್‌ವೇರ್ ಡೆವಲಪ್‌ಮೆಂಟ್ ಜೊತೆಗೆ ಕಂಪ್ಯೂಟರ್ ಮೂಲಕ ಕನ್ನಡ ಟೈಪಿಂಗ್, ಟೈಪ್ ಸೆಟಿಂಗ್ ಪ್ರಾರಂಭಿಸಿದ್ದೆ. ಆಗ ಅದಿನ್ನೂ ಹೊಸದು. ಕನ್ನಡ ಟೈಪಿಂಗ್ ಕಲಿತಿದ್ದರಿಂದ ಎನ್‌ಬಿಟಿಯ ಹಲವಾರು ಪುಸ್ತಕಗಳನ್ನು ಟೈಪ್ ಸೆಟ್ ಮಾಡಿಕೊಡುತ್ತಿದ್ದೆ. ಆ ಸಮಯದಲ್ಲಿ ಕನ್ನಡದ ಹಿರಿಯ ಎಡಿಟರ್ ಸಿ.ಎಂ. ಸುಬ್ಬರಾವ್ ಅವರ ಪರಿಚಯವಾಯಿತು. ಸರವು ಗ್ರಾಫಿಕ್ ಇಂಪ್ರೆಶನ್ ಎಂಬ ಹೆಸರಲ್ಲಿ ಐವತ್ತಕ್ಕೂ ಹೆಚ್ಚು ಪುಸ್ತಕಗಳ ಸೆಟ್ಟಿಂಗ್ ಮಾಡಿದ ಆ ದಿನಗಳಲ್ಲಿ ಹೆಚ್ಚು ಸಂಪರ್ಕ, ಸಂಭಾಷಣೆ, ಹರಟೆ ಎಲ್ಲ ನಡೆಯುತ್ತಿದ್ದು ವೀನೇಶ್ ಅವರ ಜೊತೆ. ಹರಟೆ ಹೊಡೆಯಲು ಕುಳಿತರೆ ಅದೆಷ್ಟು ಗಂಟೆಗಳ ಕಾಲ ಮಾತನಾಡುತ್ತಿದ್ದೆವೋ ನಮಗೆ ತಿಳಿಯದು. ಮಾತು ಆಡುವ ಹಾಗೂ ಅಷ್ಟೇ ಆಸಕ್ತಿದಾಯಕವಾಗಿ ತಮ್ಮನ್ನು ತಾವು ತೊಡಗಿಸಿಕೊಂಡು ಮಾತು ಕೇಳುವ ಕಲೆಯನ್ನು ವೀನೇಶರಿಂದಲೇ ಕಲಿಯಬೇಕು. ಕೆಲಸದ ತರಾತುರಿ, ಗಂಭೀರತೆ, ಓಡಾಟ, ಟೆನ್ಶನ್ ಎಲ್ಲದರ ನಡುವೆ ಸಮಾನ ಮನಸ್ಕರೊಂದಿಗೆ ಅಷ್ಟೇ ಜೋಕ್‌ಗಳ ಸುರಿಮಳೆಯೊಂದಿಗೆ ಅತ್ಯಂತ ಮುದ ನೀಡುವ ಸಂಭಾಷಣೆ, ಕೆಲಸದ ಎಲ್ಲ ಆಯಾಸವನ್ನು ಮರೆಸಿ ಬಿಡುತ್ತದೆ. ಭೇಟಿ ಮಾಡಿದ ಒಂದೇ ಕ್ಷಣದಲ್ಲಿ ಗೆಳೆತನದ ಛಾಪು ಮೂಡಿಸಬಲ್ಲ ಇವರೇನಾದರೂ ಸೇಲ್ಸ್ ಅಥವಾ ಮಾರ್ಕೆಟಿಂಗ್ ವಿಭಾಗಕ್ಕೆ ಹೋಗಿದ್ದರೆ, ಇವರಿಗ್ಯಾರೂ ಸರಿಸಾಟಿ ಇರುತ್ತಿರಲಿಲ್ಲ. ಕನ್ನಡ ಇಂಗ್ಲಿಷ್, ಹಿಂದಿ ಭಾಷೆಯಲ್ಲಿ ಅರಳು ಹುರಿದಂತೆ ಅವರಾಡುವ ಮಾತು, ಅವರು ಹಾಡುವ ಹಾಡಿನಷ್ಟೇ ಆಪ್ಯಾಯಮಾನ. ಉದಯ ಮ್ಯೂಸಿಕ್ ವಾಹಿನಿಯಲ್ಲಿ Some–ಗೀತ ಕಾರ್ಯಕ್ರಮದಲ್ಲಿ ಹಲವಾರು ಹಾಡುಗಳನ್ನು ಹಾಡಿದ ಇವರು, ಅನೇಕ ಸ್ಪರ್ಧೆಗಳಲ್ಲಿ ಮೊದಲ ಬಹುಮಾನ ಪಡೆದಿದ್ದಾರೆ. ಸ್ಟಾರ್ ಮೇಕರ್ ಆ್ಯಪ್‌ನಲ್ಲಿ 100 ಹಾಡುಗಳನ್ನು ಹಾಡಿ ತಮ್ಮ ಹವ್ಯಾಸವನ್ನು ಮುಂದುವರಿಸಿದ್ದಾರೆ.

ಪ್ರಧಾನಮಂತ್ರಿ ಯುವ ಯೋಜನೆಯಡಿಯಲ್ಲಿ ತೇಜಸ್ ಎಸ್. ಬಾಡಾಲ ಅವರ ಅರಣ್ಯಾನಿ, 2022ರಲ್ಲಿ ಎನ್‌ಬಿಟಿ ಇಂಗ್ಲಿಷ್ ಹಿಂದಿಯಲ್ಲಿ ಹೊರತಂದ 17 ಪುಸ್ತಕಗಳು, ಶಿವಾಜಿ, ಹಿಮಾಲಯದಲ್ಲಿ ವಿವೇಕಾನಂದ ಹೀಗೆ ಹತ್ತು ಹಲವು ಪುಸ್ತಕಗಳು, ಕನ್ನಡದ ಯುವ ಬರಹಗಾರರ ಪುಸ್ತಕಗಳು ಸೇರಿದಂತೆ ಎಲ್ಲಾ ಭಾಷೆಗಳಲ್ಲಿ ನೂರಾರು ಪುಸ್ತಕಗಳು ಈಗಲೂ ಹೊರ ಬರುತ್ತಿವೆ. ಅಮೃತಮಹೋತ್ಸವದ ಕಾಲದಲ್ಲಿ ಹೊರಬಂದ ಹರಡೇಕರ್ ಮಂಜಪ್ಪ–ಕನ್ನಡದ ಮೂಲ ಬರಹಗಳ ಸರಣಿ ಮುಂತಾದವು ಕನ್ನಡದ ಇತ್ತೀಚಿನ ಅತ್ಯಂತ ಬೇಡಿಕೆಯ ಪುಸ್ತಕಗಳು. ಸರಕಾರಿ ಇಲಾಖೆಯಲ್ಲಿ ಕೆಲಸಗಳು ನಡೆಯುವ ಗತಿ ಬಹಳ ನಿಧಾನ ಎಂಬುದು ವಾಡಿಕೆ. ಆದರೆ ವೀನೇಶರ ಕೆಲಸದ ಶೈಲಿ ಅದ್ಭುತ. ಪುಸ್ತಕ ಪ್ರಕಟಣೆಯ ದಿನವನ್ನು ನಿಗದಿಪಡಿಸಿ ಆ ದಿನದಂದು ಅದನ್ನು ಸಾಧಿಸುವ ಪರಿ ಅದ್ಭುತ. ಎಷ್ಟೇ ಕಷ್ಟವಾದರೂ, ಎಷ್ಟೇ ಅಡೆತಡೆಗಳು ಬಂದರೂ ಅನಾನುಕೂಲತೆಗಳು ಇದ್ದರೂ ನಿಗದಿತ ದಿನದಂದು ಪುಸ್ತಕ ಹೊರತರುವ ಅವರ ಕೆಲಸದ ವಿಧಾನವನ್ನು ಸಮೀಪದಿಂದಲೇ ನೋಡಿ ಬೆರಗಾದವರಲ್ಲಿ ನಾನೂ ಒಬ್ಬ.

ದೆಹಲಿ ಕರ್ನಾಟಕ ಸಂಘದ ಸದಸ್ಯತ್ವವನ್ನು ಮೂರು ದಶಕಗಳ ಹಿಂದೆಯೇ ವೀನೇಶ್ ತೆಗೆದುಕೊಂಡಿದ್ದರು. ದೆಹಲಿ ಕರ್ನಾಟಕ ಸಂಘ ಒಂದೊಂದು ಕಾಸಿಗಾಗಿ ಹೆಣಕಾಡುತ್ತಿದ್ದ ಕಾಲವದು. ಸಂಘಕ್ಕೆ ಮೊದಲ ಬಾರಿ ಕಂಪ್ಯೂಟರ್ ಬಂದಾಗ ಕನ್ನಡ ಟೈಪ್‌ಸೆಟ್ಟಿಂಗ್ ಪ್ರಾರಂಭವಾಯಿತು. ಎನ್‌ಬಿಟಿಗಾಗಿ ಪುಸ್ತಕದ ಟೈಪ್ ಸೆಟ್ಟಿಂಗ್ ಮಾಡಿಕೊಡಲು ಸಂಘವನ್ನು ನೋಂದಾಯಿಸುವ ಮೂಲಕ ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ಸಂಘಕ್ಕೆ ಸಹಾಯ ಮಾಡುವ ಹೃದಯವಂತಿಕೆ ವೀನೇಶ್ ತೋರಿಸಿದ್ದಾರೆ. ಸಂಘದ ಆ ದಿನಗಳಲ್ಲಿ ಎಲ್ಲಾ ತಾಂತ್ರಿಕ ತೊಂದರೆಗಳ ನಡುವೆ ಆಗಿನ ಸಿಬ್ಬಂದಿ ಶ್ರೀಮತಿ ಆರತಿ ಹೆಗಡೆಯವರು ಬಹಳ ಕಷ್ಟಪಟ್ಟು, ‘ದೃಷ್ಟಿ ಪರಿಚಯ’ ಎಂಬ ಪುಸ್ತಕವನ್ನು ಟೈಪಿಂಗ್ ಮತ್ತು ಟೈಪ್ ಸೆಟ್ಟಿಂಗ್ ಮಾಡಿ ಕೊಟ್ಟಿದ್ದು ನನಗೀಗಲೂ ನೆನಪಿದೆ. ಇದು ಸಂಘದ ಇತಿಹಾಸದಲ್ಲಿ ದಾಖಲಾಗಬೇಕಾದ ಅಂಶ. ಆಗಿನ್ನೂ ಅಭಿಮತದ ಪ್ರಾರಂಭಿಕ ಸಂಚಿಕೆಗಳು ಹೊರಬರಲು ಆರಂಭಿಸಿದ್ದವಷ್ಟೆ. ತುಂಬಾ ಪರೋಪಕಾರಿಯಾದ ವೀನೇಶ್ ಅವರು ಕನ್ನಡಕ್ಕೆ ಸಲ್ಲಿಸಿದ ಸೇವೆಯನ್ನು ಪರಿಗಣಿಸಿದರೆ, ಇವರು ನಿಸ್ಸಂಶಯವಾಗಿ ಒಬ್ಬ ವಿಶಿಷ್ಟ ಕನ್ನಡಿಗ ಎಂಬುದರಲ್ಲಿ ಎರಡು ಮಾತಿಲ್ಲ. ಹಾಗೆಂದು ದೆಹಲಿ ಕರ್ನಾಟಕ ಸಂಘದ ಚಟುವಟಿಕೆಗಳಿಂದ ದೂರವೇ ಉಳಿದರೂ ಕನ್ನಡಕ್ಕಾಗಿ ಸದ್ದಿಲ್ಲದೆ ಎಲೆಮರೆಯ ಕಾಯಿಯಂತೆ ಸೇವೆ ಮಾಡಿದ ಶ್ರೀ ವೀನೇಶ್ ಅವರ ಕೊಡುಗೆಯನ್ನು ದಾಖಲಿಸುವುದು ಈ ಲೇಖನದ ಉದ್ದೇಶ.

ಮೇ 31 ರಂದು ನಿವೃತ್ತರಾಗಲಿರುವ ವೀನೇಶ್ ಮತ್ತೆ ಬೆಂಗಳೂರಿಗೆ ಹೋಗಿ ಪತ್ನಿ ಉಮಾ, ಮಗಳು ವೈಷ್ಣವಿ ಜೊತೆಗಿದ್ದು ನ್ಯೂಜಿಲ್ಯಾಂಡ್ ನಲ್ಲಿರುವ ಮಗ ವರುಣನ ಅಭಿವೃದ್ಧಿಯನ್ನು ನೋಡುತ್ತಿರುವಂತೆ ಕನ್ನಡ ಪುಸ್ತಕಗಳ ಪ್ರಕಟಣೆ ಮಾಡಲು ತಮ್ಮ ಅನುಭವದ ಲಾಭವನ್ನು ಸದಾ ದೊರಕಿಸುತ್ತಿರಲಿ ಎಂಬುದೇ ನನ್ನ ಹಾರೈಕೆ. ■



***ಸರವು ಕೃಷ್ಣ ಭಟ್***

# ಅಗಲಿದ ಹಿರಿಯ ದೆಹಲಿ ಕನ್ನಡತಿ ಶ್ರೀಮತಿ ಸುಮಿತ್ರಾ ರಾವ್ ಅವರಿಗೆ ಸಂಘದಲ್ಲಿ ನುಡಿನಮನದ ಶ್ರದ್ಧಾಂಜಲಿ






ದೆಹಲಿ ಕರ್ನಾಟಕ ಸಂಘದ ಹಿರಿಯ ಆಜೀವ ಸದಸ್ಯೆ ಶ್ರೀಮತಿ ಸುಮಿತ್ರಾ ರಾವ್ ಅವರು ದಿನಾಂಕ 21.02.2024 ರಂದು ನಿಧನರಾಗಿದ್ದಾರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, ಜಂಟಿ ಕಾರ್ಯದರ್ಶಿಯಾಗಿ ಮತ್ತು ಉಪಾಧ್ಯಕ್ಷರಾಗಿ ದೀರ್ಘಕಾಲ ಸಲ್ಲಿಸಿದ ಸೇವೆ ಸ್ಮರಣೀಯ.

ದೆಹಲಿ ಕನ್ನಡತಿ ಶ್ರೀಮತಿ ಸುಮಿತ್ರಾ ರಾವ್ ಅವರು ಎಲ್ಲರನ್ನು ಅಗಲಿದ ಸುದ್ದಿ ಅವರ ಆತ್ಮೀಯ ವಲಯದ ದೆಹಲಿಯ ಬಂಧು-ಮಿತ್ರರಿಗೆ ಬಹಳ ದುಃಖದಾಯಕವಾಗಿತ್ತು. 21.02.2024 ರಂದು ಸಂಜೆ ಗುರುಗ್ರಾಮದಲ್ಲಿ ನೆರವೇರಿದ ಅವರ ಅಂತ್ಯಕ್ರಿಯೆಯಲ್ಲಿ ಅನೇಕ ದೆಹಲಿ ಕನ್ನಡಿಗರು ಪಾಲ್ಗೊಂಡು ಅಂತಿಮ ನಮನ ಸಲ್ಲಿಸಿದರು.

ಅವರ ಸ್ಮರಣಾರ್ಥ ದೆಹಲಿ ಕರ್ನಾಟಕ ಸಂಘದ ಸೆಮಿನಾರ್ ಹಾಲ್‌ನಲ್ಲಿ ಇತ್ತೀಚೆಗೆ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು ಹಾಗು ದೆಹಲಿಯ ಕನ್ನಡಿಗರೆಲ್ಲಾ ಒಟ್ಟು ಸೇರಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಒಂದು ನಿಮಿಷ ಮೌನ ಆಚರಿಸಿ ಗೌರವ ನಮನಗಳೊಂದಿಗೆ ಶ್ರದ್ಧಾಂಜಲಿ ಅರ್ಪಿಸಿದರು. ಶ್ರೀಮತಿ ಸುಮಿತ್ರಾ ರಾವ್ ಅವರ ಪುತ್ರಿಯರಾದ ಶ್ರೀಮತಿ ಕಲ್ಪನಾ ಮತ್ತು ಶ್ರೀಮತಿ ಸಾಧನಾ ಹಾಗೂ ಪುತ್ರ ಶ್ರೀ ದೀಪಕ್ ಅವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ದಿವಂಗತ ಶ್ರೀಮತಿ ಸುಮಿತ್ರಾ ರಾವ್ ಅವರ ಅಗಲಿಕೆಗೆ ಸಂತಾಪ ಸೂಚಿಸಿದರು. ಈ ಹಿಂದೆ ಕಾರ್ಯಕಾರಿ ಸಮಿತಿಯಲ್ಲಿ ವಿವಿಧ ಸ್ಥಾನಗಳಲ್ಲಿ ಅವರು ಕಾರ್ಯ ನಿರ್ವಹಿಸಿ ನಂತರ 1998ರಲ್ಲಿ ಸಂಘದ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಅವರು ಶ್ರೀ ಕೆ.ಆರ್. ನಾಗರಾಜ ಅವರು ಅಧ್ಯಕ್ಷರಾಗಿದ್ದ ಹಾಗು ಡಾ. ವೆಂಕಟಾಚಲ ಹೆಗಡೆಯವರು ಪ್ರಧಾನ ಕಾರ್ಯದರ್ಶಿಗಳಾಗಿದ್ದ ಕಾರ್ಯಕಾರಿ ಸಮಿತಿಯಲ್ಲಿ ಉಪಾಧ್ಯಕ್ಷೆಯಾಗಿ ಸೇವೆ ಸಲ್ಲಿಸಿದ್ದನ್ನು ಸ್ಮರಿಸುತ್ತಾ, ನವದೆಹಲಿಯ ಸಿರಿಫೋರ್ಟ್ ಸಭಾಂಗಣದಲ್ಲಿ ನಡೆದ ಸುವರ್ಣ ಜಯಂತಿ ಕಾರ್ಯಕ್ರಮ ಹಾಗು ಡಾ. ರಾಜಕುಮಾರ್ ಸಂಜೆಯ ಯಶಸ್ವಿ ಆಯೋಜನೆಯಲ್ಲಿ ಗಣನೀಯ ಪಾತ್ರ ವಹಿಸಿದ್ದರು ಎಂದರು. ಅವರು ಸಂಘಕ್ಕೆ ಹಗಲು ಇರುಳು ನೀಡಿದ ಸಮಯ ಅಮೂಲ್ಯವಾದುದು ಹಾಗೂ ಅವರು ಮಾಡಿರುವ ಸೇವೆ, ಸಾಧನೆಗಳನ್ನು ಎಲ್ಲರೂ ನೆನಪಿಸಿಕೊಳ್ಳಬೇಕು. ಸಂಘದ ಹೊಸ ಕಟ್ಟಡ ನಿರ್ಮಾಣ ಸಂದರ್ಭ ಅವರ ಕೊಡುಗೆ ಅಪಾರ, ಸಂಘವನ್ನು ಈ ಮಟ್ಟಕ್ಕೆ ಏರಿಸಲು ಅವರ ಶ್ರಮ ನಿಸ್ವಾರ್ಥ ಸೇವೆ ಶ್ಲಾಘನೀಯ. 1998ರಲ್ಲಿ ನಾನು ಒಬ್ಬ ಸಾಮಾನ್ಯ ಸದಸ್ಯನಾಗಿ ಪ್ರೇಕ್ಷಕನಾಗಿ ಸುವರ್ಣ ಜಯಂತಿ ಸಂದರ್ಭದಲ್ಲಿ ಅವರ ಕಾರ್ಯವನ್ನು ಅನುಸರಿಸಿದ್ದೇನೆ. 2011ರಲ್ಲಿ ನಾನು ಪ್ರಧಾನ ಕಾರ್ಯದರ್ಶಿಯಾಗಿದ್ದ ಸಮಯ ಅವರಿಗೆ ವಿಶಿಷ್ಟ ಕನ್ನಡಿಗ ಪ್ರಶಸ್ತಿ ನೀಡಿ ಗೌರವಿಸಿದ್ದಾಗ ಅವರು ಬಹಳ ಖುಷಿ ಪಟ್ಟಿದ್ದರು.

ಸಂಘದ ಅಮೃತ ಮಹೋತ್ಸವ ಸಮಾರೋಪ ಕಾರ್ಯಕ್ರಮದಲ್ಲಿ ಅವರನ್ನು ಅಭಿನಂದಿಸಲು ನಾವು ಅವರಿಗೆ ಆಹ್ವಾನ ನೀಡಿದ್ದೆವು ಆದರೆ ಕಾರಣಾಂತರ ಅವರು ಅಂದು ಬರಲಾಗಲಿಲ್ಲ. ಅವರ ಗೌರವಾರ್ಥ ನೆನಪಿನ ಸ್ಮರಣಿಕೆಯನ್ನು ಅವರ ಮಕ್ಕಳಿಗೆ ಇಂದು ನೀಡಿ ಅವರನ್ನು ನೆನಪಿಸಿಕೊಳ್ಳುತ್ತಿದ್ದೇವೆ. ಕಾಕತಾಳೀಯವೋ ಎಂಬಂತೆ ಶ್ರೀಮತಿ ಸುಮಿತ್ರಾ ರಾವ್ ಅವರ ಕುರಿತು ನಮ್ಮ ಅಭಿಮತದ ಫೆಬ್ರವರಿ ತಿಂಗಳ ಸಂಚಿಕೆಯ ತಿಂಗಳ ವ್ಯಕ್ತಿ ಅಂಕಣದಲ್ಲಿ ಅವರೊಂದಿಗೆ ಸಮಿತಿಯಲ್ಲಿ ಜೊತೆಗೆ ಸಂಘದ ಕಾರ್ಯ ನಿರ್ವಹಿಸಿರುವ ಶ್ರೀ ಸರವು ಕೃಷ್ಣ ಭಟ್ ಅವರು ತಮ್ಮ ಮಾತುಗಳಲ್ಲಿ ಅವರನ್ನು ನೆನಪಿಸಿಕೊಂಡಿದ್ದರು. ಆದರೆ, ದುರದೃಷ್ಟವಷಾತ್ ಅವರು ಫೆಬ್ರವರಿ ತಿಂಗಳಿನಲ್ಲೇ ನಿಧನರಾಗಿರುವುದು ಬಹಳ ದುಃಖದ ವಿಷಯ. ಹಾಸನ ಜಿಲ್ಲೆಯ ಹೊಳೆನರಸೀಪುರದ ಸುಮಿತ್ರಾ ರಾವ್ ಅಮ್ಮನವರನ್ನು ಹಾಗು ಸಕಲೇಶಪುರದ ಬೈಕೆರೆ ನಾಗೇಶ್ ಅವರನ್ನು ನಾವು ಇತ್ತೀಚೆಗೆ ಕಳೆದುಕೊಂಡಿರುವುದು ದೆಹಲಿ ಕನ್ನಡಿಗರಿಗೆ ತುಂಬಲಾರದ ನಷ್ಟವಾಗಿದೆ. ಶ್ರೀಮತಿ ಸುಮಿತ್ರಾ ರಾವ್ ಅವರ ಮಕ್ಕಳಿಗೆ, ಕುಟುಂಬದವರಿಗೆ ಅವರನ್ನು ಕಳೆದುಕೊಂಡ ದುಃಖ ಸಹಿಸುವ ಶಕ್ತಿ ದೇವರು ನೀಡಲಿ, ಅವರ ಮಕ್ಕಳು ಯಾವತ್ತೂ ಸಂಘದ ಸದಸ್ಯರಾಗಿ ಇರುತ್ತಾರೆ. ನಮ್ಮ ಕಾರ್ಯಕ್ರಮಗಳಲ್ಲಿ ಮುಂದೆಯೂ ಬಂದು ಅಮ್ಮನವರಂತೇ ಭಾಗಿಯಾಗಬೇಕೆಂದು, ಅವರ ಕಷ್ಟ ಸುಖಗಳಲ್ಲಿ ನಾವು ಮತ್ತು ಸಂಘ ಸದಾ ಜೊತೆ

ಇರುತ್ತೇವೆ, ಶ್ರೀಮತಿ ಸುಮಿತ್ರಾ ರಾವ್ ಅಮ್ಮನವರಿಗೆ ಗೌರವ ನಮನಗಳನ್ನು ಅರ್ಪಿಸುತ್ತಾ, ಅವರ ಆತ್ಮಕ್ಕೆ ಮೋಕ್ಷ ಸಿಗಲಿ ಎಂದು ಪ್ರಾರ್ಥಿಸುತ್ತೇನೆ ಎಂದರು.

ಹಿರಿಯ ದೆಹಲಿ ಕನ್ನಡಿಗರಾದ ಶ್ರೀ ವಿ.ವಿ. ಬಿರಾದಾರ ಅವರು ಮಾತನಾಡಿ ಶ್ರೀಮತಿ ಸುಮಿತ್ರಾ ರಾವ್ ಅವರ ನಿಧನ ಬಹಳ ದುಃಖದಾಯಕ ಸಂಗತಿ. ಅವರು 30 ವರ್ಷಗಳಿಂದ ತಮಗೆ ಪರಿಚಯವಿದ್ದರು. ಅವರಿಗೆ ಮಕ್ಕಳನ್ನು ಕಂಡರೆ ಹೆಚ್ಚಿನ ಪ್ರೀತಿ. ನಿನ್ನೆ ಹುಟ್ಟಿದ ನಾವು ನಾಳೆ ಸಾಯುವೆವು ಶರಣರ ಜೀವನವನ್ನು ಮರಣದಲ್ಲಿ ನೋಡು ಎನ್ನುವ ಮಾತಿದೆ. 1974ರಲ್ಲಿ ದೆಹಲಿಗೆ ನಾನು ಬಂದ ಆಗಿನ ಸಮಯದಲ್ಲಿ ನಮ್ಮ ಕನ್ನಡ ಜನರ ನಡುವೆ ಬಹಳ ಪ್ರೀತಿ ವಿಶ್ವಾಸವಿರುತ್ತಿತ್ತು. ಈಗ ಆ ಭಾವನೆ ಸ್ವಲ್ಪ ಕಡಿಮೆಯಾಗಿದೆ, ಕನ್ನಡಿಗರನ್ನು ಬಹಳ ಆತ್ಮೀಯತೆ ಹಾಗು ಗೌರವದಿಂದ ಕಾಣುವ ಪ್ರವೃತ್ತಿಯವರಾಗಿದ್ದರು ಶ್ರೀಮತಿ ಸುಮಿತ್ರಾ ರಾವ್ ಅವರು. ನನ್ನನ್ನು ಒಬ್ಬ ಮಗನಂತೆ ಅವರು ಕಾಣುತ್ತಿದ್ದರು. ಅವರ ವಿಚಾರಗಳನ್ನು ನಾವೆಲ್ಲಾ ಮುಂದುವರಿಸಿಕೊಂಡು ಹೋಗಬೇಕು. ದೇವರು ಅವರ ಆತ್ಮಕ್ಕೆ ಮೋಕ್ಷ ಕೊಡಲಿ ಎಂದರು.

ಹಿರಿಯ ದೆಹಲಿ ಕನ್ನಡತಿ, ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್‌ನ ಹಿರಿಯ ಸದಸ್ಯೆ ಹಾಗೂ ಶ್ರೀಮತಿ ಸುಮಿತ್ರಾ ರಾವ್ ಅವರ ಆತ್ಮೀಯರಾದ ಶ್ರೀಮತಿ ರಾಧಾ ಕೌಜಲಗಿ ಅವರು ಮಾತನಾಡಿ ಸ್ನೇಹಾ ಲೇಡೀಸ್ ಕ್ಲಬ್‌ನ ಸ್ಥಾಪಕ ಸದಸ್ಯರಾಗಿದ್ದ ಶ್ರೀಮತಿ ಸುಮಿತ್ರಾ ರಾವ್ ಅವರು ಅದರ ಆಧಾರಸ್ತಂಭವಾಗಿದ್ದರು. ಸಂಘಕ್ಕೆ ಬರುವವರನ್ನು ಪ್ರೀತಿಯಿಂದ ಮಾತನಾಡಿಸಿ, ಅಸೋಸಿಯೇಷನ್‌ನ ಸದಸ್ಯರಾಗಲು ಅನುವು ಮಾಡಿಕೊಡುತ್ತಿದ್ದರು. ಅವರ ಮನೆಯಲ್ಲಿ ಎಲ್ಲರೂ ಹಬ್ಬ ಹರಿದಿನಗಳಲ್ಲಿ ಪೂಜೆಯಲ್ಲಿ ಪಾಲ್ಗೊಳ್ಳುತ್ತಿದ್ದೆವು, ಅವರ ಮನೆ ಎಲ್ಲರಿಗೂ ತವರುಮನೆಯಂತೆ ಇತ್ತು. ಪ್ರತಿಯೊಬ್ಬರನ್ನೂ ಪ್ರೀತಿಯಿಂದ ಸತ್ಕರಿಸುತ್ತಿದ್ದರು.

ಕೋವಿಡ್ ಸಮಯದಲ್ಲಿ ಗಣೇಶ ಪೂಜೆಗೆ ಎಲ್ಲರೂ ಗುರುಗ್ರಾಮದ ಅವರ ಮನೆಯಲ್ಲಿ ಸೇರುತ್ತಿದ್ದೆವು. ಅವರು ಎಲ್ಲರಿಗೂ ತಾಯಿಯಾಗಿ, ಅಕ್ಕನಾಗಿ ಅಕ್ಕರೆಯಿಂದ ನೋಡಿಕೊಳ್ಳುತ್ತಿದ್ದರು. ಅವರ ಜೊತೆ ಒಳ್ಳೆಯ ಸಮಯ ಕಳೆದಿದ್ದೇನೆ. ಅವರ ನೆನಪು ಸದಾ ಇರಲಿದೆ. ಅವರು ನಡೆದಂತೆ ನಾವು ಸ್ನೇಹಾ ಅಸೋಸಿಯೇಷನ್ ಅನ್ನು ಮುಂದುವರಿಸಿಕೊಂಡು ಹೋಗಬೇಕು, ಅವರ ಆತ್ಮಕ್ಕೆ ಶಾಂತಿ ಸಿಗಲಿ, ಅವರನ್ನು ಕಳೆದುಕೊಂಡ ದುಃಖವನ್ನು ಸಹಿಸುವ ಶಕ್ತಿಯನ್ನು ಅವರ ಮಕ್ಕಳಿಗೆ ದೇವರು ನೀಡಲಿ ಎಂದು ತಮ್ಮ ನುಡಿನಮನ ಅರ್ಪಿಸಿದರು.

ನಂತರ ಮಾತನಾಡಿದ ಶ್ರೀಹರಿ ಶೇಖರ್ ಅವರು 1998ರಲ್ಲಿ ಸಂಘದಲ್ಲಿ ತಾವು ಭೇಟಿ ಮಾಡಿದವರಲ್ಲಿ ಶ್ರೀಮತಿ ಸುಮಿತ್ರಾ ರಾವ್ ಅವರು ಮೊದಲಿಗರು. ವಾರ್ಷಿಕ ಕಾರ್ಯಕ್ರಮದಲ್ಲಿ ತಮಗೆ ಹಾಡನ್ನು ಹೇಳಲು ಅವಕಾಶ ಮಾಡಿಕೊಟ್ಟು ಸಂಘದ ಸದಸ್ಯತ್ವ ಪಡೆಯಲು ಸಹಾಯ ಮಾಡಿದ್ದರು. ಅವರನ್ನು ದೆಹಲಿ ಕರ್ನಾಟಕ ಸಂಘದ ಉಕ್ಕಿನ ಮಹಿಳೆ ಎಂದರೆ ತಪ್ಪಾಗಲಾರದು. ಉತ್ತಮ ಅಂತಃಕರಣದ ತಾಯಿ ಅವರು. ಕೆಲಸದಲ್ಲಿ ಶ್ರದ್ಧೆ, ಚಾಕಚಕ್ಯತೆ ಹಾಗು ಪರಿಪೂರ್ಣತೆ ಅವರದ್ದಾಗಿತ್ತು. ಯಾವಾಗಲೂ ತಮ್ಮ ಬ್ಯಾಗಿನಲ್ಲಿ ಚಾಕಲೇಟ್ ಇಟ್ಟುಕೊಂಡಿರುತ್ತಿದ್ದರು. ಮಕ್ಕಳಿಗೆ, ದೊಡ್ಡವರಿಗೆ ನೀಡುತ್ತಿದ್ದರು. ವಾರ್ಷಿಕ ಕಾರ್ಯಕ್ರಮ ಆಯೋಜನೆಯಲ್ಲಿ ಅವರದ್ದು ಬಹಳ ಅಚ್ಚುಕಟ್ಟು. ಬಹುಮಾನ ಆಯ್ದು ತರುವುದರಿಂದ ಹಿಡಿದು, ಲೇಬಲ್ ಹಾಕಿ ಸರಿಯಾದ ವ್ಯಕ್ತಿಗಳಿಗೆ ವಿತರಣೆ ಮಾಡಿಸುವವರೆಗೆ ಅವರು ಮುತುವರ್ಜಿ ವಹಿಸುತ್ತಿದ್ದರು. ಗಣೇಶ ಮಿತ್ರ ಮಂಡಳಿಯ ಉದಯಕ್ಕೆ ಕಾರಣಕರ್ತರಲ್ಲಿ ಅವರೂ ಒಬ್ಬರು. ಶ್ರೀಮತಿ ಜ್ಯೋತ್ಸ್ನಾ ರಾವ್, ಡಾ. ಅಹಲ್ಯಾಚಿಂತಾಮಣಿ, ಶ್ರೀಮತಿ ಸುಭಾಸಿನ್ನೂರದಾಸ್ ಅವರೊಂದಿಗೆ ಶ್ರೀಮತಿ ಸುಮಿತ್ರಾ ರಾವ್ ಅವರ ಮಹಿಳೆಯರ ಗುಂಪು ಬಹಳ ಛಾಪು ಮೂಡಿಸುವ ವಿಶಿಷ್ಟ ವ್ಯಕ್ತಿತ್ವದವರಾಗಿದ್ದರು. ಅವರ ಮಗ ದೀಪಕ್ ಒಳ್ಳೆಯ ಕ್ರಿಕೆಟ್ ಆಟಗಾರ, ಮಗಳು ಸಾಧನಾ ತಾಯಿಯಂತೆ ಸೌಮ್ಯ. ಸುಮಿತ್ರಾ ರಾವ್ ಅವರು Iron Lady leading from the front ಆಗಿದ್ದರು. ಸಂಘಕ್ಕೆ ಅವರ ಕೊಡುಗೆ ಅಪಾರ, ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿ ಕುಟುಂಬದವರಿಗೆ ಸಿಗಲಿ, ಅವರಿಗೆ ನನ್ನ ನಮನಗಳು ಎಂದರು.

ಶ್ರೀಮತಿ ಸುಮಿತ್ರಾ ರಾವ್ ಅವರ ಮಗಳು ಶ್ರೀಮತಿ ಸಾಧನಾ ರಾವ್ ಮಾತನಾಡಿ ಆಸ್ಪತ್ರೆಗೆ ಒಂದು ಸಣ್ಣ ಪರೀಕ್ಷೆಗೆಂದು ಹೋದ ತಮ್ಮ ತಾಯಿ ಅಲ್ಲಿ 10 ದಿನಗಳಿದ್ದು ಮತ್ತೆ ವಾಪಾಸ್ಸು ಮನೆಗೆ ಬರಲೇ ಇಲ್ಲ. 1975 ರಿಂದ ದೆಹಲಿಗೆ ಬಂದ 50 ವರ್ಷಗಳಲ್ಲಿ ಅವರನ್ನು ಕಂಡ ನನಗೆ ಅವರ ಜೀವನ ಪ್ರೇರಣಾದಾಯಕ ಎಂದರು. She gave her life for Delhi Karnataka Sangha.My father was pilot in Civil Aviation and had transferable job. My mother always dreamt to have a building for DKS, My father supported her by taking responsibility of children, when she used to give time to DKS. She was a selfless person, she used to render her service without any expectation. She was very enthusiastic person. For DKS she gave a lot of time and energy. She used to feel very sad in earlier days when there was no auditorium to DKS and programmes were either organised in Maharashtra Rangayana or in Tamil Sangam. When the DKS Cultural Complex came up she was happy. I am glad that her dream has come true and I feel proud today. ನಮ್ಮ ಅಮ್ಮನವರು ಆಶಿಸುತ್ತಿದ್ದಂತೆ ದೆಹಲಿಯಲ್ಲಿರುವ ಎಲ್ಲಾ ಕನ್ನಡಿಗರು ಮುಂದೆ ಬರುವಂತಾಗಲಿ ಎಂದು ಹೇಳಿದರು. ತಾಯಿಯವರ ಬಗ್ಗೆ ಸೆಮಿನಾರ್ ಹಾಲ್‌ನಲ್ಲಿ ಪ್ರದರ್ಶನಗೊಂಡ ಸ್ಲೈಡ್ ಷೋ ಬಗ್ಗೆ ಮೆಚ್ಚುಗೆ ಸೂಚಿಸುತ್ತಾ, ಅಮ್ಮನವರ ನೆನಪು ಮಾಡಿಕೊಂಡು ಭಾವುಕರಾದರು. I am proud of my mother, along with my sister Kalpana and brother Deepak we convey our gratitude to DKS ಎಂದರು.

ಶ್ರೀಮತಿ ಸುಮಿತ್ರಾ ರಾವ್ ಅವರ ಮಗ ಶ್ರೀ ದೀಪಕ್ ಅವರು ಮಾತನಾಡಿ ತಾನು ದುಬೈಗೆ ಇಂದು ವಾಪಸ್ಸು ಹೋಗುತ್ತಿದ್ದೇನೆ, ಸಂಘದ ಈ ಕಟ್ಟಡ ನೋಡಿ ತಮಗೆ ಬಹಳ ಸಂತೊಷವಾಗುತ್ತಿದೆ. My mother was a great visionary and a great mother too. Her dream has come true. We miss her let




her, legacy continue ಎಂದರು.

ಶ್ರೀಮತಿ ಸುಮಿತ್ರಾ ರಾವ್ ಅವರ ಹಿರಿಯ ಮಗಳಾದ ಶ್ರೀಮತಿ ಕಲ್ಪನಾ ಅವರು ಮಾತನಾಡಿ I left Delhi more than 42 years back and I was not here when she did so much for Delhi Karnataka Sangha. She was a great cook, She used to treat all with nice hospitality when any Kannadigas came to our house, there was no feeling of outsiders. She has given her life to DKS. The slide show about her revoked our memories. We are grateful to all for remembering our mother and inviting us to pay tribute to her ಎಂದರು.

ಶ್ರೀಮತಿ ಸುಮಿತ್ರಾ ರಾವ್ ಅವರೊಂದಿಗೆ ಹಲವು ವರ್ಷ ಕಾರ್ಯಕಾರಿ ಸಮಿತಿಯಲ್ಲಿ ವಿವಿಧ ಸ್ಥಾನಗಳಲ್ಲಿ ಸೇವೆ ಸಲ್ಲಿಸಿರುವ ಮಾಜಿ ಅಧ್ಯಕ್ಷರಾದ ಡಾ. ವೆಂಕಟಾಚಲ ಜಿ. ಹೆಗಡೆಯವರು ದೆಹಲಿಯ ಹೊರಗೆ ಪೂರ್ವ ನಿಯೋಜಿತ ಕೆಲಸದ ನಿಮಿತ್ತ ನುಡಿನಮನ ಸಭೆಗೆ ಬರಲಾಗದಿದ್ದ ಕಾರಣ ಕಳುಹಿಸಿಕೊಟ್ಟ ಶ್ರದ್ಧಾಂಜಲಿ ನುಡಿಗಳನ್ನು ಅವರ ಪರವಾಗಿ ಸಂಘದ ಜಂಟಿ ಕಾರ್ಯದರ್ಶಿ ಶ್ರೀ ನಾರಾಯಣ ಬಿ. ಸಾದರ ಪಡಿಸಿದರು.

ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾ ಪಿ. ರಾವ್ ಮಾತನಾಡಿ Death ends but not the relationship ಎಂದು ಹೇಳುತ್ತಾ ಅಭಿಮತ ಪತ್ರಿಕೆಯ ಫೆಬ್ರವರಿ ಸಂಚಿಕೆಯ ಶ್ರೀ ಸರವು ಕೃಷ್ಣ ಭಟ್ ಅವರ ತಿಂಗಳ ವ್ಯಕ್ತಿ ಅಂಕಣದಲ್ಲಿ ಪ್ರಕಟವಾಗಿದ್ದ ಶ್ರೀಮತಿ ಸುಮಿತ್ರಾ ರಾವ್ ಕುರಿತ ಲೇಖನವನ್ನು ಓದಿ ತಿಳಿಸಿದರು.

ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳು ಸದಸ್ಯರು, ಹಿರಿಯರೂ ಸೇರಿದಂತೆ ಅಪಾರ ಸಂಖ್ಯೆಯಲ್ಲಿ ದೆಹಲಿ ಕನ್ನಡಿಗರು ಈ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅಗಲಿದ ಶ್ರೀಮತಿ ಸುಮಿತ್ರಾ ರಾವ್ ಅವರಿಗೆ ನುಡಿನಮನ ಸಲ್ಲಿಸಿದರು. ಅವರ ಆತ್ಮಕ್ಕೆ ಮೋಕ್ಷ ಸಿಗಲೆಂದು ಹಾಗು ಅವರ ಮಕ್ಕಳಿಗೆ, ಕುಟುಂಬದವರಿಗೆ ಅವರ ಅಗಲಿಕೆಯ ದುಃಖವನ್ನು ಸಹಿಸುವ ಶಕ್ತಿಯನ್ನು ಭಗವಂತನು ಕರುಣಿಸಲೆಂದು ಪ್ರಾರ್ಥಿಸುತ್ತಾ ದೆಹಲಿ ಕರ್ನಾಟಕ ಸಂಘದ ಎಲ್ಲಾ ಸದಸ್ಯರ ಪರವಾಗಿ ಅಗಲಿದ ಶ್ರೀಮತಿ ಸುಮಿತ್ರಾ ರಾವ್ ಅವರಿಗೆ ಎಲ್ಲರ ಪರವಾಗಿ ಅಭಿಮತ ಸಂಪಾದಕ ಮಂಡಳಿಯು ಗೌರವಪೂರ್ವಕ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದೆ.■

***ಅಭಿಮತ ವರದಿ***

# ಸುಮಿತ್ರಾ ರಾವ್ ಅವರಿಗೆ ಶ್ರದ್ಧಾಂಜಲಿ



ದೆಹಲಿ ಕರ್ನಾಟಕ ಸಂಘದೊಂದಿಗೆ ನಾಲ್ಕು ದಶಕಗಳಿಗೂ ಮೀರಿದ ನಿಕಟ ಸಂಬಂಧವನ್ನು ಇರಿಸಿಕೊಂಡಿದ್ದ ಸುಮಿತ್ರಾ ರಾವ್ ಅವರು ನಮ್ಮನ್ನೆಲ್ಲ ಬಿಟ್ಟು ಅಗಲಿದ್ದಾರೆ. ಸಂಘದ ಕಷ್ಟಕರ ದಿನಗಳಿಂದ ನಂತರದ ಅದರ ಅತ್ಯಂತ ಭವ್ಯ ದಿನಗಳವರೆಗೆ ಜೊತೆಗೆ ಇದ್ದವರು ಅವರು. ಸಂಘದ ಈ ಎಲ್ಲ ಕಾಲದ ಏಳುಬೀಳುಗಳನ್ನು ಕಂಡವರು ಅವರು. ಸಂಘವನ್ನು ತಮ್ಮ ಮನೆಯಂತೆ ಬೆಳೆಸಿದ ಹತ್ತಾರು ಹಿರಿಯ ಜೀವಗಳು ಅತ್ತಿತ್ತ ಹೋದರೂ ಸುಮಿತ್ರಾ ರಾವ್ ಅವರು ದೆಹಲಿಯಲ್ಲೆ ನೆಲೆಸಿ ಎಲ್ಲ ಕನ್ನಡಿಗರ ಮನ ತಟ್ಟಿದವರು. ದೆಹಲಿಯ ಕನ್ನಡಿಗ ಪ್ರಪಂಚದ ಅಂದಿನವರೊಂದಿಗೆ ಮತ್ತು ಇಂದಿನವರೊಂದಿಗೆ ಸುಮಿತ್ರಾ ರಾವ್‌ರವರು ಇದ್ದ ಕೊನೆಯ ಕೊಂಡಿ. ಅವರ ಅಗಲಿಕೆಯಿಂದ ಈ ಕೊಂಡಿ ಕಳಚಿಕೊಂಡ ಭಾವ ನನ್ನನ್ನಾವರಿಸುತ್ತಿದೆ.

ಅವರು ಸಂಘದ ಉಪಾಧ್ಯಕ್ಷೆಯಾಗಿ ಮತ್ತು ಹಲವಾರು ಬಾರಿ ಅದರ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ತಮ್ಮ ಅಚ್ಚಳಿಯದ ಸೇವೆಯನ್ನು ಸಲ್ಲಿಸಿದ್ದಾರೆ. ಹಾಗೆ ನೋಡಿದರೆ, ದೆಹಲಿ ಕರ್ನಾಟಕ ಸಂಘವನ್ನು ಕಟ್ಟಿ ಬೆಳೆಸುವುದರಲ್ಲಿ ಮಹಿಳೆಯರು ವಹಿಸಿದ ಪಾತ್ರ ಬಹು ದೊಡ್ಡದು. ತಮ್ಮ ಎಲ್ಲ ಸಾಂಸಾರಿಕ ಮತ್ತು ಬದುಕಿನ ಜಟಿಲ ಕಾರ್ಯಗಳ ನಡುವೆಯೂ ಮಹಿಳೆಯರು ಎಂದೆಂದಿಗೂ ಸಂಘಕ್ಕೆ ನಿರಂತರವಾಗಿ ತಮ್ಮ ಸೇವೆಯನ್ನು ಅನೂಚಾನವಾಗಿ ಸಲ್ಲಿಸುತ್ತ ಬಂದಿದ್ದಾರೆ. ಈ ಸಾಲಿನಲ್ಲಿ ಗೌರವಾನ್ವಿತ ಮಹಾತಾಯಿ ಸುಮಿತ್ರಾ ರಾವ್‌ರವರ ಹೆಸರು ಸದಾ ಮಂಚೂಣಿಯಲ್ಲಿರುತ್ತದೆ.

ಸುಮಿತ್ರಾ ರಾವ್‌ರವರು ಎಂದೂ ದೊಡ್ಡ ಭಾಷಣ ಮಾಡುವ ಜಾಯಮಾನದವರಾಗಿರಲ್ಲಿಲ್ಲ. ಅವರನ್ನು ಎಂದೂ ವೇದಿಕೆಯ ಮೇಲೆ ಕಂಡ ನೆನಪು ನನಗಿಲ್ಲ. ಏನಿದ್ದರೂ ಅವರ ಎಲ್ಲ ಕಾರ್ಯಚಟುವಟಿಕೆಗಳು ವೇದಿಕೆಯ ಹಿಂಬದಿಯಲ್ಲಿ. ಅದು ವಾರ್ಷಿಕೋತ್ಸವದ ಅಂಗವಾಗಿ ನಡೆಯುವ ಹಲವಾರು ಸಾಂಸ್ಕೃತಿಕ, ಕ್ರೀಡೆ ಮತ್ತು ಇತರ ಕಾರ್ಯಕ್ರಮಗಳೆ ಇರಬಹುದು, ಅದಕ್ಕೆ ಬೇಕಾದ ಬಹುಮಾನಗಳ ಉದ್ದನೆಯ ಯಾದಿಗಳೆ ಇರಬಹುದು, ಈ ಬಹುಮಾನಗಳನ್ನು ಅತ್ಯಂತ ಮುತುವರ್ಜಿಯಿಂದ ಆರಿಸಿ ಖರೀದಿಸುವ ಪ್ರಕ್ರಿಯೆಯೆ ಇರಬಹುದು ಮತ್ತು ಕೊನೆಗೆ ಅದನ್ನು ಸಾಲುಸಾಲಾಗಿ ಪರದೆಯ ಹಿಂದೆ ಜೋಡಿಸಿಟ್ಟು ಮಕ್ಕಳಿಗೆ, ದೊಡ್ಡವರಿಗೆ, ಎಲ್ಲರಿಗೂ ಅಂದಿನ ಅತಿಥಿಗಳ ಕೈಯಲ್ಲಿ ಕೊಡಿಸುವ ಪರಿಯೆ ಇರಬಹುದು, ಈ ಎಲ್ಲದರಲ್ಲೂ ಅವರದ್ದೇ ಛಾಪು ಒಡಮೂಡಿ ಬರುತ್ತಿತ್ತು. ಅದನ್ನು ಅವರಷ್ಟು ಮುತುವರ್ಜಿಯಿಂದ ಮತ್ತು ಪ್ರೀತಿಯಿಂದ ಮಾಡುವ ಬಗೆಯಿಂದಾಗಿ ಎರಡು-ಮೂರು ಪೀಳಿಗೆಯ ಕನ್ನಡದ ಮಕ್ಕಳು ಅವರನ್ನು ಈಗಲೂ ತಮ್ಮ ನೆನಪಿನ ಹಂದರದಲ್ಲಿ ಇರಿಸಿಕೊಳ್ಳುವಂತಾಗಿದೆ. ಯಾವುದೇ ಪ್ರಚಾರದ ಅಬ್ಬರವಿಲ್ಲದೆ, ಮೆಲು ಮಾತಿನ ಅವರು ಸಂಘದ ನೂರಾರು ಕಾರ್ಯಕ್ರಮಗಳನ್ನು ಆಯೋಜಿಸುವುದರಲ್ಲಿ ತಮ್ಮ ಎಣೆಯಿಲ್ಲದ ಕಾಣಿಕೆಯನ್ನು ನೀಡಿದ್ದಾರೆ. ನಾವು 1998 ರಲ್ಲಿ ಸಂಘದ ಸುವರ್ಣ ಮಹೋತ್ಸವನ್ನು ದೆಹಲಿಯ ಪ್ರತಿಷ್ಠಿತ ಸಿರಿಫೋರ್ಟ್ ಸಭಾಂಗಣದಲ್ಲಿ ಆಯೋಜಿಸಿ ಮತ್ತು ಅದಕ್ಕಾಗಿ ಡಾ. ರಾಜಕುಮಾರ ಸಂಗೀತ ಸಂಜೆ ಮತ್ತು ಇತರ ವ್ಯಾಪಕ ಕಾರ್ಯಕ್ರಮಗಳನ್ನು ಎಲ್ಲ ದೆಹಲಿ ಕನ್ನಡಿಗರನ್ನು ಸೇರಿಸಿಕೊಂಡು ಆಯೋಜಿಸುವಲ್ಲಿ ಸುಮಿತ್ರಾ ರಾವ್ ಅವರ ಕಾಣಿಕೆ ಅಪಾರ ಎಂಬುದನ್ನು ನಾನು ವಿನಮ್ರಪೂರ್ವಕವಾಗಿ ನೆನಪಿಸಿಕೊಳ್ಳುತ್ತೇನೆ.


ಮೂಲತಃ ಕರ್ನಾಟಕದ ಹೊಳೆನರಸಿಪುರದ ನೆಲದಿಂದ ಬಂದ ಅವರಿಗೆ ಕನ್ನಡವೆಂಬುದು ಕಾವೇರಿಯ ಜಲದಷ್ಟೆ ಸರಳ ಮತ್ತು ಸರಾಗ. ತಮ್ಮ ಪತಿ ಶ್ರೀ ರಾಮಚಂದ್ರ ರಾವ್ ಅವರ ಜೊತೆಗಿನ ದಾಂಪತ್ಯ ಜೀವನದ ಕಾಲದಲ್ಲಿ ದೇಶದ ವಿವಿಧ ಭಾಗಗಳಲ್ಲಿ ಇದ್ದರೂ ನಂತರ ದೆಹಲಿಯನ್ನೆ ಮನೆ ಮಾಡಿಕೊಂಡು ಇಲ್ಲೆನೇ ದೇಶ-ವಿದೇಶಗಳ ಜಗತ್ತಿನೊಂದಿಗೆ ಕನ್ನಡದ ಜಗತ್ತನ್ನು ಕಂಡವರು. ಶ್ರೀ ರಾಮಚಂದ್ರ ರಾವ್ ಅವರು ಏರ್ ಇಂಡಿಯಾದಲ್ಲಿ ದೊಡ್ಡ ಅಧಿಕಾರಿಗಳಾಗಿದ್ದರು. ಅವರೂ ಸಹ ಅಷ್ಟೇ ಸರಳ ವ್ಯಕ್ತಿ. ಅವರೊಬ್ಬ ದೊಡ್ಡ ಅಧಿಕಾರಿಗಳು ಎಂದು ಅನಿಸುತ್ತಲೇ ಇರಲಿಲ್ಲ. ಆಗಿನ ದೆಹಲಿಗೂ ಈಗಿನ ದೆಹಲಿಗೂ ಇರುವ ವ್ಯತ್ಯಾಸವನ್ನು ನಾವೆಲ್ಲರೂ ಬಲ್ಲೆವು. ದೆಹಲಿ ಮತ್ತು ಉತ್ತರ ಭಾರತವೆಂದರೆ ಅದು ಯಾವುದೋ ಇನ್ನೊಂದು ದೇಶದಂತೆ. ಈಗಿನಂತೆ ಸಂವಹನದ ಮತ್ತು ಇತರ ತಾಂತ್ರಿಕ ಸವಲತ್ತುಗಳು ಇದ್ದ ಕಾಲವಲ್ಲ. ಕನ್ನಡವನ್ನು ನೆನಪು ಮಾಡಿಕೊಂಡು, ಉಳಿಸಿಕೊಂಡು ಬದುಕುವ ಕಾಲ. ಹೊರನಾಡ ಕನ್ನಡ ಸಂಘಗಳ ಮಹತ್ವ ಆ ಕಾಲದಲ್ಲಿ ಅತಿ ಹೆಚ್ಚು, ಈಗಲೂ ಸಹ. ಆದರೆ, ಕನ್ನಡ ಮಾತನಾಡಲು, ಕನ್ನಡದೊಂದಿಗೆ ಒಡನಾಡಲು ಸಂಘವೊಂದು ಬೇಕು. ದೆಹಲಿ ಕರ್ನಾಟಕ ಸಂಘ ಆಗಿನ ಸಂದರ್ಭದಲ್ಲಿ ಈ ಆಶಯಗಳನ್ನು ಪೂರೈಸಲು ಅವರಿಗೆ ಇದ್ದ ಸಂಘಟನೆಯಾಗಿತ್ತು. ಕನ್ನಡದ ಮನಗಳೊಂದಿಗೆ ಬೆರೆಯುವ ಜಾಗ ಅದಾಗಿತ್ತು. ಅವರ ಮಕ್ಕಳು ಕಲ್ಪನಾ, ಸಾಧನಾ ಮತ್ತು ದೀಪಕರವರು ಕನ್ನಡದ ನೆರಳಿನಲ್ಲೆ ಬೆಳೆದವರು.



ಸುಮಿತ್ರಾ ರಾವ್ ಅವರನ್ನು ನಾನು ದೆಹಲಿ ಕರ್ನಾಟಕ ಸಂಘದ ಆಗಿನ ಪ್ರಾಂಗಣದಲ್ಲೆ ಕಂಡ ನೆನಪು ಇನ್ನೂ ಹಸಿಯಾಗಿದೆ. ಹಳೆ ಮೈಸೂರಿನ ಕನ್ನಡದ ಕಂಪು ಅವರ ಮಾತಿನ ಆವರಣದಲ್ಲಿ ಸದಾ ಮೂಡಿ ಬರುವ ರೀತಿಯನ್ನು ಕಂಡು ನಾನು ಬೆರಗಾಗಿದ್ದೇನೆ. ಅಷ್ಟೊಂದು ಕಾಲ ಊರಿನಿಂದ ದೂರವಿದ್ದರೂ ಅವರು ತಮ್ಮ ಮೂಲನೆಲೆಗಳ ಸೆಲೆಗಳನ್ನು ಎಂದೂ ಮರೆತಿರಲಿಲ್ಲ. ಎಲ್ಲರನ್ನೂ ಒಳಗೊಂಡು ಪ್ರೀತಿಯಿಂದ ಮಾತನಾಡಿಸುವ ಅವರ ಪರಿ ವಿಶೇಷವಾದದ್ದು. ಕಾಲಾಂತರದಲ್ಲಿ ಅವರು ದೆಹಲಿ ಕರ್ನಾಟಕ ಸಂಘದಿಂದ ವಿಶ್ರಾಮ ಪಡೆದರೂ ದೆಹಲಿಯಲ್ಲಿ ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್‌ನನ್ನು ಹುಟ್ಟು ಹಾಕಿ ಅದನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸಿದರು.

ಸುಮಿತ್ರಾ ರಾವ್‌ರವರು ಅರ್ಥಪೂರ್ಣವಾದ ತುಂಬು ಜೀವನವನ್ನು ನಡೆಸಿ ದೆಹಲಿ ಕನ್ನಡಿಗರೆಲ್ಲರ ಉನ್ನತ ಗೌರವಕ್ಕೆ ಪಾತ್ರರಾಗಿದ್ದಾರೆ. ದೆಹಲಿ ಕರ್ನಾಟಕ ಸಂಘ ಅವರಿಗೆ 2011 ರಲ್ಲಿ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿ ನೀಡಿ ಗೌರವಿಸಿದೆ. ಅವರು ದೆಹಲಿಯ ಕನ್ನಡ ಜಗತ್ತಿಗೆ ನೀಡಿದ ಕೊಡುಗೆ ಸದಾ ನಮ್ಮೆಲ್ಲರಿಗೂ ಮಾರ್ಗದರ್ಶಿಯಾಗಿದೆ. ಅವರಿಗೆ ನಮನಗಳು.

***ಡಾ. ವೆಂಕಟಾಚಲ ಜಿ. ಹೆಗಡೆ***




ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾಗಿದ್ದ ಶ್ರೀಮತಿ ಶ್ಯಾಮಲಾ ಮನೋಹರ್ ರಾವ್ ಅವರು ದಿನಾಂಕ 20.02.2024ರಂದು ಉಡುಪಿಯಲ್ಲಿ ಹೃದಯಾಘಾತದಿಂದ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಸಂಘದ ಆಜೀವ ಸದಸ್ಯರಾದ ಶ್ರೀ ಮನೋಹರ್ ರಾವ್ ಕೊಡವೂರು ಅವರ ಪತ್ನಿಯಾದ ಶ್ರೀಮತಿ ಶ್ಯಾಮಲಾ ಮನೋಹರ್ ಅವರು ಸಂಘದ ಕಾರ್ಯಕ್ರಮಗಳಲ್ಲಿ ಹಾಗೂ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಮೂಲತಃ ಉಡುಪಿ ಜಿಲ್ಲೆಯ ಕುಂಜಿಬೆಟ್ಟಿನವರಾದ ಶ್ರೀಮತಿ ಶ್ಯಾಮಲಾ ಅವರು ಉಡುಪಿಯ ಪ್ರಸಿದ್ಧ ದಿ. ತಬಲಾ ದಾಸ್ ಭಟ್ ಅವರ ಕೊನೆಯ ಪುತ್ರಿ ಹಾಗೂ ಪ್ರಖ್ಯಾತ ಉಡುಪಿ ರಂಗಭೂಮಿಯ ದಿ. ರಾಘವೇಂದ್ರ ಭಟ್ ಮತ್ತು ಮೈಸೂರು ರಂಗಾಯಣದ ದಿ. ಶ್ರೀನಿವಾಸ ಭಟ್ (ಚೀನಿ ಮಾಮ) ರವರ ಕೊನೆಯ ತಂಗಿಯಾಗಿ 1956ರಲ್ಲಿ ಜನಿಸಿದರು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಉಪಾಧ್ಯಕ್ಷರೂ ಹಾಗೂ ದೆಹಲಿ ಕರ್ನಾಟಕ ಸಂಘದ ಮಾಜಿ ಖಜಾಂಚಿಗಳೂ ಆಗಿದ್ದ ಶ್ರೀ ರಾಮಮೂರ್ತಿ ಮತ್ತು ದೆಹಲಿ ಕನ್ನಡ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ, ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯೆಯಾಗಿದ್ದ ಹಾಗು ಪ್ರಸ್ತುತ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯೆಯಾಗಿರುವ ಶ್ರೀಮತಿ ಮಾಲಿನಿ ಪ್ರಹ್ಲಾದ ಅವರ ಅತ್ತಿಗೆಯಾಗಿದ್ದರು.

ಪ್ರವೃತ್ತಿಯಲ್ಲಿ ಹಾಡುಗಾರರಾಗಿದ್ದ ಶ್ರೀಮತಿ ಶ್ಯಾಮಲಾ ಅವರು ವೃತ್ತಿಯಲ್ಲಿ ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಸೇವೆ ಸಲ್ಲಿಸಿದ್ದರು. ನಂತರದಲ್ಲಿ ತಮ್ಮ ಪತಿಯವರಿಗೆ ನೆದರ್‌ಲ್ಯಾಂಡಿನಲ್ಲಿ ವೃತ್ತಿ ವರ್ಗಾವಣೆಯಾದಾಗ ತಮ್ಮ ಬ್ಯಾಂಕ್‌ನ ಉದ್ಯೋಗದಿಂದ ಸ್ವಯಂ ನಿವೃತ್ತಿ ಘೋಷಿಸಿ ಅಲ್ಲಿಗೆ ತೆರಳಿದ್ದರು. ಉಡುಪಿ–ದೆಹಲಿ–ಮುಂಬಯಿ–ನೆದರ್‌ಲ್ಯಾಂಡ್–ಚೆನ್ನೈ–ದೆಹಲಿ ಹೀಗೆ ನಾನಾ ಕಡೆ ಜೀವನ ಮಾಡಿ, ದೆಹಲಿಯ ನಂತರ ಬೆಂಗಳೂರಿನಲ್ಲಿ ವಾಸವಾಗಿ ನಿವೃತ್ತ ಜೀವನ ನಡೆಸಿದ್ದರು.

ಮೃತರ ಆತ್ಮಕ್ಕೆ ಮೋಕ್ಷ ಸಿಗಲಿ ಮತ್ತು ಅವರ ಕುಟುಂಬಕ್ಕೆ ಅವರ ಅಗಲಿಕೆಯ ದುಃಖವನ್ನು ಸಹಿಸುವ ಶಕ್ತಿಯನ್ನು ಭಗವಂತನು ಕರುಣಿಸಲೆಂದು ಪ್ರಾರ್ಥಿಸುತ್ತಾ ಅಗಲಿದ ಶ್ರೀಮತಿ ಶ್ಯಾಮಲಾ ಮನೋಹರ್ ರಾವ್ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ದೆಹಲಿ ಕರ್ನಾಟಕ ಸಂಘ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತಿದೆ.



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾಗಿದ್ದ ಶ್ರೀ ಎ. ಉದಯ ಕುಮಾರ್ ಅವರು ದಿನಾಂಕ 02.03.2024ರಂದು ವಿಧಿವಶರಾಗಿದ್ದಾರೆಂಬುದನ್ನು ತಿಳಿಸಲು ವಿಷಾದಿಸುತ್ತೇವೆ.

ಸರಳ ಸಜ್ಜನಿಕೆಯ ವ್ಯಕ್ತಿಯಾಗಿದ್ದ ಶ್ರೀ ಉದಯ ಕುಮಾರ್ ಅವರು ಮೂಲತಃ ತುಮಕೂರು ಜಿಲ್ಲೆಯವರು. ಬೆಂಗಳೂರಿನ ಇಂಜಿನಿಯರಿಂಗ್ ಕಾಲೇಜಿನಿಂದ ಬಿ.ಇ. (ಎಲೆಕ್ಟ್ರಾನಿಕ್ಸ್) ಪದವಿ ಪಡೆದ ನಂತರ ಬೆಂಗಳೂರು, ಮೈಸೂರಿನಲ್ಲಿ ಕೆಲ ಕಾಲವಿದ್ದು ಅನಂತರ ನೋಯ್ಡಾದಲ್ಲಿರುವ ಜೆ.ಎಸ್.ಎಸ್. ಅಕಾಡೆಮಿ ಆಫ್ ಟೆಕ್ನಿಕಲ್ ಎಜ್ಯುಕೇಶನ್ (JSS-ATE) ನಲ್ಲಿ ಕಳೆದ 22 ವರ್ಷಗಳಿಂದ ಎಲೆಕ್ಟ್ರಾನಿಕ್ಸ್ ವಿಭಾಗದಲ್ಲಿ ಇನ್‌ಸ್ಟ್ರಕ್ಟರ್ ಆಗಿ ನಿರಂತರವಾಗಿ ಸೇವೆ ಸಲ್ಲಿಸಿದ್ದ ಶ್ರೀಯುತರು ಜೆ.ಎಸ್.ಎಸ್. ವಿದ್ಯಾಸಂಸ್ಥೆಯ ಒಂದು ಪ್ರೇರಣಾ ಶಕ್ತಿಯಾಗಿದ್ದರು.

ದೆಹಲಿ ಕರ್ನಾಟಕ ಸಂಘದೊಂದಿಗೆ ಉತ್ತಮ ಒಡನಾಟವಿಟ್ಟುಕೊಂಡಿದ್ದ ಶ್ರೀ ಉದಯ ಕುಮಾರ್ ಅವರು ಸಂಘದ ವಾರ್ಷಿಕ ಆಟೋಟ ಮತ್ತು ಕ್ರೀಡಾ ಸ್ಪರ್ಧೆಗಳಲ್ಲಿ ಅದರಲ್ಲೂ ವಿಶೇಷವಾಗಿ ಕ್ರಿಕೆಟ್ ಪಂದ್ಯಾವಳಿಗಳಲ್ಲಿ ಜೆ.ಎಸ್.ಎಸ್. ಕ್ರಿಕೆಟ್ ತಂಡದೊಂದಿಗೆ ಪ್ರತಿಬಾರಿ ಭಾಗವಹಿಸುತ್ತಾ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುತ್ತಿದ್ದರು. ಕರ್ನಾಟಕ ಸಂಘದ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಬಹಳ ಆಸಕ್ತಿಯಿಂದ ಭಾಗವಹಿಸುತ್ತಿದ್ದರಲ್ಲದೇ, ಜೆ.ಎಸ್.ಎಸ್. ಸಹೋದ್ಯೋಗಿಗಳನ್ನು ಹಾಗೂ ನೋಯ್ಡಾ, ಎನ್‌ಸಿಆರ್ ಕ್ಷೇತ್ರದಲ್ಲಿನ ಕನ್ನಡಿಗರನ್ನು ಒಟ್ಟುಗೂಡಿಸಿ ಪಿಕ್‌ನಿಕ್ ಪ್ರವಾಸದಲ್ಲಿ ಪಾಲ್ಗೊಂಡಿದ್ದು ಉಲ್ಲೇಖನೀಯ. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಮತ್ತು ದೆಹಲಿಯ ಇತರ ಕನ್ನಡಪರ ಸಂಘ ಸಂಸ್ಥೆಗಳ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಿದ್ದ ಅವರು ತಮ್ಮ ಸಲಹೆ ಮಾರ್ಗದರ್ಶನ ಹಾಗೂ ಪ್ರೋತ್ಸಾಹವನ್ನು ದೆಹಲಿ ಎನ್‌ಸಿಆರ್‌ನಲ್ಲಿ ನಡೆಯುವ ಎಲ್ಲಾ ಕನ್ನಡಪರ ಕೆಲಸಗಳಿಗೆ ನೀಡುತ್ತಿದ್ದರು.

ಶ್ರೀಯುತರು ತಮ್ಮ ಪತ್ನಿ ಶ್ರೀಮತಿ ರೂಪ, ಮೈಸೂರಿನಲ್ಲಿ ಸ್ವಂತ ಉದ್ಯೋಗಿಯಾಗಿರುವ ಪುತ್ರ ಶ್ರೀ ಅನುಪ್ ಹಾಗು ಅಮೇರಿಕಾದ ಕ್ಯಾಲಿಫೋರ್ನಿಯಾದಲ್ಲಿ ಬಹು ರಾಷ್ಟ್ರೀಯ ಕಂಪನಿಯಲ್ಲಿ ಉದ್ಯೋಗದಲ್ಲಿರುವ ಪುತ್ರಿ ಶ್ರೀಮತಿ ಪ್ರಿಯದರ್ಶಿನಿಯವರನ್ನು ಅಗಲಿದ್ದಾರೆ. ಜೆ.ಎಸ್.ಎಸ್.–ಎಟಿಇ ನ ಸಹೋದ್ಯೋಗಿಗಳಿಗೆ, ಅಪಾರ ಸಂಖ್ಯೆಯ ದೆಹಲಿ ಎನ್.ಸಿ.ಆರ್. ಕನ್ನಡಿಗರಿಗೆ ಹಾಗು ಬಂಧು ಮಿತ್ರರಿಗೆ ಅವರ ಅಗಲಿಕೆ ತುಂಬಲಾರದ ನಷ್ಟವಾಗಿದೆ. ಅವರ ಸಹೋದ್ಯೋಗಿಗಳು ಹಾಗೂ ಹಿತೈಷಿಗಳು ಮೃತರ ಅಂತಿಮ ದರ್ಶನ ಪಡೆದ ನಂತರ ಅವರ ಪಾರ್ಥಿವ ಶರೀರವನ್ನು ಮೈಸೂರಿಗೆ ರವಾನಿಸಿ ಅಂತ್ಯ ಸಂಸ್ಕಾರ ಮಾಡಲಾಯಿತು.

ನೋಯ್ಡಾ ಜೆ.ಎಸ್.ಎಸ್. ತಾಂತ್ರಿಕ ವಿದ್ಯಾಸಂಸ್ಥೆಯಲ್ಲಿ ಅವರ ಸ್ಮರಣಾರ್ಥ ಶೋಕ ಸಭೆಯನ್ನು ನಡೆಸಿ ಅವರ ಸಹೋದ್ಯೋಗಿಗಳು ಹಾಗು ಸಿಬ್ಬಂದಿಯವರು ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದ್ದಾರೆ. ಮೃತರ ಆತ್ಮಕ್ಕೆ ಮೋಕ್ಷ ಸಿಗಲಿ ಮತ್ತು ಕುಟುಂಬದವರಿಗೆ ಅವರ ಅಗಲಿಕೆಯ ದುಃಖವನ್ನು ಸಹಿಸುವ ಶಕ್ತಿ ನೀಡಲೆಂದು ದೇವರಲ್ಲಿ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ದೆಹಲಿ ಕರ್ನಾಟಕ ಸಂಘ ಪ್ರಾರ್ಥಿಸುತ್ತದೆ. ನಮ್ಮೆಲ್ಲರನ್ನು ಅಗಲಿದ ಶ್ರೀ ಉದಯ ಕುಮಾರ್ ಅವರಿಗೆ ಗೌರವಪೂರ್ಣ ನಮನಗಳು.



ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್ ವತಿಯಿಂದ ಇತ್ತೀಚೆಗೆ ಅಗಲಿದ ಹಿರಿಯ ಕನ್ನಡತಿ ಹಾಗೂ ಸ್ನೇಹಾ ಅಸೋಸಿಯೇಷನ್‌ನ ಸ್ಥಾಪಕರಲ್ಲೊಬ್ಬರಾದ ಶ್ರೀಮತಿ ಸುಮಿತ್ರಾ ರಾವ್ ಅವರಿಗೆ ದೆಹಲಿ ಕರ್ನಾಟಕ ಸಂಘದಲ್ಲಿ ಅಸೋಸಿಯೇಷನ್‌ನ ಪದಾಧಿಕಾರಿಗಳು ಮತ್ತು ಸದಸ್ಯರು ಸೇರಿ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿದರು.

ಉಪನ್ಯಾಸ


# ಸಮಾಜ ಉದ್ಧಾರ ಮಾಡಲು ನಾಟಕ ಪ್ರಧಾನ ಸಾಧನವೆಂದು ನಂಬಿದವರು ಬೇಂದ್ರೆ - ಡಾ. ಕೃಷ್ಣ ಕಟ್ಟಿ



"ಜೀವನ ಹಣ್ಣಾದರೆ ಮಾತ್ರ ನಾಟಕ ಆಗತದ" ಎನ್ನುವುದು ಬೇಂದ್ರೆ ಮಾತು. ಅವರ ಪ್ರಕಾರ ನಾಟಕ ಅಂದರೆ ಯಜ್ಞ, ಅದೊಂದು ಧಾರ್ಮಿಕ ಪ್ರಕ್ರಿಯೆ ಇದ್ದ ಹಾಗೆ. ಸಮಾಜ ಉದ್ಧಾರ ಮಾಡಲು ನಾಟಕ ಪ್ರಧಾನ ಸಾಧನವೆಂದು ನಂಬಿದವರು ಎಂದು ಸಾಹಿತಿ ಡಾ. ಕೃಷ್ಣ ಕಟ್ಟಿ ಅವರು ಹೇಳಿದರು.

ರವಿವಾರ 25.02.2024 ರಂದು ವರಕವಿ, ಶಬ್ದಗಾರುಡಿಗ, ಕನ್ನಡ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ದ. ರಾ. ಬೇಂದ್ರೆ ಅವರ 128ನೇ ಜನ್ಮದಿನಾಚರಣೆಯ ಅಂಗವಾಗಿ ದೆಹಲಿಯ 'ದಿನಕರ ಫೌಂಡೇಶನ್' ಆಯೋಜಿಸಿದ್ದ ನಿಸ್ತಂತು ಮಾಧ್ಯಮದಲ್ಲಿ ಮೂಡಿ ಬಂದ 'ಬೇಂದ್ರೆ ನಾಟಕಗಳು' ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದರು. ನಾಟಕ ಎಂದರೆ ಓದಲಿಕ್ಕೆ ಬರೆಯಲಿಕ್ಕೆ ಅಲ್ಲ, ನಾಟಕ ಅರ್ಥಪೂರ್ಣ ಪಡೆಯುವುದು ಅದು ಅಭಿನಯಿಸಲ್ಪಟ್ಟಾಗ ಮಾತ್ರ ಎಂಬುದು ಬೇಂದ್ರೆಯವರ ಮಾತು. ಅವರ ಮೊದಲ ನಾಟಕ 'ಗೋಲು' ಜೊತೆಗೆ ತಿರುಕರ ಪಿಡುಗು, ಜಾತ್ರೆ, ಸಾಯೋಆಟ, ದೆವ್ವದ ಮನೆ ಮುಂತಾದ ನಾಟಕಗಳ ವಸ್ತುವಿಷಯ ವಿವರಣೆಯೊಂದಿಗೆ ಸಮಕಾಲೀನತೆಯಲ್ಲಿ ಎಷ್ಟು ಪ್ರಸ್ತುತವೆಂಬುದನ್ನು ಅವರು ವಿವರಿಸಿದರು. ಬೇಂದ್ರೆಯವರ ಅಲಿಖಿತ ನಾಟಕಗಳ ಪಟ್ಟಿಯು ದೊಡ್ಡದಿದೆ. ಕಲ್ಯಾಣದ ಕಲ್ಯಾಣಿ, ತಲೆದಂಡ, ಪಂಜು, ಸತಿ ಮೊದಲಾದ ನಾಟಕಗಳಿಗೆ ಬೇಂದ್ರೆಯವರು ಹಾಡುಗಳನ್ನು ಬರೆದಿದ್ದಾರೆ. ಭರತನ ನಾಟ್ಯಶಾಸ್ತ್ರ ಬೇಂದ್ರೆ ಅವರ ಮೇಲೆ ಪ್ರಭಾವ ಬೀರಿದೆ. ನಾಟ್ಯ ಮೀಮಾಂಸೆಯಲ್ಲಿ ಬೇಂದ್ರೆ ಅವರಿಗೆ ಬಹಳಷ್ಟು ಆಸ್ಥೆ ಇತ್ತು. ಈ ನಾಟ್ಯ ಮೀಮಾಂಸೆಯಲ್ಲಿ ಅವರ ಕಾವ್ಯ ಪಕ್ಷಪಾತ ಎದ್ದು ಕಾಣುತ್ತದೆ. ಅವರ ದೃಷ್ಟಿಯಲ್ಲಿ ಕಾವ್ಯ ನಾಟಕಗಳ ಸಂಬಂಧ ಶ್ರುತಿ ಕೃತಿಗಳ ಸಂಬಂಧ ಎಂದು ಹೇಳಿದರು.

ಸಂಪನ್ಮೂಲ ವ್ಯಕ್ತಿಯಾಗಿದ್ದ ಡಾ.ಕೃಷ್ಣ ಕಟ್ಟಿ ಅವರು ಮೂಲತಃ ವಿಜಯಪುರದವರು. ಕನ್ನಡದ ಖ್ಯಾತ ವಿಮರ್ಶಕ ಪ್ರೊ. ಕೀರ್ತಿನಾಥ ಕುರ್ತಕೋಟಿ ಅವರ ಮಾರ್ಗದರ್ಶನದಲ್ಲಿ ಬೇಂದ್ರೆ ಮತ್ತು ಕನ್ನಡ ಭಾವಗೀತದ ಸ್ವರೂಪ ವಿಷಯದ ಕುರಿತಾಗಿ ಮಹಾಪ್ರಬಂಧವನ್ನು ಮಂಡಿಸಿದ್ದಾರೆ, ಕನ್ನಡ ವಿಶ್ವವಿದ್ಯಾಲಯದಲ್ಲಿ ಮಹಾಪ್ರಬಂಧವನ್ನು ಮಂಡಿಸಿದ ಮೊದಲಿಗರು, ಅವರು. ಬೇಂದ್ರೆ ಅವರು ಶಿಕ್ಷಕರಾಗಿದ್ದ ವಿಕ್ಟೋರಿಯ ಶಾಲೆಯಲ್ಲಿ ಡಾ. ಕೃಷ್ಣ ಕಟ್ಟಿ ಶಿಕ್ಷಕ ವೃತ್ತಿಯ ಸೇವೆಗೈದವರು. ನಾದದ ನವನೀತ, ಶ್ರಾವಣದ ಕವಿ ಬೇಂದ್ರೆ, ಕೃಷ್ಣ ಪಾರಿಜಾತ, ಚಂದ್ರ, ವಾತ್ಸಲ್ಯ, ನವಿಮಪ ನಾರಾಯಣನಿಗೆ ಇವರ ಪ್ರಕಟಿತ ಕೃತಿಗಳು.



ಕಾರ್ಯಕ್ರಮದ ಆರಂಭದಲ್ಲಿ ಪಂ. ಶ್ರೀಪಾದ ಹೆಗಡೆ ಕಂಪ್ಲಿಯವರ ಧ್ವನಿಮುದ್ರಿತ ಬೇಂದ್ರೆ ಅವರ ಭಾವಗೀತೆಯ ಗಾಯನವನ್ನು ಪ್ರಸ್ತುತಪಡಿಸಲಾಯಿತು. ಉತ್ತಮ ಸಂಖ್ಯೆಯಲ್ಲಿ ಸೇರಿದ್ದ ಪ್ರೇಕ್ಷಕರ ಸಂದರ್ಭೋಚಿತ ಪ್ರಶ್ನಾವಳಿಗಳು ಕಾರ್ಯಕ್ರಮವನ್ನು ಮತ್ತಷ್ಟು ಆಸಕ್ತಿದಾಯಕಗೊಳಿಸಿದವು. ಕನ್ನಡ ಶಿಕ್ಷಕ ಶ್ರೀ ಅರವಿಂದ ಬಿಜ್ಜೆ ಅವರು ಸಂಪನ್ಮೂಲ ವ್ಯಕ್ತಿಯವರನ್ನು ಪರಿಚಯಿಸಿದರು. ಕಾರ್ಯಕ್ರಮವನ್ನು ಸಂಯೋಜಿಸಿದ್ದ ನವದೆಹಲಿ ದಿನಕರ ಫೌಂಡೇಶನ್‌ನ ಸಂಚಾಲಕ ಹಾಗು ಹಿರಿಯ ರಂಗಕರ್ಮಿ ಶ್ರೀ ಶಿವಾನಂದ ಇಂಗಳೇಶ್ವರ ಅವರು ಎಲ್ಲರನ್ನು ಆತ್ಮೀಯವಾಗಿ ಸ್ವಾಗತಿಸಿದರು. ತಾಂತ್ರಿಕ ನಿರ್ವಹಣೆಯಲ್ಲಿ ಸಹಕರಿಸಿದ ಶ್ರೀ ಸಂತೋಷ ಉಪಾಧ್ಯಾಯ ಅವರು ವಂದನಾರ್ಪಣೆ ನಡೆಸಿಕೊಟ್ಟರು.

ವರದಿ : ***ದಿನಕರ ಫೌಂಡೇಶನ್***, ನವದೆಹಲಿ

ಕೃತಿ ಅವಲೋಕನ

# ಕೃತಿಕಾರನ ವೈವಿಧ್ಯಮಯ ಬರಹಗಳಿಗೆ ಕೈಗನ್ನಡಿ




ಹಿರಿಯ ಲೇಖಕ, ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಆತ್ಮೀಯ ಶ್ರೀ ಜಯಪ್ರಕಾಶ್ ಪುತ್ತೂರು ಅವರ ಹೊಸ ಕೃತಿ 'ದಶಕಗಳ ಸಾಹಿತ್ಯದ ಮೊಗಸಾಲೆಯಲ್ಲಿ...' ಒಂದು ವಿಶಿಷ್ಟ ಕೃತಿ. ಒಂದು ದಶಕದ ಅವಧಿಯಲ್ಲಿ ಅವರು ಬರೆದ ವಿಭಿನ್ನ ವಿಷಯಗಳ ಕುರಿತ ಲೇಖನಗಳನ್ನು ಇಲ್ಲಿ ಸಂಕಲಿಸಿ ನೀಡಿದ್ದಾರೆ. ಈ ಮೂಲಕ ಈ ಕೃತಿ ಅವರ ವೈವಿಧ್ಯಮಯ ಬರಹಗಳಿಗೆ ಕೈಗನ್ನಡಿಯಾಗಿದೆ.

ಕೃತಿಯನ್ನು ಒಟ್ಟು ಆರು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲ ಭಾಗದಲ್ಲಿ ಬರುವ ವ್ಯಕ್ತಿ ಸಂದರ್ಶನಗಳು ಮೇರು ಸಾಹಿತಿ ಡಾ. ಕಾರಂತರಿಂದ ತೊಡಗಿ ವೀರ ಯೋಧ ಬಿಪಿನ್ ರಾವತ್‌ರವರೆಗೆ ಅವರ ಸಂಪರ್ಕಕ್ಕೆ ಬಂದ ಶ್ರೇಷ್ಠ ವ್ಯಕ್ತಿಗಳ ಬದುಕು ಮತ್ತು ಸಾಧನೆಗಳನ್ನು ಆಪ್ತವಾಗಿ ಪರಿಚಯಿಸುತ್ತದೆ. ಮುಂದಿನ ಭಾಗದಲ್ಲಿ ಬರುವ ಸಂಸ್ಕೃತಿ-ಕಲೆಗಳ ಕುರಿತ ಲೇಖನಗಳು ನಮ್ಮ ದೇಶದ ಸಾಂಸ್ಕೃತಿಕ ಶಕ್ತಿಯ ಅರಿವು ಮೂಡಿಸುತ್ತದೆ. ಇಲ್ಲಿ ದಕ್ಷಿಣ ಕಾಶಿ ರಾಮೇಶ್ವರ ಮಾತ್ರವಲ್ಲದೆ ಸ್ಥಳೀಯ ವಿಟ್ಲಪಿಂಡಿಯ ಸಂಭ್ರಮದ ಚಿತ್ರಣವೂ ಇದೆ.

ದೇಶದ ರಕ್ಷಣಾ ಇಲಾಖೆಯಲ್ಲಿ ಸಂಪರ್ಕಾಧಿಕಾರಿಯಾಗಿ ಲೇಖಕರು ಗಮನಾರ್ಹ ಸೇವೆ ಸಲ್ಲಿಸಿದ್ದಾರೆ. ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರ ಶಿಷ್ಟಾಚಾರ ಅಧಿಕಾರಿಯಾಗಿಯೂ ಅವರು ಪಡೆದಿರುವ ಅನುಭವ ಇಲ್ಲಿನ ಬರಹಗಳಲ್ಲಿ ವ್ಯಕ್ತವಾಗಿದೆ. ಅವರ ಯುದ್ಧ, ವಿಮಾನ ಮತ್ತು ವೈಮಾನಿಕ ವಿಚಾರಗಳು ನಿಜಕ್ಕೂ ಆಸಕ್ತಿದಾಯಕ.

ವಿಶೇಷವೆಂದರೆ ಲೇಖಕರ ಕೃತಿಗಳ ಕುರಿತು ಬಂದಿರುವ ವಿಮರ್ಶೆಗಳೂ ಇಲ್ಲಿವೆ. ಅಲ್ಲದೆ ಲೇಖಕರ ವ್ಯಕ್ತಿತ್ವವನ್ನು ಇತರರು ಕಂಡಂತೆ ಬರೆದ ಲೇಖನಗಳು ಅಪೂರ್ವವಾಗಿದೆ. ಆಪ್ತ ವಲಯದಲ್ಲಿ ಜೆ.ಪಿ. ಎಂದೇ ಕರೆಸಿಕೊಳ್ಳುವ ಇವರ ನಾಲ್ಕು ಕೃತಿಗಳು ಹಲವು ಬಾರಿ ಮರು ಮುದ್ರಣಗೊಂಡಿರುವುದು ಉಲ್ಲೇಖನೀಯ.

ಕಲಾಂ ಅವರ ಬದುಕು, ವಿಚಾರಗಳ ಬಗೆಗೆ ಬೇರೆ ಬೇರೆ ಮಾಧ್ಯಮಗಳ ಮೂಲಕ ಅರಿವು ಮೂಡಿಸುತ್ತಿರುವ ಶ್ರೀ ಜಯಪ್ರಕಾಶ್ ಪುತ್ತೂರು ಅವರು ವಿವಿಧ ಪತ್ರಿಕೆಗಳಲ್ಲಿ ಬರೆಯುತ್ತಾ ಬಂದಿದ್ದಾರೆ. ಅವರ ಸಮಗ್ರ ಸಾಹಿತ್ಯದ ದರ್ಶನವನ್ನು ಈ ಪುಸ್ತಕದ ಮೂಲಕ ನಾವು ನೋಡಬಹುದು. ಅವರಿಗೆ ನನ್ನ ಅಭಿನಂದನೆಗಳು, ಶುಭಾಶಯಗಳು.




**ದಶಕಗಳ ಸಾಹಿತ್ಯದ ಮೊಗಸಾಲೆಯಲ್ಲಿ...**
**ಪ್ರಥಮ ಮುದ್ರಣ-2023**
**ಬೆಲೆ ರೂ. 200/-**
**ಪ್ರಕಾಶಕರು : ಸಪ್ನ ಬುಕ್ ಹೌಸ್, ಬೆಂಗಳೂರು**

***ಡಾ. ಅವನೀಂದ್ರನಾಥ್ ರಾವ್***
ಮಾಜಿ ಉಪಾಧ್ಯಕ್ಷರು,
ದೆಹಲಿ ಕರ್ನಾಟಕ ಸಂಘ,
ಉಪಾಧ್ಯಕ್ಷರು, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ
ನವದೆಹಲಿ

# ಎನ್.ಎಸ್.ಡಿ. ವತಿಯಿಂದ ಆಯೋಜನೆಗೊಂಡ ಭಾರತ್ ರಂಗ ಮಹೋತ್ಸವದಲ್ಲಿ 'ಚಾವುಂಡರಾಯ' ನಾಟಕದ ಅಮೋಘ ಪ್ರದರ್ಶನ





ಬೆಂಗಳೂರಿನ ಸಮಾಜಮುಖಿ ರಂಗ ಬಳಗ ತಂಡದವರಿಂದ ದಿನಾಂಕ 19.02.2024ರಂದು ನವದೆಹಲಿಯ ಎನ್.ಎಸ್.ಡಿ.ಯ 'ಅಭಿಮಂಚ್' ಸಭಾಂಗಣದಲ್ಲಿ 2024ರ ಭಾರತ್ ರಂಗ ಮಹೋತ್ಸವ ಅಂಗವಾಗಿ ಐತಿಹಾಸಿಕ ಕನ್ನಡ ನಾಟಕ 'ಚಾವುಂಡರಾಯ' ಪ್ರದರ್ಶನಗೊಂಡು ದೆಹಲಿಯ ರಂಗಾಸಕ್ತ ಕನ್ನಡಿಗರ ಮೆಚ್ಚುಗೆಗೆ ಪಾತ್ರವಾಯಿತು.

ಕರ್ನಾಟಕ ಮಾರಿಟೈಮ್ ಮಂಡಳಿ (Maritime Board) ಯ ಕಾರ್ಯನಿರ್ವಾಹಕ ಅಧಿಕಾರಿ (CEO) ಆಗಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಜಯರಾಮ್ ರಾಯ್‌ಪುರ ಐಆರ್‌ಎಸ್ ಅವರು ಈ ನಾಟಕದ ರಚನಕಾರರು. ಕ್ರಿ.ಶ. 350 ರಿಂದ 1004ರವರೆಗೆ ದಕ್ಷಿಣ ಕರ್ನಾಟಕದಲ್ಲಿ ಅಸ್ಥಿತ್ವದಲ್ಲಿದ್ದ ಗಂಗ ಸಾಮ್ರಾಜ್ಯದಲ್ಲಿ ಮಂತ್ರಿಯೂ, ಸೇನಾಧಿಕಾರಿಯೂ ಆಗಿದ್ದ ಹಾಗೂ ಶ್ರವಣಬೆಳಗೊಳದಲ್ಲಿ ಗಿರಿಯ ಮೇಲೆ ಕಲ್ಲಿನಲ್ಲಿ ಕೆತ್ತಿದ ವಿಶ್ವಪ್ರಸಿದ್ಧ ಬಾಹುಬಲಿ ಮೂರ್ತಿಯನ್ನು ಸ್ಥಾಪನೆ ಮಾಡಿದ ಕೀರ್ತಿಯ ಚಾವುಂಡರಾಯನ ಜೀವನದ ಕಾಲವನ್ನು ಹಾಗೂ ಗಂಗ ಸಾಮ್ರಾಜ್ಯದ ಅಂತ್ಯವಾದದನ್ನೂ ಈ ನಾಟಕದಲ್ಲಿ ಬಿಂಬಿಸಲಾಗಿದೆ.

ನಾಟಕದ ನಿರ್ದೇಶನವನ್ನು ಮೈಸೂರು ರಂಗಾಯಣದ ಭಾಗವಾಗಿದ್ದ ಅಸಾಧಾರಣ ರಂಗಕರ್ಮಿ, ಆಧುನಿಕ ವೃತ್ತಿಪರ ರಂಗಭೂಮಿ ಕಲಾವಿದ ಶ್ರೀ ಹುಲುಗಪ್ಪ ಕಟ್ಟಿಮನಿ ಅವರು ಮಾಡಿದ್ದರು.

'ಚಾವುಂಡರಾಯ' ನಾಟಕವನ್ನು ರಚಿಸಿದ ಐಆರ್‌ಎಸ್ ಅಧಿಕಾರಿ ಶ್ರೀ ಜಯರಾಮ್ ರಾಯ್‌ಪುರ ಅವರು ತಮ್ಮ ಕಾಲೇಜಿನ ದಿನಗಳಲ್ಲಿ ರಂಗಭೂಮಿಯ ಕುರಿತು ಅಭಿರುಚಿ ಹೊಂದಿದ್ದರು. ಆ ಸಮಯದಲ್ಲೇ 'ಹತ್ತು ಪತ್ರಗಳು' ಹಾಗು 'ನನ್ನ ಕನಸಿನ ಗರಿ' ಎಂಬ ನಾಟಕಗಳನ್ನು ಬರೆದಿದ್ದರು. ಬೆಂಗಳೂರು ನಿರ್ಮಾತೃ ಕೆಂಪೇಗೌಡ ಜೀವನಾಧಾರಿತ ನಾಟಕ 'ಸಿರಿಗೆರೆ ಸಿರಿ' ಹಲವಾರು ಪ್ರಶಸ್ತಿಗಳನ್ನು ಪಡೆದಿದೆ. ಇವರ ಮೊಗಲ್ ದೊರೆ ಶಹಜಹಾನ್ ಜೀವನ ಕುರಿತ 'ವಾರಸುದಾರ' ನಾಟಕವು ಹಿರಿಯ ರಂಗಕರ್ಮಿ ಶ್ರೀ ಎಂ.ಎಸ್. ಸತ್ಯು ಅವರ ನಿರ್ದೇಶನದಲ್ಲಿ ಪ್ರದರ್ಶನಗೊಂಡಿದೆ. ಇತ್ತೀಚಿನ ಅವರ 'ಚಾವುಂಡರಾಯ' ನಾಟಕ ರಾಜ್ಯದ ಮತ್ತು ದೇಶದ ರಂಗಪ್ರಿಯರ ಅಪಾರ ಮೆಚ್ಚುಗೆ ಗಳಿಸಿದೆ.

ನಾಟಕದ ನಿರ್ದೇಶಕರಾದ ಶ್ರೀ ಹುಲುಗಪ್ಪ ಕಟ್ಟಿಮನಿ ಅವರು ತಾವು ಮೈಸೂರಿನ ರಂಗಾಯಣದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸಮಯ, ತಮ್ಮ ಬಿಡುವಿನ ವೇಳೆಯಲ್ಲಿ ನಾಟಕ ನಿರ್ದೇಶನ ಮಾಡಲು ಆಸಕ್ತಿ ಬೆಳೆಸಿಕೊಂಡಿದ್ದರು. ಶ್ರೀಯುತರು ಕಳೆದ 25 ವರ್ಷಗಳಲ್ಲಿ ಕರ್ನಾಟಕ ಕಾರಾಗೃಹಗಳಲ್ಲಿ ಕೈದಿಗಳ ಜೊತೆ ಕೆಲಸ ಮಾಡಿ ಅವರನ್ನು ರಂಗ ಚಟುವಟಿಕೆಗಳಲ್ಲಿ ಪರಿಣಿತಗೊಳಿಸಿ ಅವರ ಜೀವನದಲ್ಲಿ ಗಮನಾರ್ಹ ಬದಲಾವಣೆ ತಂದಿರುವುದು ಉಲ್ಲೇಖನೀಯ. ನಿವೃತ್ತ ಜೀವನದಲ್ಲಿ ತಮ್ಮನ್ನು ರಂಗಭೂಮಿಯಲ್ಲಿ ತೊಡಗಿಸಿಕೊಂಡ ಇವರು ನಿರ್ದೇಶಿಸಿದ ಅನೇಕ ನಾಟಕಗಳು ಕರ್ನಾಟಕ ರಾಜ್ಯಾದ್ಯಂತ ಯಶಸ್ವಿ ಪ್ರದರ್ಶನ ಕಂಡಿವೆ. ಸಮಾಜಮುಖಿ ರಂಗ ತಂಡದೊಂದಿಗೆ ರಂಗಭೂಮಿ ಆಸಕ್ತರಿಗೆ ಈ ಹಿಂದೆ ರಸಾಭಿಜ್ಞಾನವೆಂಬ ಕಾರ್ಯಾಗಾರವನ್ನು ಸಹಾ ಇವರು ಆಯೋಜಿಸಿದ್ದರು.

'ಚಾವುಂಡರಾಯ' ನಾಟಕದ ಕಥಾವಸ್ತು ಗಂಗ ಸಾಮ್ರಾಜ್ಯದ ಮಹಾರಾಜ ಮಾರಸಿಂಹನ ಅತ್ಯಂತ ವಿಶ್ವಾಸದಾಯಕ ಮಂತ್ರಿ ಹಾಗು ಸೇನಾಧಿಕಾರಿಯಾಗಿದ್ದ ಚಾವುಂಡರಾಯನ ಜೀವನದ ಹಾಗು ಗಂಗವಾಡಿ 96000 ಸಾಮ್ರಾಜ್ಯದ ಮನಕಲಕುವ ಪತನದ ಕುರಿತಾಗಿದೆ.

ತನ್ನ ಜೀವನ ಪರ್ಯಂತ ಅಧಿಕಾರಕ್ಕಿಂತ, ಆದರ್ಶಗಳು ಮತ್ತು ತತ್ವಗಳಿಗೆ ಪ್ರಾಮುಖ್ಯತೆ ನೀಡಿದ ಚಾವುಂಡರಾಯನಿಗೆ ಬಾಹುಬಲಿಯ ಜೀವನ ಹೆಚ್ಚಿನ ಸಾಧನೆ ಮಾಡಲು ಪ್ರೇರಣೆ ನೀಡಿತ್ತು. ಅದೇ ಬಾಹುಬಲಿಯ ಮೂರ್ತಿಯನ್ನು ಶ್ರವಣಬೆಳಗೊಳದ ಬೆಟ್ಟದ ಮೇಲೆ ಕಲ್ಲಿನಲ್ಲಿ ಕೆತ್ತಿಸಿ ಪ್ರತಿಷ್ಠಾಪಿಸಲು ಉತ್ತೇಜನ ನೀಡಿತ್ತು. ನಾಟಕದಲ್ಲಿ ಗಂಗರ ಕಾಲದಲ್ಲಿ ಜೈನ ಧರ್ಮದ ಅಹಿಂಸಾವಾದ ಆದರ್ಶದ ಹಿನ್ನೆಲೆಯಲ್ಲಿ ನಡೆದ ರಾಜಕೀಯ ಹಾಗೂ ಪ್ರೇರಿತ ಐತಿಹಾಸಿಕ ಯುದ್ಧದ ಅವಶ್ಯಕತೆಯ ಸಂಕೀರ್ಣತೆಯನ್ನು ಬಹಳ ರೋಚಕವಾಗಿ ಬಿಂಬಿಸಲಾಗಿದೆ. ಚಾವುಂಡರಾಯ ಯುದ್ಧ ನಡೆಸುವ ಬಗ್ಗೆ ರಾಜನ ಜೊತೆ ಭಿನ್ನಾಭಿಪ್ರಾಯ ಹೊಂದಿ, ರಾಜರ ಇಚ್ಛೆಗೆ ವಿರುದ್ಧವಾಗಿ ಅಧಿಕಾರ ತೊರೆದು ಹೋಗುತ್ತಾನೆ. ತದನಂತರದಲ್ಲಿ ಗೋಮಟೇಶ್ವರ ಮೂರ್ತಿಯನ್ನು ಶ್ರವಣಬೆಳಗೊಳದಲ್ಲಿ ಪ್ರತಿಷ್ಠಾಪಿಸುತ್ತಾನೆ.

ಸುಮಾರು 20 ರಂಗ ಕಲಾವಿದರು, ತಂತ್ರಜ್ಞರು, ಸಿಬ್ಬಂದಿಗಳು, ನಿರ್ವಾಪಕರು, ನಿರ್ದೇಶಕರನ್ನೊಳಗೊಂಡ ಸಮಾಜಮುಖಿ ರಂಗ ಬಳಗ ಪ್ರಸ್ತುತಪಡಿಸಿದ 'ಚಾವುಂಡರಾಯ' ನಾಟಕ ಸಭಾಂಗಣದಲ್ಲಿ ಉಪಸ್ಥಿತರಿದ್ದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು ಮತ್ತು ದೆಹಲಿ ಕನ್ನಡಿಗರು ಹಾಗೂ ಕನ್ನಡೇತರರಿಗೆ ರಂಗಭೂಮಿಯ ರಸದೌತಣ ನೀಡಿತ್ತು. ನಾಟಕದ ಕೊನೆಯಲ್ಲಿ ಶ್ರವಣಬೆಳಗೊಳದ ಬೆಟ್ಟ ಹಾಗೂ ಬಾಹುಬಲಿಯ ನೈಜ ಪ್ರಸ್ತುತಿಯ ದೃಶ್ಯ ಎಲ್ಲರನ್ನು ಮಂತ್ರಮುಗ್ಧರನ್ನಾಗಿಸಿತು.

ನಂತರ ನಡೆದ ಸಂವಾದ ಕಾರ್ಯಕ್ರಮವನ್ನು ಎನ್.ಎಸ್.ಡಿ.ಯ ಕಲಾ ನಿರ್ದೇಶಕಿ ಶ್ರೀಮತಿ ಮಿತಾ ಮಿಶ್ರ ನಿರ್ವಹಿಸಿಕೊಟ್ಟರು. ಸಂವಾದದಲ್ಲಿ ಪ್ರೇಕ್ಷಕರ ಪ್ರಶ್ನೆಗಳಿಗೆ ನಾಟಕ ರಚನೆಕಾರರಾದ ಶ್ರೀ ಜಯರಾಮ್ ರಾಯ್‌ಪುರ ಹಾಗೂ ನಿರ್ದೇಶಕ ಶ್ರೀ ಹುಲುಗಪ್ಪ ಕಟ್ಟಿಮನಿ ಅವರು ಉತ್ತರ ನೀಡಿದರು. ಶ್ರೀ ಜಯರಾಮ್ ರಾಯಪುರ ಅವರು ನಾಟಕದ ಕಥಾವಸ್ತು ಹಾಗೂ ತಮಗೆ ನಾಟಕ ರಚಿಸಲು ಆದ ಪ್ರೇರಣೆ ಬಗ್ಗೆ ವಿವರಿಸಿದರು. ನಾಟಕ ನಿರ್ದೇಶಕರು ತಮ್ಮ ವೃತ್ತಿ ಜೀವನದ ಹಾಗು ರಂಗಭೂಮಿಯ ಪಯಣದ ಬಗ್ಗೆ ವಿವರ ನೀಡಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ, ಜೆ.ಎನ್.ಯು. ಪ್ರಾಧ್ಯಾಪಕರು ಹಾಗು ಸಂಘದ ಮಾಜಿ ಅಧ್ಯಕ್ಷರಾದ ಡಾ. ವೆಂಕಟಾಚಲ ಜಿ. ಹೆಗಡೆಯವರೂ ಸೇರಿದಂತೆ ಸಂಘದ ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು ಹಾಗು ಸದಸ್ಯರು ನಾಟಕ ವೀಕ್ಷಣೆ ಮಾಡಿ ಸಂತಸಪಟ್ಟರು. ಶ್ರೀ ಸಿ.ಎಂ. ನಾಗರಾಜ ಹಾಗು ಡಾ. ವೆಂಕಟಾಚಲ ಹೆಗಡೆಯವರು ನಾಟಕ ರಚನೆಕಾರರಾದ ಶ್ರೀ ಜಯರಾಮ್ ರಾಯ್‌ಪುರ ಅವರಿಗೆ ಶಾಲುಹೊದಿಸಿ ಪುಷ್ಪಗುಚ್ಛ ನೀಡಿ ಸಂಘದ ಪರವಾಗಿ ಗೌರವ ಸಮರ್ಪಣೆ ಮಾಡಿದರು.

ಎನ್.ಎಸ್.ಡಿ.ಯ ಶ್ರೀಮತಿ ಮಿತಾ ಮಿಶ್ರ, ನಿರ್ದೇಶಕ ಹುಲುಗಪ್ಪ ಕಟ್ಟಿಮನಿ ಹಾಗು ಅಮೋಘ ನಾಟಕ ಪ್ರದರ್ಶನ ನೀಡಿದ ಸಮಾಜಮುಖಿ ರಂಗ ಬಳಗದ ಎಲ್ಲಾ ಕಲಾವಿದರಿಗೆ ಮತ್ತು ತಾಂತ್ರಿಕ ವರ್ಗದವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು.



***ಅಭಿಮತ ವರದಿ***

# ನವದೆಹಲಿಯ ಜೆ.ಎನ್‌.ಯು. ನಲ್ಲಿ ಶ್ರೀ ವಿದ್ಯಾರಣ್ಯ ಮಹಾಸ್ವಾಮಿಗಳ ಮೂರ್ತಿ ಪ್ರತಿಷ್ಠಾಪನೆ





ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠದ 12ನೇ ಪೀಠಾಧೀಶ್ವರರಾದ ವಿಜಯನಗರ ಸಾಮ್ರಾಜ್ಯ ಸ್ಥಾಪಕ, ಸಕಲಶಾಸ್ತ್ರ ಕೋವಿದರು, ಅಪರೋಕ್ಷ ಜ್ಞಾನಿ ಶ್ರೇಷ್ಠರಾದ ಜಗದ್ಗುರು ಶ್ರೀ ಶ್ರೀ ವಿದ್ಯಾರಣ್ಯ ಮಹಾಸ್ವಾಮಿಗಳವರ ಮೂರ್ತಿಯು ದಿನಾಂಕ 29.02.2024ರಂದು ದೇಶದ ಪ್ರತಿಷ್ಠಿತ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ವಿದ್ಯಾರಣ್ಯ ಇನ್ಸ್ಟಿಟ್ಯೂಟ್ ಆಫ್ ನಾಲೆಡ್ಜ್ ಅಂಡ್ ಅಡ್ವಾನ್ಸ್ಡ್ ಸ್ಟಡೀಸ್–ವಿಕಾಸ್ ಸೆಂಟರ್‌ನಲ್ಲಿ ಪ್ರತಿಷ್ಠಾಪನೆಗೊಂಡಿದೆ. ಭಾರತೀಯ ಜ್ಞಾನ ಪರಂಪರೆಯುಳ್ಳ ಸನಾತನ, ಧಾರ್ಮಿಕ ಆಧಾರಿತ ಶಿಕ್ಷಣ ಮತ್ತು ಸಂಶೋಧನೆ ನಡೆಸುವ ನಿಟ್ಟಿನಲ್ಲಿ ಈ ಸಂಸ್ಥೆಗೆ ವಿದ್ಯಾರಣ್ಯರ ಹೆಸರಿಡಲಾಗಿದೆ. ಈ ಹಿನ್ನಲೆಯಲ್ಲಿ ಶೃಂಗೇರಿ ಶ್ರೀ ಶಾರದಾ ಪೀಠದ ನೆರವಿನೊಂದಿಗೆ ಮೂರ್ತಿ ಪ್ರತಿಷ್ಠಾಪನೆಗೊಂಡಿದೆ.

ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠದ ಸಹಯೋಗದೊಂದಿಗೆ ಮುಂದಿನ ದಿನಗಳಲ್ಲಿ ವಿದ್ಯಾರಣ್ಯರ ಜ್ಞಾನ ಪರಂಪರೆಯ ಸಮಗ್ರ ಜ್ಞಾನ, ವಿಜ್ಞಾನ ಮತ್ತು ಆಧ್ಯಾತ್ಮಿಕತೆಯಿಂದ ಕೂಡಿರುವ ಭಾರತೀಯ ಕೇಂದ್ರಿತ ಶಿಕ್ಷಣ ಮತ್ತು ಅವರ ಕೊಡುಗೆಯ ಕುರಿತು ಹೆಚ್ಚಿನ ಅಧ್ಯಯನ ಮತ್ತು ಸಂಶೋಧನೆಯ ನಿಟ್ಟಿನಲ್ಲಿ ಪೀಠ ಸ್ಥಾಪಿಸುವ ಒಡಂಬಡಿಕೆ ಮಾಡಿಕೊಳ್ಳಲಾಗುವುದೆಂದು ಮೂರ್ತಿ ಉದ್ಘಾಟಿಸಿ ಮಾತನಾಡಿದ ಶೃಂಗೇರಿ ಶ್ರೀ ಶಾರದಾ ಪೀಠದ ಚೀಫ್ ಅಡ್ವೈಸರ್ ಪದ್ಮಶ್ರೀ ಡಾ. ವಿ.ಆರ್. ಗೌರಿಶಂಕರ್ ಅವರು ಉಲ್ಲೇಖಿಸಿದರು. ಕಾರ್ಯಕ್ರಮದಲ್ಲಿ ಜೆಎನ್‌ಯುನ ವೈಸ್ ಚಾನ್ಸಲರ್ ಡಾ. ಶಾಂತಿಶ್ರೀ ಧುಳಿಪುಡಿ ಪಂಡಿತ್, ಸಂಸ್ಥೆಯ ಡೈರೆಕ್ಟರ್ ಪ್ರೊಫೆಸರ್ ಅಮಿತ್ ಶರ್ಮ ಹಾಗು ಇಂಜಿನಿಯರಿಂಗ್ ವಿಭಾಗದ ಅಸೋಸಿಯೇಟ್ ಪ್ರೊಫೆಸರ್ ಡಾ. ಸಂಗಮೇಶ್ ಅವರು ಉಪಸ್ಥಿತರಿದ್ದರು.

# ದೆಹಲಿಯ ವಿಶ್ವ ಪುಸ್ತಕ ಮೇಳದಲ್ಲಿ ಕರ್ನಾಟಕದ ಬಹುಭಾಷಿಕತೆ ಕುರಿತ ಕಾರ್ಯಕ್ರಮ



ನ್ಯಾಶನಲ್ ಬುಕ್ ಟ್ರಸ್ಟ್, ಕಳೆದ ಫೆಬ್ರವರಿ 10ರಿಂದ 18ರವರೆಗೆ ನವದೆಹಲಿಯ ಪ್ರಗತಿ ಮೈದಾನದಲ್ಲಿ ಸಂಘಟಿಸಿದ್ದ ವಿಶ್ವ ಪುಸ್ತಕ ಮೇಳದಲ್ಲಿ ಈ ವರ್ಷ 'ಬಹುಭಾಷಿಕ ಭಾರತ'ದ ಬಗ್ಗೆ ವಿಶೇಷ ಚರ್ಚೆಗಳನ್ನು ಆಯೋಜಿಸಲಾಗಿತ್ತು. ಇದರ ಅಂಗವಾಗಿ ದಿನಾಂಕ 16.02.2024 ರಂದು ಸಾಯಂಕಾಲ ಏಳು ಗಂಟೆಗೆ 'ಕನ್ನಡ ಮತ್ತು ಕರ್ನಾಟಕದ ಬಹುಭಾಷಿಕ ಪರಂಪರೆ' ಎಂಬ ವಿಷಯ ಕುರಿತು ಎರಡು ವಿಶೇಷ ಉಪನ್ಯಾಸಗಳನ್ನು ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಮೊದಲ ಉಪನ್ಯಾಸ ನೀಡಿದ ಕರ್ನಾಟಕದ ಕೇಂದ್ರೀಯ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾಗಿರುವ ಡಾ. ಬಸವರಾಜ ಕೋಡಗುಂಟಿ ಅವರು ಕರ್ನಾಟಕದಲ್ಲಿ ಸುಮಾರು 300 ಕ್ಕೂ ಹೆಚ್ಚು ತಾಯ್ನುಡಿಗಳಿರುವುದನ್ನು ಗುರುತಿಸಿ, ಅದರ ಭೌಗೋಳಿಕ ವಿತರಣೆಯ ನಕ್ಷೆ ನೀಡಿ–'ಈ ಎಲ್ಲಾ ಭಾಷೆಗಳ ರಕ್ಷಣೆ ಮತ್ತು ಸಬಲೀಕರಣ ಅಗತ್ಯ' ಎಂದು ಹೇಳಿದರು. ಎರಡನೇ ಉಪನ್ಯಾಸ ನೀಡಿದ ಮೈಸೂರಿನ ಲೇಖಕಿ, ಅನುವಾದಕಿ ಡಾ. ಸುಕನ್ಯಾ ಕನಾರಳ್ಳಿ ಅವರು ತಾನು ಹುಟ್ಟಿ ಬೆಳೆದ ಬಹುಭಾಷಾ ಪರಿಸರದ ವಿವರಣೆ ನೀಡುತ್ತಾ, ಸೃಜನಶೀಲ ಪ್ರಕ್ರಿಯೆಯು ಭಾಷಾ ವೈವಿಧ್ಯಗಳನ್ನು ಒಳಗೊಳ್ಳುವ ಕುರಿತು ಹಾಗೂ ಅವು ಸಾಮಾಜಿಕವಾಗಿ ಬಹುಜನರನ್ನು ಒಳಗೊಳ್ಳುವ ಕುರಿತು ಮನೋಜ್ಞವಾಗಿ ಮಾತಾಡಿದರು. ಪ್ರಸ್ತುತ ಉಪನ್ಯಾಸ ಕಾರ್ಯಕ್ರಮದ ನಿರ್ವಾಹಕರಾಗಿದ್ದ ಜಾನಪದ ವಿದ್ವಾಂಸರೂ ಹಾಗೂ ನಿವೃತ್ತ ಪ್ರಾಧ್ಯಾಪಕರಾದ ಡಾ. ಪುರುಷೋತ್ತಮ ಬಿಳಿಮಲೆ ಅವರು ಭಾರತದ ಅನೇಕ ಭಾಷೆಗಳು ಪತನಮುಖಿಯಾಗಿರುವುದನ್ನು ಉದಾಹರಣೆಗಳೊಂದಿಗೆ ವಿವರಿಸಿ–'ಈ ಎಲ್ಲಾ ಭಾಷೆಗಳು ಉಳಿದು ಬೆಳೆಯಬೇಕಾದರೆ ಭಾರತಕ್ಕೊಂದು ಸಮರ್ಥ ಭಾಷಾ ನೀತಿಯ ಅಗತ್ಯ ಇದೆ' ಎಂದು ಪ್ರತಿಪಾದಿಸಿದರು.

ಕೇಂದ್ರ ಸರ್ಕಾರದ ಶಿಕ್ಷಣ ಇಲಾಖೆಯಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎನ್.ಬಿ.ಟಿ. ಯು ಸುಮಾರು 60 ಭಾರತೀಯ ಭಾಷೆಗಳಲ್ಲಿ ಪುಸ್ತಕಗಳನ್ನು ಪ್ರಕಟಿಸುವ ಗುರುತರ ಕಾರ್ಯ ಮಾಡುತ್ತಿದ್ದು, ದೇಶದ ವಿವಿಧ ಭಾಷೆಗಳ ಸಾಹಿತ್ಯವನ್ನು ಅನುವಾದಿಸುವ ಮೂಲಕ ಬಹುಭಾಷಿಕ ಪರಂಪರೆಯನ್ನು ಗಟ್ಟಿಗೊಳಿಸಲು ಅವಿರತವಾಗಿ ಶ್ರಮಿಸುತ್ತಿದೆ. ಈ ನಿಟ್ಟಿನಲ್ಲಿ ಪ್ರತಿವರ್ಷ ನವದೆಹಲಿಯ ಪ್ರಗತಿ ಮೈದಾನದಲ್ಲಿ ಪುಸ್ತಕ ಮೇಳ ಆಯೋಜಿಸುವ ಜೊತೆಗೆ ವಿವಿಧ ಭಾಷೆಗಳ ಪುಸ್ತಕಗಳ ಕುರಿತು ಚರ್ಚೆ, ಪ್ರಮುಖ ವಿಷಯಗಳ ಕುರಿತ ಉಪನ್ಯಾಸ ಇತ್ಯಾದಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಈ ಆಯೋಜನೆಯಲ್ಲಿ ಸಂಸ್ಥೆಯ ನಿರ್ದೇಶಕ ಶ್ರೀ ಯುವರಾಜ್ ಮಲಿಕ್, ಪ್ರಧಾನ ಸಂಪಾದಕರು ಮತ್ತು ಜಂಟಿ ನಿರ್ದೇಶಕಿ ಶ್ರೀಮತಿ ನೀರಾ ಜೈನ್, ಆಂಗ್ಲ ಸಂಪಾದಕರು ಶ್ರೀ ಕುಮಾರ್ ವಿಕ್ರಂ ಹಾಗೂ ಕನ್ನಡ ಸಹಾಯಕ ಸಂಪಾದಕಿ ಶ್ರೀಮತಿ ಹೇಮಶ್ರೀ ಎಸ್. ಪ್ರಮುಖ ಪಾತ್ರ ವಹಿಸುತ್ತಿದ್ದಾರೆ.

ವಿಶ್ವ ಪುಸ್ತಕ ಮೇಳದ ಈ ಕರ್ನಾಟಕ ಕುರಿತ ಕಾರ್ಯಕ್ರಮದಲ್ಲಿ ಉತ್ತಮ ಸಂಖ್ಯೆಯಲ್ಲಿ ಭಾಗವಹಿಸಿದ್ದ ದೆಹಲಿ ಕನ್ನಡಿಗರ ಜೊತೆ ಬೇರೆ ಬೇರೆ ಭಾಷೆಯ ಆಸಕ್ತರೂ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ವರದಿ : ***ಶ್ರೀಮತಿ ಹೇಮಶ್ರೀ***
ನ್ಯಾಶನಲ್ ಬುಕ್ ಟ್ರಸ್ಟ್, ನವದೆಹಲಿ

# ದೆಹಲಿ ಕನ್ನಡತಿ ಶುಷ್ಮಾ ಬಿ. ರಾವ್ ಅವರಿಗೆ 2024ರ 'ವರ್ಷದ ವಿಮೆನ್ ಎಕ್ಸಲೆನ್ಸಿ' ಪ್ರಶಸ್ತಿ ಪುರಸ್ಕಾರ



ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್‌ನ ಸದಸ್ಯೆಯಾಗಿರುವ ಶುಷ್ಮಾ ಬಿ. ರಾವ್ ಅವರಿಗೆ Women Excellence of the Year-2024 ಪ್ರಶಸ್ತಿ ಲಭಿಸಿದೆ. ಇತ್ತೀಚೆಗೆ ನವದೆಹಲಿಯಲ್ಲಿ ನಡೆದ Global Influencers and Leadership Award 2024 ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಇವರು ಈ ಪುರಸ್ಕಾರ ಸ್ವೀಕರಿಸಿದ್ದಾರೆ.

ಮೂಲತಃ ಬೆಂಗಳೂರಿನವರಾದ ಶುಷ್ಮಾ ಬಿ. ರಾವ್ ಅವರು ಎಂಎಸ್‌ಆರ್‌ಐಟಿಯಿಂದ ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಬಿ.ಇ. ಪದವಿ ಪಡೆದಿದ್ದಾರೆ. 2006ರಿಂದ ದೆಹಲಿಯಲ್ಲಿ ವಾಸವಾಗಿದ್ದಾರೆ, ಡಾ. ಸುಧಾ ಮೂರ್ತಿ, ಅನಿಲ್ ಕುಂಬ್ಳೆ, ನಟ ಚಿರಂಜೀವಿ, ಅರುಣಾಚಲ ಪ್ರದೇಶದ ಮಾಜಿ ಸಿಎಂ ಮುಂತಾದವರಿಗೆ ಒಳಾಂಗಣ ವಿನ್ಯಾಸ ಕೆಲಸ ಮಾಡಿಕೊಟ್ಟ ಅನುಭವ ಇವರಿಗಿದೆ. ಅನೇಕ ಸಂಸ್ಥೆಗಳ ಭಾಗವಾಗಿದ್ದಾರೆ, ಮೇನಕಾ ಗಾಂಧಿ ಅವರೊಂದಿಗೆ ಸಾಕುಪ್ರಾಣಿಗಳ ಬಗ್ಗೆ ನಿಕಟವಾಗಿ ಕೆಲಸ ಮಾಡುವ ಹಾಗು ಅಂಧ ಮಕ್ಕಳ ಶಾಲೆಯ ಹುಡುಗಿಯರಿಗಾಗಿ ಸಹಾಯ ಮಾಡುವ ಅಭಿಯಾನಗಳಲ್ಲಿ ಭಾಗಿಯಾಗಿದ್ದಾರೆ. ಬ್ರಿಟನ್‌ನ ದಿವಂಗತ ರಾಜಕುಮಾರಿ ಲೇಡಿ ಡಯಾನಾ ಅವರ ಭಾರತದಲ್ಲಿ "ಶಾಂತಿಯ ಬೇರುಗಳು", ಪರಂಪರೆಯ ಪ್ರತಿನಿಧಿಯಾಗಿ ಕೆಲಸ ಮಾಡಿದ್ದಾರೆ, ಅನೇಕ ಹೊರ ದೇಶಗಳಿಗೆ ಭೇಟಿ ನೀಡಿದ್ದಾರೆ. ಪ್ರಸ್ತುತ ಬಹುತೇಕ ಎಲ್ಲಾ ರಾಯಭಾರ ಕಚೇರಿಗಳೊಂದಿಗೆ ಶಾಂತಿಯ ಸಂದೇಶವಾಹಕಳಾಗಿ ಸಂಪರ್ಕ ಹೊಂದಿದ್ದಾರೆ ಮತ್ತು ಭಾರತದ ಅತೀ ದೊಡ್ಡ ವೈನ್ ಕ್ಲಬ್‌ನ ಅಧ್ಯಾಯದ ಮುಖ್ಯಸ್ಥರಾಗಿದ್ದಾರೆ.

ಇವರ ಸಾಧನೆಗಳು : ಜನರ ದೊಡ್ಡ ಸಂಪತ್ತನ್ನು ಸೃಷ್ಟಿಸಿರುವುದು, 2024 ರ ವುಮನ್ ಎಕ್ಸಲೆನ್ಸ್ ಪ್ರಶಸ್ತಿಯನ್ನು ಪಡೆದಿರುವುದು, IKC ಕಾನ್ಫರೆನ್ಸ್‌ನಲ್ಲಿ ಏಕೈಕ ಮಹಿಳಾ ಸ್ಪೀಕರ್ ಆಗಿ ಉಪನ್ಯಾಸ ನೀಡಿದ್ದು. ತಮ್ಮ ಸಹೋದರಿಯೊಂದಿಗೆ ಶಿಕ್ಷಣಕ್ಕಾಗಿ Connect Overseas ಎಂಬ ಕಂಪನಿಯನ್ನು ಪ್ರಾರಂಭಿಸಿದ್ದಾರೆ, ಸಂಗೀತದ ಮೂಲಕ ಜೀವನದ ಒತ್ತಡವನ್ನು ನಿಭಾಯಿಸಲು AI ಕಂಪನಿಯೊಂದಿಗೆ ಸಹಯೋಗ ನೀಡಿದ್ದಾರೆ. 7 ಸ್ಟಾರ್ಟ್‌ಅಪ್‌ಗಳಲ್ಲಿ ಇದೂ ಒಂದು ಎಂದು ಯಾರ್ಕ್‌ಷೈರ್ ಪತ್ರಿಕೆಯಲ್ಲಿ ಗುರುತಿಸಲ್ಪಟ್ಟಿದೆ. ದ್ವಿಪಕ್ಷೀಯ ವ್ಯಾಪಾರಕ್ಕೆ ಸಂಬಂಧಿಸಿದ ಕಾರ್ಯಗಳಲ್ಲಿ ಕೆಲಸ ಮಾಡಿದ್ದಾರೆ. Safe Interior ಕುರಿತು ಕೆಲಸ ಮಾಡಲು 'ನಿರ್ವಾಣ' ಎಂಬ ಸೋದರಿ ಕಂಪನಿಯನ್ನು ಪ್ರಾರಂಭಿಸಿದ್ದಾರೆ. ಆಸಕ್ತಿದಾಯಕ ವಿಷಯಗಳಲ್ಲಿ ಸಮಾನಮನಸ್ಕ ಪ್ರಸ್ತುತ ಸ್ನೇಹಾ ಅಸೋಸಿಯೇಷನ್‌ನ ಮಹಿಳೆಯರ ಜೊತೆಗಿನ ಒಡನಾಟ ಮತ್ತು ಸಾಮಾಜಿಕ ಕೆಲಸಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿದ್ದಾರೆ. ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸ ಮಾಡಲು ಸಹಕರಿಸುತ್ತಿದ್ದಾರೆ. ಪ್ರಾಣಿಗಳ ಮೇಲೆ ದಯೆ ಹೊಂದಿರುವ ಮತ್ತು ಪರಿಸರ ಪ್ರೇಮಿಯಾಗಿರುವ ಇವರು ಅನೇಕ ಪ್ರಶಸ್ತಿಗಳು/ಮನ್ನಣೆಗಳಿಗೆ ಭಾಜನರಾಗಿದ್ದಾರೆ.



ಪ್ರತಿಭಾವಂತೆ ಸಿವಿಲ್ ಇಂಜಿನಿಯರ್ ಶುಷ್ಮಾ ಬಿ. ರಾವ್ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು!




ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯದ ವಿಜ್ಞಾನಿ ಡಾ. ಎಂ.ಎಸ್. ಶಶಿಕುಮಾರ್ ಅವರು 16.02.2024 ರಂದು ನವದೆಹಲಿಯ ಡಾ. ಅಂಬೇಡ್ಕರ್ ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ ಪಿಎಚ್‌ಡಿ ಚೇಂಬರ್ ಆಫ್ ಕಾಮರ್ಸ್ ಮತ್ತು ಇಂಡಸ್ಟ್ರಿ ಆಯೋಜಿಸಿದ 'ಭಾರತ್ ಸ್ಟಾರ್ಟ್–ಅಪ್ ಮತ್ತು ಎಂಎಸ್‌ಎಂಇ ಶೃಂಗ ಸಭೆ'ಯಲ್ಲಿ ಮುಖ್ಯ ಭಾಷಣಕಾರಾಗಿ ಭಾಗವಹಿಸಿದ್ದರು. ಅವರು ಭಾರತ ಸರ್ಕಾರದ ವಿವಿಧ ಯೋಜನೆಗಳ ಹಾಗು ಸ್ಟಾರ್ಟ್–ಅಪ್‌ಗಳು ಮತ್ತು ಎಂಎಸ್‌ಎಂಇಗಳ ಬೆಂಬಲಕ್ಕಾಗಿ ಭಾರತದ ಉಪಕ್ರಮಗಳ ಬಗ್ಗೆ ವಿವರಿಸುತ್ತಾ "ಎಂಎಸ್‌ಎಂಇಗಳು ಮತ್ತು ಸ್ಟಾರ್ಟ್‌ಅಪ್‌ಗಳಿಗೆ ತಾಂತ್ರಿಕ ಅಭಿವೃದ್ಧಿ ಮತ್ತು ಮಾರುಕಟ್ಟೆ ಬೆಳವಣಿಗೆಗಾಗಿ ಆವಿಷ್ಕಾರಗಳು" ಎಂಬ ವಿಷಯದ ಕುರಿತು ಮಾತನಾಡಿದರು.

ಅಧಿವೇಶನದಲ್ಲಿ ಉಪಸ್ಥಿತರಿದ್ದ ಇತರ ಕೆಲವು ಪ್ರಮುಖ ಭಾಷಣಕಾರರಲ್ಲಿ ಶ್ರೀ ಪ್ರಶಾಂತ್ ಸಿಂಗ್, IAS, CEO-GEM, ಭಾರತ ಸರ್ಕಾರ, ಡಾ. ರಾಜೀವ್ ಶೋರೆ, CEO ಕ್ವೀನ್ಸ್‌ಲ್ಯಾಂಡ್‌ನ ವಿಶ್ವವಿದ್ಯಾನಿಲಯ ಮತ್ತು IIT ದೆಹಲಿಯ ಅಕಾಡೆಮಿ ಆಫ್ ರಿಸರ್ಚ್, ಡಾ. ಆರ್.ಕೆ. ಭಾರತಿ, ಜಂಟಿ ನಿರ್ದೇಶಕರು, MSME-DFO, ಡಾ. ಎಚ್.ಪಿ. ಕುಮಾರ್, CMD, NSIC, ಶ್ರೀ ಅಶ್ವಿನ್ ಕುಮಾರ್ ವಾಸ್ನಿಕ್, ನೀತಿ ಆಯೋಗ ಮತ್ತು ಡಾ. ಆಕಾಂಶಾ ಜೈನ್, NRDC ಅವರು ತಮ್ಮ ವಿಚಾರಗಳನ್ನು ಹಂಚಿಕೊಂಡರು.

ಕಾರ್ಯಕ್ರಮದ ನಂತರ ಮುಖ್ಯ ಅತಿಥಿಗಳಿಗೆ ಮತ್ತು ಭಾಷಣಕಾರರಿಗೆ ಗೌರವ ಸಮರ್ಪಣೆ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಕರ್ನಾಟಕ ಸಂಘದ ಮಾಜಿ ಉಪಾಧ್ಯಕ್ಷರೂ ಮತ್ತು ವಿಜ್ಞಾನಿಗಳಾದ ಹೆಮ್ಮೆಯ ದೆಹಲಿ ಕನ್ನಡಿಗ ಡಾ. ಎಂ.ಎಸ್. ಶಶಿಕುಮಾರ್ ಅವರಿಗೆ ಹಾರ್ದಿಕ ಅಭಿನಂದನೆಗಳು!


ಉಪಾಧ್ಯಾಯ'ಸ್ ಚಂದನ

**ನವದೆಹಲಿ ಕರ್ನಾಟಕ ಸಂಘದ ಎಲ್ಲಾ ಗೌರವಾನ್ವಿತ ಸದಸ್ಯರಲ್ಲಿ ಮನವಿ–**

ಕುಂದಾಪುರ ತಾಲೂಕು ಆನೆಗುಡ್ಡೆ ಉಪಾಧ್ಯಾಯ ಇಂಡಸ್ಟ್ರೀಸ್ ಇವರ "ಚಂದನ" ಬ್ರಾಂಡ್ ಹೆಸರಿನ ಸುಪ್ರಸಿದ್ಧ ಉತ್ಪನ್ನ ನಿಮ್ಮ ಮನೆಗೆ ತಲುಪಿಸುವ ವ್ಯವಸ್ಥೆ ಮಾಡುತ್ತಿದ್ದೇವೆ.

**ಚಂದನ ಬ್ರಾಂಡ್ ಹೆಸರಿನಲ್ಲಿ ಸಾರಿನ ಪುಡಿ, ಪುಳಿಯೋಗರೆ ಪುಡಿ, ಬಿಸಿಬೇಳೆಬಾತ್ ಪುಡಿ ಅಲ್ಲದೆ ನಿಮಗೆ ಬೇಕಾದ ಇನ್ನೂ ಹತ್ತಾರು ಬಗೆಯ ಪುಡಿಗಳು ಹಾಗೂ ಎಲ್ಲಾ ಬಗೆಯ ಹಪ್ಪಳ, ಸಂಡಿಗೆ, ಅಪ್ಪೆ ಮಿಡಿ ಅಲ್ಲದೆ ಇತರೆ ಉಪ್ಪಿನಕಾಯಿ ದೊರೆಯುತ್ತದೆ.**

ನಿಮಗೆ ನಮ್ಮ ಎಲ್ಲ ಉತ್ಪನ್ನಗಳ ವಿವರ, ಬೆಲೆ, ಕೆಟಲಾಗ್ ಬೇಕಾದಲ್ಲಿ, ನಿಮ್ಮ ಹೆಸರು, ವಾಟ್ಸಪ್ಪ್ ನಂಬರ್ ನಮಗೆ ತಿಳಿಸಿದರೆ ಕೂಡಲೇ ನಿಮ್ಮ ವಾಟ್ಸಪ್ಪ್‌ಗೆ ಎಲ್ಲಾ ವಿವರ ಕಳಿಸುತ್ತೇವೆ.

ನಿಮಗೆ ಬೇಕಾದ ಐಟಂ ಸ್ಪೀಡ್ ಪೋಸ್ಟ್ ಮೂಲಕ ಕಳಿಸುತ್ತೇವೆ.

ನಿಮಗೆ ಐಟಂ ತಲುಪಿದ ನಂತರ ಹಣ ಕಳಿಸಿದರೆ ಸಾಕು.

ನಿಮ್ಮ ಆರ್ಡರ್ ಮತ್ತು ವಿವರಕ್ಕೆ ಸಂಪರ್ಕಿಸಿ :
ಪತ್ರಕರ್ತ **ನಾಗೇಶ ಚಡಗ**
ವಾಟ್ಸಪ್ಪ್ : 9844746851
ಮೊಬೈಲ್ : 9844966864 / 9844746851
ವಂದನೆಗಳು.

**ಆನೆಗುಡ್ಡೆ ಉಪಾಧ್ಯಾಯ ಇಂಡಸ್ಟ್ರೀಸ್**
ಕುಂಭಾಸಿ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ.
ಕರ್ನಾಟಕ 576257

**ಗಮನಿಸಿ : ದೆಹಲಿಯಲ್ಲಿ ಮಾರ್ಕೆಟಿಂಗ್ ಪ್ರತಿನಿಧಿಗಳು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಲು ಕೋರಲಾಗಿದೆ.**

## ಸಂಘದ ಅಮೃತ ಮಹೋತ್ಸವ ಸಂಭ್ರಮಾಚರಣೆಯ ಅಂಗವಾಗಿ ಆಯೋಜನೆಗೊಂಡ ವಿವಿಧ ಜಿಲ್ಲಾವಾರು ಸಾಂಸ್ಕೃತಿಕ ಉತ್ಸವಗಳ ಸವಿನೆನಪಿನ ದೃಶ್ಯ ಸಂಭ್ರಮ


ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸಾಂಸ್ಕೃತಿಕ ಉತ್ಸವ


ಕಿತ್ತೂರು ಕರ್ನಾಟಕ ಜಿಲ್ಲೆಗಳ ಸಾಂಸ್ಕೃತಿಕ ಉತ್ಸವ


ಕಲ್ಯಾಣ ಕರ್ನಾಟಕ ಜಿಲ್ಲೆಗಳ ಸಾಂಸ್ಕೃತಿಕ ಉತ್ಸವ


ಕರಾವಳಿ ಜಿಲ್ಲಾ ಸಾಂಸ್ಕೃತಿಕ ಉತ್ಸವ


ಮೈಸೂರು, ಕೊಡಗು ಮತ್ತು ಚಾಮರಾಜನಗರ ಜಿಲ್ಲೆಗಳ ಸಾಂಸ್ಕೃತಿಕ ಉತ್ಸವ


ಅಖಂಡ ಬೆಂಗಳೂರು ಸಾಂಸ್ಕೃತಿಕ ಉತ್ಸವ


ಮಲೆನಾಡು ಜಿಲ್ಲೆಗಳ ಸಾಂಸ್ಕೃತಿಕ ಉತ್ಸವ


ಮಂಡ್ಯ, ಹಾಸನ, ತುಮಕೂರು ಜಿಲ್ಲೆಗಳ ಸಾಂಸ್ಕೃತಿಕ ಉತ್ಸವ

ಕಳೆದ ವರ್ಷ ಫೆಬ್ರವರಿ 25 ಮತ್ತು 26, 2023 ರಂದು ನವದೆಹಲಿಯ ತಾಲ್ಕಟೋರಾ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜನೆಗೊಂಡ 'ಬಾರಿಸು ಕನ್ನಡ ಡಿಂಡಿಮವ'- ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವದಲ್ಲಿ ಪ್ರದರ್ಶನಗೊಂಡಿದ್ದ ಸಂಭ್ರಮದ ಸಾಂಸ್ಕೃತಿಕ ಕಾರ್ಯಕ್ರಮಗಳ ಸವಿ ನೆನಪುಗಳ ದೃಶ್ಯಾವಳಿ














Delhi Karnataka Sangha Abhimata
Mar -2024, Vol. No.34, Issue No. 6, Price Rs.1/-
RNI Regn. No. 53405/91, DL-SW-01/4016/22-24
Date of Publication : Mar 8th / 9th, Posting Date : 10th / 11th, Total Pages-24 Monthly-Language Kannada, POSTED AT RMS DELHI-110006
Printed & Published by Radhakrishna, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: K.Sreenivasa Murthy



ವರ್ಷದ
ಹಿಂದೆ 25.02.2023
ರಂದು ಪ್ರಧಾನಿ
ಶ್ರೀ ನರೇಂದ್ರ ಮೋದಿ ಅವರು
ಭಾಗವಹಿಸಿದ ದೆಹಲಿ ಕರ್ನಾಟಕ
ಸಂಘದ ಅಮೃತ ಮಹೋತ್ಸವ
ಸಮಾರೋಪ ಸಮಾರಂಭದ ಅಮೃತ
ಕ್ಷಣಗಳ ಸವಿನೆನಪಿನ
ದೃಶ್ಯಗಳು.





